ಐಕ್ಯರಂಗ

ಸಂಪುಟ 19 ಸಂಚಿಕೆ 52

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಡಿಸೆಂಬರ್ 22-28, 1997 ಬೆಲೆ ರೂ. 2.00



ಮುಂಬರುವ ಚುನಾವಣೆಗಳಲ್ಲಿ ಸಂಯುಕ್ತ ರಂಗದ ಬಲವರ್ಧನೆ

ಪ್ರಕಾಶ್ ಕಾರಟ್

ಕಾಂಗ್ರೆಸ್ ದೇಶದ ಮೇಲೆ ಹೇರಿರುವ ಮುಂಬರುವ ಲೋಕಸಭಾ ಚುನಾವಣೆಗಳಲ್ಲಿ ಸಂಯುಕ್ತ ರಂಗ ಹಿಂದಿಗಿಂತಲೂ ಬಹಳ ದೊಡ್ಡ ಶಕ್ತಿಯಾಗಿ ಮೂಡಿ ಬರಲಿದೆ. ಇದಕ್ಕೆ ಕಾರಣ ಅದರ 18 ತಿಂಗಳ ಒಕ್ಕೂಟವಾದದ ಪರವಾದ, ಜನ-ಪರವಾದ ಆಡಳಿತ ದಾಖಲೆ. ಕೇಂದ್ರದಲ್ಲಿ ಒಂದಾದಮೇಲೊಂದರಂತೆ ಆಳಿದ 'ಸ್ಥಿರ' ಕಾಂಗ್ರೆಸ್ ಸರ್ಕಾರಗಳು ಅನುಸರಿಸಿದ ಜನ-ವಿರೋಧಿ, ಅನೀತಿಯುತ ಧೋರಣೆಗಳಿಗಿಂತ ತೀವ್ರವಾಗಿ ಭಿನ್ನವಾದ ಧೋರಣೆಗಳನ್ನು ಸಂಯುಕ್ತ ರಂಗ ಸರ್ಕಾರ ಅನುಸರಿಸಿತು. ಹೀಗೆಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯರಾದ ಪ್ರಕಾಶ್ ಕಾರಟ್‌ರವರು ಅಗರ್ತಲಾದಲ್ಲಿ ಹೇಳಿದ್ದಾರೆ. ತ್ರಿಪುರಾ ಸಿಪಿಐ(ಎಂ) ರಾಜ್ಯ ಸಮ್ಮೇಳನದಲ್ಲಿ ಭಾಗವಹಿಸಲು ಬಂದಿದ್ದ ಅವರು ನವದೆಹಲಿಗೆ ತೆರಳುವ ಮೊದಲು ಪತ್ರಕರ್ತರೊಡನೆ ಮಾತನಾಡುತ್ತಾ ಹೀಗೆ ಅಭಿಪ್ರಾಯ ಪಟ್ಟಿದ್ದಾರೆ.

ತ್ರಿಪುರಾದ ಮುಂಬರುವ ವಿಧಾನ ಸಭಾ ಚುನಾವಣೆಗಳಲ್ಲಿ ಸಿಪಿಐ(ಎಂ) ನಾಲ್ಕನೇ ಬಾರಿಗೆ ಭಾರಿ ಬಹುಮತದಿಂದ ಗೆದ್ದು ಬರುತ್ತದೆ ಎಂದೂ ಅವರು ವಿಶ್ವಾಸ ವ್ಯಕ್ತಪಡಿಸಿದರು. ರಾಷ್ಟ್ರೀಯ ರಾಜಕಾರಣದ ಬಗ್ಗೆ ಮಾತನಾಡುತ್ತಾ ಅವರು ವಂಚಕ ಹಾಗೂ ಅಧಿಕಾರಶಾಹಿ ಕಾಂಗ್ರೆಸ್ ದೇಶದ ಮೇಲೆ ಹೇರಿರುವ ಇದಕ್ಕೆ ತಕ್ಕ ದುಷ್ಫಲ ಪಡೆಯಲಿದೆ ಎಂದರು. ಏಕೆಂದರೆ ಅದರ ಬೆಂಬಲ ನೆಲೆ ತ್ವರಿತವಾಗಿ ಹ್ರಾಸಗೊಳ್ಳುತ್ತಿದೆ. ಇನ್ನೊಂದೆಡೆ ಸಂಯುಕ್ತ ರಂಗ ಒಗ್ಗಟ್ಟಿನಿಂದಿರುವ ಸಾಮರ್ಥ್ಯ ತನಗಿದೆ ಎಂದು ತೋರಿಸಿಕೊಟ್ಟಿದೆ. ಅದರ 18 ತಿಂಗಳ ಆಳ್ವಿಕೆ ಜನಗಳ ನಡುವೆ ಅದರ ಜನಪ್ರಿಯತೆಯನ್ನು ಹೆಚ್ಚಿಸಿದೆ ಎಂದು ಪ್ರಕಾಶ್ ಕಾರಟ್ ಹೇಳಿದ್ದಾರೆ.

'ಸ್ಥಿರತೆ' ಯ ಪ್ರಚಾರದ ಬಗ್ಗೆ ಮಾತನಾಡುತ್ತಾ ಐದು ವರ್ಷಗಳ 'ಸ್ಥಿರ' ಸರ್ಕಾರ ನೀಡಿದರೂ ನರಸಿಂಹರಾಯರ ನೇತೃತ್ವದ ಕಾಂಗ್ರೆಸ್(ಐ) 1996 ರ ಚುನಾವಣೆಗಳಲ್ಲಿ ಸಾಕಷ್ಟು ಬೆಂಬಲ ಗಳಿಸುವಲ್ಲಿ ಶೋಚನೀಯ ಸೋಲನ್ನೇಕೆ ಅನುಭವಿಸಿತು ಎಂದು ಅವರು ಪ್ರಶ್ನಿಸಿದರು.

ಚುನಾವಣೆಯ ಮೊದಲೇ ಒಬ್ಬ ಪ್ರಧಾನ ಮಂತ್ರಿಗಳನ್ನು ಮುಂದಿಡುವ ಬಿಜೆಪಿಯ ತಂತ್ರಗಳ ಬಗ್ಗೆ ಹೇಳುತ್ತಾ ಇಂತಹ ತಂತ್ರಗಳು ಹಿಂದೆಂದೂ ಫಲ ನೀಡಿಲ್ಲ. ಭವಿಷ್ಯದಲ್ಲೂ ವಿಫಲವಾಗುತ್ತದೆ ಎಂದು ಹೇಳಿದ ಪ್ರಕಾಶ್ ಕಾರಟ್ ಸಂಯುಕ್ತ ರಂಗ ಗೆದ್ದರೆ ಸಂಯುಕ್ತ ರಂಗದ ಸಂಸದೀಯ ಪಕ್ಷದ ಮುಖಂಡನನ್ನು ಆರಿಸುವುದು ಕಷ್ಟದ ಕಲಸವಲ್ಲ, ಅದೊಂದು ವಿಳಂಬದ ಪ್ರಕ್ರಿಯೆಯೂ ಆಗುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಸತತವಾಗಿ 1989, 1991 ರ ಚುನಾವಣೆಗಳಲ್ಲಿ ಕಾಂಗ್ರೆಸ್ಸಿನ ಸದಸ್ಯ ಸಂಖ್ಯೆ ಇಳಿಮುಖವಾಗುತ್ತಿದ್ದು ಅದು ವಿಘಟನೆಯ ವೇಗದ ಹಾದಿಯಲ್ಲಿದೆಯಾದ್ದರಿಂದ ಈ ಚುನಾವಣೆಗಳಲ್ಲಿ ನಿಜವಾದ ಸ್ಪರ್ಧೆಯಿರುವುದು ಸಂಯುಕ್ತ ರಂಗ ಮತ್ತು ಬಿಜೆಪಿಯ ನಡುವೆ, ಕೆಲವೆಡೆ ಮಾತ್ರವೇ ಕಾಂಗ್ರೆಸ್ ಮತ್ತು ಸಂಯುಕ್ತ ರಂಗದ ನಡುವೆ ಚುನಾವಣಾ ಸಮರ ನಡೆಯಬಹುದು. ಪ್ರಕಾಶ್ ಕಾರಟ್ ಉತ್ತರ ಪ್ರದೇಶದ ಉದಾಹರಣೆ ನೀಡುತ್ತಾ ಕಾಂಗ್ರೆಸ್ಸಿಗೆ ಅಲ್ಲಿ ಕಳೆದ ಲೋಕಸಭಾ ಚುನಾವಣೆಗಳಲ್ಲಿ ದೊರೆತದ್ದು ಕೇವಲ 5.8% ಮತಗಳು ಎಂದು ನೆನಪಿಸಿದರು. ಆದ್ದರಿಂದ ಸಂಯುಕ್ತ ರಂಗ ಬಿಜೆಪಿಯ ವಿರುದ್ಧ ತನ್ನೆಲ್ಲಾ ಶಕ್ತಿಯನ್ನು ಹರಿತಗೊಳಿಸಿ ಆ ರಾಜ್ಯದಲ್ಲಿ ಕೋಮವಾದಿ ಶಕ್ತಿಗಳ ಮೇಲೆ ಕಡಿವಾಣ ಹಾಕಬೇಕು ಎಂದು ಅವರು ಹೇಳಿದರು.

ಸಂಯುಕ್ತ ರಂಗದ ಚುನಾವಣಾ ಸಾಧನೆಗಳ ಬಗ್ಗೆ ತನ್ನ ಆಶಾವಾದಕ್ಕೆ ಆಧಾರವಾಗಿ ಅವರು ಸಂಯುಕ್ತ ರಂಗ ಸರಕಾರ ಈಶಾನ್ಯ ಭಾರತ ಹಾಗೂ ದೇಶದ ಇತರ ಭಾಗಗಳ ಬಗ್ಗೆ ತೋರ್ಪಡಿಸಿದ ನವೀನವಾದ ಸಕಾರಾತ್ಮಕವಾದ ನಿಲುವನ್ನು ಉದಾಹರಿಸಿದರು. ಅಲ್ಲದೆ ವಿದೇಶಾಂಗ ಧೋರಣೆಯಲ್ಲೂ ಅದು ಗಮನಾರ್ಹ ಯಶಸ್ಸು ಸಾಧಿಸಿದೆ. ಈ ಸಕಾರಾತ್ಮಕ ಸಾಧನೆಯ ಪಟ್ಟಿಯೊಂದಿಗೆ ಎಡ, ಪ್ರಜಾಸತ್ತಾತ್ಮಕ ಹಾಗೂ ಜಾತ್ಯಾತೀತ ಶಕ್ತಿಗಳು ತಮ್ಮನ್ನು ಕ್ರೋಢೀಕರಿಸಿಕೊಂಡು ಕೇಂದ್ರದಲ್ಲಿ ಮುಂದಿನ ಸರಕಾರ ರಚಿಸುವಲ್ಲಿ ಕಾಂಗ್ರೆಸ್ ಬೆಂಬಲದ ಅಗತ್ಯವಿಲ್ಲದಂತೆ ಮಾಡಬೇಕು ಎಂದು ಅವರು ಸಲಹೆ ನೀಡಿದರು.

ಸಿಪಿಐ(ಎಂ) ಕೇಂದ್ರ ಸಮಿತಿ ಡಿಸೆಂಬರ್ 20 ಹಾಗೂ 21 ರಂದು ಕಲ್ಕತ್ತೆಯಲ್ಲಿ ಸಭೆ ಸೇರಲಿದ್ದು ಸಿಪಿಐ(ಎಂ) ತನ್ನ ಚುನಾವಣಾ ಕಾರ್ಯನೀತಿಯನ್ನು ನಿರ್ಧರಿಸಲಿದೆ ಎಂದು ಅವರು ಹೇಳಿದರು.

(ಐಎನ್‌ಎಸ್)

"ರಾಜ್ಯದಲ್ಲಿ ಎಡ, ಜಾತ್ಯಾತೀತ, ಪ್ರಜಾಪ್ರಭುತ್ವವಾದಿ ಶಕ್ತಿಗಳನ್ನು ಬಲಪಡಿಸಬೇಕು"

ಸಿ.ಪಿ.ಐ.(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಕರೆ

ಕಾಂಗ್ರೆಸ್‌ನ ಕುತಂತ್ರ ಹಾಗೂ ಬಿ.ಜೆ.ಪಿ. ಪಕ್ಷಾಂತರ, ಭ್ರಷ್ಟಾಚಾರದ ಮೂಲಕ ಅಧಿಕಾರಕ್ಕೆ ಬರಲು ಪ್ರಯತ್ನಿಸಿ ವಿಫಲವಾದ ಪರಿಸ್ಥಿತಿಯಲ್ಲಿ ಲೋಕಸಭೆ ವಿಸರ್ಜನೆಗೊಂಡು 1988 ಫೆಬ್ರವರಿ-ಮಾರ್ಚ್ ತಿಂಗಳಲ್ಲಿ ಚುವಾವಣೆ ನಡೆಯಲಿದೆ. ಕರ್ನಾಟಕದಲ್ಲಿ ಇದೇ ತಿಂಗಳು ಡಿಸೆಂಬರ್ 29ರಂದು ವಿಧಾನ ಪರಿಷತ್ತಿನ 25 ಸ್ಥಾನಗಳಿಗೆ ಚುನಾವಣೆ ನಡೆಯಲಿದ್ದು ಸ್ಥಳೀಯ ಸಂಸ್ಥೆಗಳ 80,000ಕ್ಕೂ ಹೆಚ್ಚು ಜನ ಪ್ರತಿನಿಧಿಗಳು ಚುನಾವಣೆ ಮತದಾನದಲ್ಲಿ ಭಾಗವಹಿಸಲಿದ್ದಾರೆ.

ಈ ಚುನಾವಣೆಯಲ್ಲಿ ಭ್ರಷ್ಟ ಕಾಂಗ್ರೆಸ್(ಐ) ಮತ್ತು ಕೋಮುವಾದಿ ಬಿ.ಜೆ.ಪಿ. ಅಭ್ಯರ್ಥಿಗಳನ್ನು ಸೋಲಿಸಲು ಸಿ.ಪಿ.ಐ.(ಎಂ) ಕಾರ್ಯದರ್ಶಿ ಮಂಡಳಿ ನಿರ್ಧರಿಸಿದೆ ಎಂದು ಪತ್ರಿಕಾಗೋಷ್ಠಿಯೊಂದರಲ್ಲಿ ಸಿ.ಪಿ.ಐ.(ಎಂ)ನ ಮುಖಂಡರಾದ ಎಸ್. ಸೂರ್ಯನಾರಾಯಣ ರಾವ್ ಹಾಗೂ ಜಿ.ವಿ. ಶ್ರೀರಾಮರೆಡ್ಡಿಯವರು ಹೇಳಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ ನೇತೃತ್ವದ ಲೋಕಶಕ್ತಿ ಹಾಗೂ ಶ್ರೀ ಬಂಗಾರಪ್ಪನವರ ನೇತೃತ್ವದ ಕರ್ನಾಟಕ ವಿಕಾಸ ಪಕ್ಷವೂ ಕೆಲವು ಸ್ಥಾನಗಳಿಗೆ ಸ್ಪರ್ಧಿಸಿವೆ. ಆದರೆ ಈ ಎರಡು ಪಕ್ಷಗಳ ಮುಖಂಡರು ಯಾವುದೇ ಧೋರಣಾತ್ಮಕ ನಿಲುವನ್ನು ತೆಗೆದುಕೊಂಡಿಲ್ಲ. ಬದಲಾಗಿ ಮತೀಯವಾದಿ ಬಿ.ಜೆ.ಪಿ.ಯೊಂದಿಗೆ ಕೈ ಜೋಡಿಸಲು ಅವರ ವಿರೋಧವಿಲ್ಲ ಎಂಬರ್ಥದ ಹೇಳಿಕೆಗಳು ಪತ್ರಿಕೆಗಳಲ್ಲಿ ವರದಿಯಾಗಿವೆ. ರಾಮಕೃಷ್ಣ ಹೆಗ್ಗಡೆಯವರು ಕಾಂಗ್ರೆಸ್‌ನೊಂದಿಗೂ ಹೊಂದಾಣಿಕೆ ಮಾಡಿಕೊಳ್ಳವುದನ್ನು ಅಲ್ಲಗಳೆಯುವಂತಿಲ್ಲ. ಆದ್ದರಿಂದ ಲೋಕಶಕ್ತಿ ಮತ್ತು ಕರ್ನಾಟಕ ವಿಕಾಸ ಪಕ್ಷದ ಅಭ್ಯರ್ಥಿಗಳಿಗೆ ಬೆಂಬಲ ನೀಡದಿರಲು ಸಿ.ಪಿ.ಐ.(ಎಂ) ನಿರ್ಧರಿಸಿದೆ.

ಸಂಯುಕ್ತ ರಂಗದ ಅಂಗ ಪಕ್ಷವಾದ ಜನತಾ ದಳ 21 ಸ್ಥಾನಗಳಿಗೆ ಸ್ಪರ್ಧಿಸಿದೆ ಎಂದು ಸೂರ್ಯನಾರಾಯಣರಾವ್ ಹೇಳಿದರು.

ದೇಶದಲ್ಲಿ ಮತ್ತು ಕರ್ನಾಟಕ ರಾಜ್ಯದಲ್ಲಿ ಎಡ-ಜಾತ್ಯಾತೀತ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಇನ್ನಷ್ಟು ಬಲಗೊಳಿಸುವ ದೃಷ್ಟಿಯಿಂದ ವಿಧಾನಪರಿಷತ್ತಿಗೆ ನಡೆಯುವ ಚುನಾವಣೆಗೆ ಜನತಾದಳದ ಎಲ್ಲಾ ಅಭ್ಯರ್ಥಿಗಳನ್ನು ಗೆಲ್ಲಿಸಲು ಶ್ರಮವಹಿಸಬೇಕೆಂದು ಸಿ.ಪಿ.ಐ.(ಎಂ) ನಿರ್ಧರಿಸಿದೆ.

ಪಕ್ಷದ 16ನೇ ರಾಜ್ಯ ಸಮ್ಮೇಳನ-ಕೋಲಾರದಲ್ಲಿ

ಪಕ್ಷದ 16ನೇ ರಾಜ್ಯ ಸಮ್ಮೇಳನವು ಕೋಲಾರ ನಗರದಲ್ಲಿ ಡಿಸೆಂಬರ್ 3031 ಮತ್ತು ಜನವರಿ 1,2 ರಂದು ನಡೆಯಲಿದೆ. ಕೇರಳದ ಜನಪ್ರಿಯ ಮುಖ್ಯಮಂತ್ರಿ 'ಹಾಗೂ ಸಿ.ಪಿ.ಐ.(ಎಂ)ನ ಪೊಲಿಟ್ ಬ್ಯೂರೋ ಸದಸ್ಯ ಇ.ಕೆ. ನಾಯನಾರ್ ಡಿಸೆಂಬರ್ 30ರಂದು ನಡೆಯುವ ಬಹಿರಂಗ ಸಭೆಯನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ಸಿ.ಐ.ಟಿ.ಯು. ಅಖಿಲ ಭಾರತ ಅಧ್ಯಕ್ಷ ಹಾಗೂ ಸಿ.ಪಿ.ಐ.(ಎಂ)ನ ಪೊಲಿಟ್ ಬ್ಯೂರೋ ಸದಸ್ಯ ಇ. ಬಾಲಾನಂದನ್ ಮತ್ತು ಪಿ.ರಾಮಚಂದ್ರನ್ ರಾಜ್ಯ ಸಿ.ಐ.ಟಿ.ಯು ಅಧ್ಯಕ್ಷ ಹಾಗೂ ಸಿ.ಪಿ.ಐ.(ಎಂ)ನ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎಸ್. ಸೂರ್ಯನಾರಾಯಣರಾವ್ ಮಾತನಾಡಲಿದ್ದಾರೆ. ಬಾಗೇಪಲ್ಲಿ ಶಾಸಕ ಹಾಗೂ ಪಕ್ಷದ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಶ್ರೀರಾಮರೆಡ್ಡಿ ಅಧ್ಯಕ್ಷತೆ ವಹಿಸಲಿದ್ದಾರೆ.

ಇಂದಿನ ಪ್ರಮುಖ ಹಾಗೂ ಕ್ಷಿಪ್ರ ರಾಜಕೀಯ ಬೆಳವಣಿಗೆಯ ಹಿನ್ನೆಲೆಯಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಸಮ್ಮೇಳನಗಳನ್ನು ಜರುಗಿಸಿ ಆಯ್ಕೆಯಾಗಿ ಬಂದ ಪ್ರತಿನಿಧಿಗಳು ಮುಂದಿನ ಲೋಕಸಭಾ ಚುನಾವಣೆಯಲ್ಲಿ ಪಕ್ಷ ನಿರ್ವಹಿಸಬೇಕಾದ ಪಾತ್ರ, ರಾಜ್ಯ ಜನತಾದಳ ಸರ್ಕಾರದ ಸಾಧಕ ಬಾಧಕಗಳು, ದುರ್ಬಲವಾಗಿರುವ ಎಡ ಶಕ್ತಿಗಳನ್ನು ಬಲಪಡಿಸುವ ಬಗ್ಗೆ ರೈತರ, ಕಾರ್ಮಿಕರ, ಕೃಷಿಕೂಲಿಕಾರರ, ಜನಸಾಮಾನ್ಯರ ಸ್ಥಿತಿಗತಿಗಳನ್ನು ಉತ್ತಮ ಪಡಿಸಲು ಬೇಕಾದ ಕ್ರಮಗಳು, ದಲಿತರು ಅಲ್ಪಸಂಖ್ಯಾತರು, ಮಹಿಳೆಯರ ಮೇಲಿನ ದೌರ್ಜನ್ಯಗಳನ್ನು ತಡೆಗಟ್ಟುವ ಬಗ್ಗೆ ಚರ್ಚಿಸಿ ಕಾರ್ಯಕ್ರಮ ರೂಪಿಸಲಿದಾದರೆ.

ರಾಜ್ಯ ಸಮ್ಮೇಳನ ನಡೆಸುವ ಪೂರ್ವಭಾವಿಯಾಗಿ ಶಾಖೆ, ವಲಯ ಮಟ್ಟದಿಂದ ತಾಲ್ಲೂಕು, ಜಿಲ್ಲಾ ಮಟ್ಟದವರೆಗೂ ಎಲ್ಲಾ ಹಂತಗಳಲ್ಲೂ ಪ್ರಜಾಸತ್ತಾತ್ಮಕವಾಗಿ ಪ್ರತಿನಿಧಿಗಳನ್ನು ಸಮಿತಿಗಳನ್ನು ಆಯ್ಕೆ ಮಾಡಲಾಗಿದ್ದು ಇದು ಎಲ್ಲಾ ರಾಜಕೀಯ ಪಕ್ಷಗಳಿಗೆ ಮಾದರಿಯಾಗಿದೆ ಎಂದು ಸೂರ್ಯನಾರಾಯಣರಾವ್ ಅವರು ಹೇಳಿದ್ದಾರೆ.

ಕಾಂಗ್ರೆಸ್ ಯಾರ ವಿರುದ್ಧ ಹರಿಹಾಯುತ್ತಿದೆ ?- ಸುರ್ಜಿತ್ ಪುಟ 4

ಬಿಜೆಪಿ: ಇಂದೂ ಬೇಡ ಎಂದೆಂದಿಗೂ ಬೇಡ - ಯೆಚೂರಿ ಪುಟ 5

ಹಟ್ಟಿ ಚಿನ್ನದ ಗಣಿಗೆ ಬೀಗಮುದ್ರೆ ಏತಕ್ಕಾಗಿ? ಪುಟ 3

"ಪ್ರಳಯದ ರೂವಾರಿಗಳು ಗೋಬೆಲ್ಸ್‌ನ ಮರಿಗಳು" ಪುಟ 2



ಮತ ಪ್ರದರ್ಶನ ನಡೆಸುತ್ತಿರುವ ದಂತವೈದ್ಯ ವಿದ್ಯಾರ್ಥಿಗಳು

ದಂತ ವಿದ್ಯಾರ್ಥಿಗಳ ಸಮಸ್ಯೆಗಳನ್ನು ಬಗೆಹರಿಸಲು ಸಿ.ಪಿ.ಐ.(ಎಂ) ಆಗ್ರಹ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ನಿಯೋಗವೊಂದು ರಾಜ್ಯಪಾಲ ಶ್ರೀ ಖುರ್ಷಿದ್ ಆಲಂ ಖಾನ್ ಅವರನ್ನು ಭೇಟಿಯಾಗಿ ರಾಜೀವ್ ಗಾಂಧಿ ವಿಶ್ವ ವಿದ್ಯಾನಿಲಯದ ವಿದ್ಯಾರ್ಥಿಗಳ ಸಮಸ್ಯೆಗಳನ್ನು ಬಗೆಹರಿಸಬೇಕೆಂದು ವಿನಂತಿ ಮಾಡಿತು. ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎಸ್. ಸೂರ್ಯನಾರಾಯಣ ರಾವ್, ಜಿ.ಎನ್.ನಾಗರಾಜ್ ಮತ್ತು ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಪಿ.ಜಗನ್ನಾಥ್ ನಿಯೋಗದಲ್ಲಿದ್ದರು.

ಡಾ. ಕಾಂತಾ. ಎಸ್. ಜಾಧವ್, ಉಪಕುಲಪತಿಗಳಾಗಿ ಅಧಿಕಾರ ವಹಿಸಿಕೊಂಡ ಹೊಸದರಲ್ಲಿಯೇ ಡೆಂಟಲ್, ನರ್ಸಿಂಗ್ ಮತ್ತಿತರ ವಿಭಾಗದ ಫಲಿತಾಂಶದಲ್ಲಿ ತೀವ್ರ ಕುಸಿತ ಕಂಡು ಬಂದಿದೆ. ಖಾಸಗಿ ಶಿಕ್ಷಣ ರಂಗದ ಲಾಬಿಗಳೊಂದಿಗೆ ಸೇರಿ ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ವಿದ್ಯಾರ್ಥಿಗಳನ್ನು ಅನುತ್ತೀರ್ಣಗೊಳಿಸಿ, ತರಗತಿಗೆ ಹಾಜರಾಗದ 6 ತಿಂಗಳ ಅವಧಿಯಲ್ಲಿ ಶೇ. 25 ರಷ್ಟು ಫೀಸನ್ನು ಧರ್ಮವಾಗಿ ಪಡೆಯುವ ಹುನ್ನಾರ ನಡೆಯುತ್ತಿದೆ ಎಂದು ಅಭಿಪ್ರಾಯ ಪಟ್ಟಿರುವ ಸಿ.ಪಿ.ಐ(ಎಂ) ನಿಯೋಗ ಈಗಾಗಲೇ ಇನ್ನೊಂದು ಹಗರಣದಲ್ಲಿ ಸಿಲುಕಿಕೊಂಡಿರುವ ಡಾ. ಕಾಂತಾ ಅವರ ಮೇಲೆ ಸಿ.ಓ.ಡಿ. ತನಿಖೆಗೆ ಆದೇಶ ನೀಡಲಾಗಿದೆ ಎಂಬುದನ್ನು ನೆನಪಿಸಿದರು.

ರಾಜ್ಯಪಾಲರು ಈಗಾಗಲೇ ಆರೋಗ್ಯ ಇಲಾಖೆಯ ಕಾರ್ಯದರ್ಶಿ ಹಾಗೂ ಉಪ ಕುಲಪತಿಗಳಿಗೆ ವಿದ್ಯಾರ್ಥಿ ಪ್ರತಿನಿಧಿಗಳೊಂದಿಗೆ ಚರ್ಚಿಸಿ ಸಮಸ್ಯೆಯನ್ನು ಬಗೆಹರಿಸಲು ತಾನು ಆದೇಶ ನೀಡಿದ್ದಾಗಿ ನಿಯೋಗಕ್ಕೆ ತಿಳಿಸಿದರು. ಈ ಕೂಡಲೇ ವಿದ್ಯಾರ್ಥಿಗಳ ಸಮಸ್ಯೆಗಳನ್ನು ಬಗೆಹರಿಸಬೇಕೆಂದೂ ಉಪಕುಲಪತಿ ಡಾ. ಕಾಂತಾ ಅವರನ್ನು ಅಮಾನತ್ತಿನಲ್ಲಿಟ್ಟು ತನಿಖೆ ನಡೆಸಬೇಕೆಂದೂ ಸಿ.ಪಿ.ಐ.(ಎಂ)ನ ನಿಯೋಗವು ಲಿಖಿತ ಮನವಿಯ ಮೂಲಕ ರಾಜ್ಯಪಾಲರನ್ನು ವಿನಂತಿಸಿತು.

"ಪ್ರಳಯದ ರೂವಾರಿಗಳು ಗೋಬೆಲ್ಸ್‌ನ ಮರಿಗಳು"

ವರದಿ - ಟಿ.ಎಲ್.ಕೃಷ್ಣೇಗೌಡ

ಕನ್ನಡ ವಾರಪತ್ರಿಕೆಯೊಂದರಲ್ಲಿ ಪ್ರಕಟವಾಗಿ ಜನತೆಯನ್ನು ಆತಂಕಕ್ಕೊಳ ಪಡಿಸಿರುವ "ಪ್ರಳಯ" ಎಂಬ ವಿಷಯದ ಬಗ್ಗೆ ಚಿಂತನೆ ನಡೆಸಲು ಡಿಸೆಂಬರ್ 14ರಂದು ಡಿ.ವೈ.ಎಫ್.ಐ. ಸಂಘಟನೆ ಬೆಂಗಳೂರಿನಲ್ಲಿ 'ಯುವ ಚಿಂತನ' ಕಾರ್ಯಕ್ರಮ ಏರ್ಪಡಿಸಿತ್ತು.

1962 ಫೆ 28 ರಲ್ಲಿ ಹೀಗೆಯೇ ಪ್ರಚಾರ ಪಡೆದು ನಡೆಯದ ಪ್ರಳಯವೊಂದನ್ನು ಹಾದು ಬಂದು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡುತ್ತಿದ್ದ ಪ್ರಖ್ಯಾತ ಖಭೌತ ವಿಜ್ಞಾನಿ ಡಾ।। ಸವ್ಯಸಾಚಿ ಚಟರ್ಜಿಯವರು ಪ್ರಳಯ ಏಕೆ ಸಾಧ್ಯವೇ ಇಲ್ಲ ಎಂಬ ವಿಷಯವನ್ನು ಸುವಿಸ್ತಾರವಾಗಿ ವಿವರಿಸುತ್ತ 1962ರ ಲೋಕಸಭೆ ಚುನಾವಣೆಯ ಸಂದರ್ಭದಲ್ಲಿ ವ್ಯಾಪಕ ಗೋಹತ್ಯೆ ಮಾಡುತ್ತಿರುವುದರಿಂದ ಪ್ರಳಯ ಸಂಭವಿಸುತ್ತದೆ ಎಂದು ಪ್ರಚಾರ ಮಾಡಿ ಪ್ರಳಯದ ವುಕಾರನ್ನು ಹಬ್ಬಿಸಲಾಗಿತ್ತು, ನಂತರ ಅದೊಂದು ಶುದ್ಧ ಸುಳ್ಳು ಎಂದು ಸಾಬೀತಾಯಿತು ಎಂದರು.

ತರಂಗ ಪತ್ರಿಕೆಯಲ್ಲಿ ಪ್ರಕಟವಾಗಿರುವ ಲೇಖನದ ಪ್ರಾರಂಭದಲ್ಲಿ ಇಪ್ಪತ್ತನೆಯ ಶತಮಾನದ ಅಂತಿಮ ವರ್ಷದ ಒಂದು ದಿನ ಅಮೇರಿಕಾದ ಬಾಸ್ಟನ್ ನಗರದಲ್ಲಿ ಸೂರ್ಯ ಮುಳುಗುವುದೇ ಇಲ್ಲ ಎಂದು ಹೇಳಿ ಆ ದಿನ ಪ್ರಳಯವಾಗುತ್ತದೆ ಎಂದಿದೆ. ಆದರೆ ಆ ನಗರದಲ್ಲಿ ಪ್ರತಿವರ್ಷವೂ ಡಿಸೆಂಬರ್ ತಿಂಗಳಲ್ಲಿ ಸೂರ್ಯ ಮುಳುಗುವುದೇ ಇಲ್ಲ, ಏಕೆಂದರೆ ಕೆಪ್ಲರ್ ಎಂಬ ವಿಜ್ಞಾನಿ ಕಂಡು ಹಿಡಿದಂತೆ ಭೂಮಿ ತನ್ನನ್ನೇ ತಾನು ಸುತ್ತುತ್ತ ಸೂರ್ಯನನ್ನೂ ಸುತ್ತುತ್ತದೆ, ಸೂರ್ಯನನ್ನು ಸುತ್ತಲು ಒಂದು ವರ್ಷ ತೆಗೆದುಕೊಂಡರೆ, ತನ್ನನ್ನೆ ಸುತ್ತಿಕೊಳ್ಳಲು ಒಂದು ದಿನ ಸಮಯ ತೆಗೆದು, ಕೊಳ್ಳುತ್ತದೆ. ಈ ಕಾರಣದಿಂದಲೆ ಜಗತ್ತಿನಲ್ಲಿ ಋತುಗಳನ್ನು ಗುರ್ತಿಸಲು ಸಾಧ್ಯವಾಗಿದೆ. ಹೀಗಿರುವಾಗ ಉತ್ತರ ಮತ್ತು ದಕ್ಷಿಣ ಧ್ರುವಗಳಲ್ಲಿರುವ ಪ್ರದೇಶಗಳಲ್ಲಿ ಸೂರ್ಯನು 6 ತಿಂಗಳು ಮುಳುಗುವುದಿಲ್ಲ, ಮತ್ತು 6 ತಿಂಗಳು ಉದಯವೂ ಆಗುವುದಿಲ್ಲ. ಹಾಗಾಗಿ ಅಲ್ಲಿ ಧೀರ್ಘ ಹಗಲು ಮತ್ತು ಧೀರ್ಘ ರಾತ್ರಿಗಳು ಸಂಭವಿಸುತ್ತವೆ. ಬಾಸ್ಟನ್ ನಗರವು ಉತ್ತರ ಧ್ರುವದಲ್ಲಿರು ವುದರಿಂದ ಡಿಸೆಂಬರ್ ನಿಂದ ಆರು ತಿಂಗಳ ಕಾಲ ಹಗಲೇ ಇರುತ್ತದೆ, ನಂತರ 6 ತಿಂಗಳು ಪೂರ್ತಿ ರಾತ್ರಿಯಿರುತ್ತದೆ, ಹಾಗೆಯೇ ಲಕ್ಷಾಂತರ ವರ್ಷಗಳಿಂದಲೂ ಡೆನ್ಮಾರ್ಕಿನಲ್ಲಿ ಸೂರ್ಯನು ಬೇಸಿಗೆಯಲ್ಲಿ ರಾತ್ರಿ 10-30ಕ್ಕೆ ಮುಳುಗಿದರೆ, ಮುಂಜಾನೆ 2-30ಕ್ಕೆ ಉದಯವಾಗುತ್ತಿದೆ ಎಂದರು.

ಚಂಡಮಾರುತ-ಎಲ್‌ನಿನೋ ಪ್ರವಾಹ: ಚಂಡಮಾರುತಗಳು ಲಕ್ಷಾಂತರ ವರ್ಷಗಳಿಂದಲೂ ಸಂಭವಿಸುತ್ತಿವೆ. ಪ್ರಾಕೃತಿಕವಾಗಿ ಸಂಭವಿಸುವ ಈ ಮಾರುತಗಳನ್ನು ತಡೆಯಲು ಸಾಧ್ಯ ಇಲ್ಲ. ಬದಲಾಗಿ ಇವುಗಳನ್ನು ಎದುರಿಸಿ ಬದುಕುವುದನ್ನು ಕಲಿಯಬೇಕಾಗಿದೆ ಮತ್ತು ಈಗಾಗಲೇ ಬಹಳಷ್ಟು ಕಲಿತಿದ್ದೇವೆ ಎನ್ನುತ್ತಾ, ಎಲ್‌ನಿನೋ ಮಾರುತ ವೇಗವಾಗಿ ಬೀಸುವ ಬಿಸಿಯಾದ ಬಿರುಗಾಳಿ. ಸಾಮಾನ್ಯವಾಗಿ ದಕ್ಷಿಣ-ಲ್ಯಾಟಿನ್ ಅಮೇರಿಕಾದಲ್ಲಿ ಕ್ರಿಸ್‌ಮಸ್ ಸಂದರ್ಭದಲ್ಲಿ ಅಂದರೆ ಜನವರಿ ಮತ್ತು ನವೆಂಬರ್‌ನಲ್ಲಿ ಕಾಣಿಸಿಕೊಳ್ಳುತ್ತದೆ. ಆ ಪುಸ್ತಕದಲ್ಲಿ ಇದನ್ನು 1600 ರಿಂದ ಕಾಣಿಸಿಕೊಳ್ಳುತ್ತಿದೆ ಎಂದು ಹೇಳಲಾಗಿದೆ. ಆದರೆ ಇದು ಲಕ್ಷಾಂತರ ವರ್ಷಗಳಿಂದಲೂ ನಡೆಯುತ್ತಿದೆ, ದಾಖಲಿಸುವುದು ಸಾಧ್ಯವಾಗಿರುವುದು ಮಾತ್ರ 1600ನೇ ಇಸ್ವಿಯಿಂದ. ಆದ್ದರಿಂದ ಇದೊಂದು ಪ್ರಾಕೃತಿಕ ಸಾಮಾನ್ಯ ಘಟನೆಯೇ ಸರಿ. ಈ ಚಂಡಮಾರುತ ದಿಂದ ಪ್ರಳಯವಾಗುತ್ತದೆ ಎಂಬುದು, ಹೇಗೆ ಯುಗಾದಿ ಸಂದರ್ಭದಲ್ಲಿ ಮಳೆ ಯಾಗಬೇಕು ಮತ್ತು ರಾಮಾಯಣದಲ್ಲಿ ಪುಷ್ಪಕ ವಿಮಾನವಿತ್ತು ಎಂಬಂತೆಯೇ ನಿರಾಧಾರ ಎಂದು ಡಾ।। ಚಟರ್ಜಿ ವಿವರಿಸಿದರು.

ಜ್ವಾಲಾಮುಖಿ : ಜ್ವಾಲಾಮುಖಿಗಳು ಪ್ರಪಂಚದ ಅನೇಕ ಕಡೆಯಿವೆ. ಇವು ಬೆಂಕಿಯುಗುಳುತ್ತಲೇ ಇರುತ್ತವೆ. ಆರಂಭದಲ್ಲಿ ಕೆಲವರು ಅಪಾಯಕ್ಕೊಳಗಾದರೂ ನಂತರ ಅವುಗಳ ಹತ್ತಿರದಲ್ಲೇ ಬದುಕುತ್ತಿದ್ದಾರೆ. ಸಿಸಿಲೆಯ ಮೌಂಟ್‌ನ್ನು ಆ ಪುಸ್ತಕದಲ್ಲಿ ಪ್ರಸ್ತಾಪಿಸಿ ಅದಕ್ಕೆ ಭೀಕರತೆಯ ಬಣ್ಣ ಹಚ್ಚಲಾಗಿದೆ, ಮಂಜುಗಡ್ಡೆಯ ಹತ್ತಿರದಲ್ಲೆ ಇರುವ ಇದು ಭಾರಿ ಜನ ದಟ್ಟಣೆಯಿರುವ ಪ್ರವಾಸಿ ತಾಣ. ಕಳೆದ 300 ವರ್ಷಗಳಿಂದ 260 ಬಾರಿ ಬೆಂಕಿಯುಗುಳಿರುವ ಈ ಜ್ವಾಲಾಮುಖಿಯಿಂದ ಆರಂಭದಲ್ಲಿ ಜನತೆಗೆ ಸ್ವಲ್ಪ ತೊಡಕಾಗಿ ಅಪಾಯವಾದದು ನಿಜ, ಆದರೆ ಈಗ ಜನರು ಚೆನ್ನಾಗಿಯೇ ಜೀವನ ನಡೆಸುತ್ತಿದ್ದಾರೆ. ಎಷ್ಟೆ ಪ್ರತಿಕೂಲ ಸನ್ನಿವೇಶ ನಿರ್ಮಾಣವಾದರು ಮನುಷ್ಯ ಬದುಕುವುದನ್ನು ಬಲ್ಲ ಎಂದು ವಿಶ್ವಾಸದ ನಗೆ ಚೆಲ್ಲಿದರು ಡಾ।।ಚಟರ್ಜಿ.

ಭೂಕಂಪಗಳು : ಆ ಪತ್ರಿಕೆಯ ಲೇಖನದಲ್ಲಿ ಇಡೀ ಜಗತ್ತಿನಲ್ಲಿ ಭಾರಿ ಭೂಕಂಪಗಳಾಗುತ್ತವೆ. ಜಪಾನ್, ಬರ್ಮಾ, ಮೆಕ್ಸಿಕೋದಲ್ಲಿ ಅಪಾರ ಹಾನಿ ಸಂಭವಿಸಿ ಮನುಕುಲ ನಾಶವಾಗುತ್ತದೆ ಎಂದಿದೆ. ಆದರೆ ಇಡೀ ಜಗತ್ತಿನಲ್ಲಿ ಏಕಕಾಲದಲ್ಲಿ ಭೂಕಂಪವಾಗಲು ಸಾಧ್ಯವೇ ಇಲ್ಲ, ಏಕೆಂದರೆ ಸೌರವ್ಯೂಹ ರಚನೆಯಾಗಿ ಒಂದು ಬಿಲಿಯನ್ ವರ್ಷಗಳೆಂದು ಗುರ್ತಿಸಲಾಗಿದೆ. ಭೂಮಿ ಹುಟ್ಟಿ 400 ಮಿಲಿಯನ್ ವರ್ಷವಾಯಿತೆನ್ನಲಾಗಿದೆ. ಮೊದಲು 15 ತಟ್ಟೆಯಾಕಾರದಲ್ಲಿದ್ದ ಭೂಮಿ 200 ಮಿಲಿಯನ್ ವರ್ಷಗಳ ನಂತರ ಖಂಡಗಳಾಗಿ ನಿರ್ಮಾಣವಾದವು. ಈ ತಟ್ಟೆಗಳು ಪರಸ್ಪರ ಚಲಿಸಿದಾಗ ಇವು ಖಂಡಗಳಾದವು. ಕೆಲವು ಚಲನೆಯನ್ನು ನಿರಾಕರಿಸಿದಾಗ ಅವುಗಳ ನಡುವಿನ ಘರ್ಷಣೆಯಲ್ಲಿ ಪರ್ವತಗಳು ಉಂಟಾದವು, ಭಾರತ ಒಂದು ಸ್ಥಿರ ತಟ್ಟೆಯಾಗಿದ್ದರಿಂದ ಇಲ್ಲಿ ಭೂಕಂಪಗಳು ಕಡಿಮೆಯಾಗುತ್ತವೆ. ಎಲ್ಲಿ ಒಂದಕ್ಕೊಂದು ತಟ್ಟೆಗಳು ಪರಸ್ಪರ ಸಂದಿಸಿರುವ ಪ್ರದೇಶಗಳಲ್ಲಿ ಭೂಕಂಪಗಳು ಸಹಜವಾಗಿ ನಡೆಯುತ್ತವೆ. ಹೀಗೆ ಜಪಾನ್, ಬರ್ಮಾ, ಮೆಕ್ಸಿಕೊಗಳಲ್ಲಿ ಹಾಗೂ ಭಾರತದ ಈಶಾನ್ಯ ಭಾಗದಲ್ಲಿ ಭೂಮಿಯ ತಟ್ಟೆಗಳು ಸಂದಿಸಿರುವ ಪ್ರದೇಶಗಳಿವೆ, ಆದ್ದರಿಂದಲೇ ಈ ಪ್ರದೇಶಗಳಲ್ಲಿ ಭೂಕಂಪಗಳು ಆಗುತ್ತಿರುವುದು ಮತ್ತು ಮುಂದೆಯೂ ಸಾಮಾನ್ಯವಾಗಿ ಸಂಭವಿಸುವುದು. ಆದರೆ ಪ್ರಶ್ನೆ ಇರುವುದು ಭೂಕಂಪಗಳನ್ನು ತಡೆಯಬೇಕು ಅಥವಾ ತಡೆಯಲಾಗದೆ ಸಾಯಬೇಕು ಎನ್ನುವುದರಲ್ಲಿ ಅಲ್ಲ. ಬದಲಾಗಿ ಅದನ್ನು ಎದುರಿಸಿ ಬದುಕುವುದು ಹೇಗೆ ? ಎಂಬುದು. ಈಗಾಗಲೇ ಮನುಷ್ಯ ಭೂಕಂಪಗಳನ್ನು ಎದುರಿಸಿ ಬದುಕುವುದನ್ನು ಕಲಿತಿದ್ದಾನೆ ಎನ್ನುತ್ತಾ, 1985 ರಲ್ಲಿ ಮೆಕ್ಸಿಕೋ ನಗರದಲ್ಲಿ ಭೂಕಂಪನವಾಯ್ತು. "ಬಹುಮಹಡಿ ಕಟ್ಟಡವೊಂದರ ಹೋಟೆಲ್‌ನಲ್ಲಿ ಸಾವಿರಾರು ಜನ ತಿಂಡಿ ತಿನ್ನುತ್ತಿದ್ದರು. ಆಗ ಹೋಟಲ್ ಮಾಲೀಕ ಹೇಳಿದ ಹೆದರ ಬೇಡಿ ಎಷ್ಟೆ ಭೂಕಂಪವಾದರೂ ಈ ಕಟ್ಟಡ ಬೀಳದು ಎಂದು"

ಭೂಕಂಪ ಸಂಭವಿಸುವ ಪ್ರದೇಶಗಳಲ್ಲಿ ಜನ ಸಾಯುವುದು ಭೂಕಂಪದಿಂದಲ್ಲ, ಬದಲಾಗಿ ಕಟ್ಟಡಗಳ ಕುಸಿತದಿಂದ. ಆದ್ದರಿಂದ ಉತ್ತಮ ಕಟ್ಟಡ ಕಟ್ಟ ಬೇಕಾಗಿರುವುದಷ್ಟೇ ಕೆಲಸ ಎಂದರು.

ಸಮುದ್ರ ಉಕ್ಕುತ್ತದೆ!

ಸಮುದ್ರ ಉಕ್ಕುತ್ತದೆ, ಭೂಮಿಯೆಲ್ಲಾ ಮುಳುಗಿ ಹೋಗುತ್ತದೆ, ನಾವೆಲ್ಲ ನೀರುಪಾಲಾಗಿ ಈ ಜಗತ್ತು ನಿರ್ನಾಮವಾಗುತ್ತದೆ, ಇದು ಅವರ ಲೇಖನದಲ್ಲಿ ಪ್ರಸ್ತಾಪವಾಗಿರುವ ಪ್ರಧಾನ ಅಂಶ.

ಆದರೆ ನಮ್ಮ ಪ್ರಶ್ನೆ ನೀರೆಲ್ಲಿಂದ ಬರಬೇಕು? ಮಳೆಯಿಂದ ಮತ್ತು ಮಂಜುಗಡ್ಡೆ ಕರಗುವುದರಿಂದ ಎಂದು ಆ ಲೇಖನ ಹೇಳುತ್ತದೆ. ಇದಕ್ಕೆ ಡಾ।। ಚಟರ್ಜಿ ಹೇಳುತ್ತಾರೆ, ಕನಿಷ್ಠ ವಿಜ್ಞಾನವೂ ಗೊತ್ತಿಲ್ಲದ ಅವಿವೇಕಿಯೂ ಹಾಗೆ ಹೇಳಲಾರ ಏಕೆಂದರೆ ಮಳೆ ಬೀಳುವುದು ಮೋಡದಿಂದ, ಮೋಡವಾಗುವುದು ನೀರು ಆವಿಯಾಗಿ ಆಕಾಶ ಸೇರುವುದರಿಂದ, ಅಂದರೆ ಭೂಮಿಯ ನೀರೆ ಮೋಡ ವಾಗಬೇಕು ಮತ್ತು ಮೋಡವೇ ಮಳೆಯಾಗಬೇಕಲ್ಲವೆ. ಅಂದರೆ ಮೋಡವಾಗಲು ಅಷ್ಟೇ ಪ್ರಮಾಣದ ನೀರು ಸಮುದ್ರದಿಂದ ಆವಿಯಾಗಬೇಕು ಮತ್ತು ಮಳೆಯಾದಾಗ ಅದೇ ನೀರು ಸಮುದ್ರವನ್ನು ಸೇರಬೇಕು, ಹೆಚ್ಚಿನ ನೀರು ಎಲ್ಲಿಂದ ಬರಬೇಕು. ಹಾಗೆಯೇ ಮಂಜುಗಡ್ಡೆಯು ಸಹ ಬೇಸಿಗೆಯಲ್ಲಿ ಕರಗಿದರೆ, ಚಳಿಗಾಲದಲ್ಲಿ ಕ್ರೋಢೀಕರಣ ವಾಗುತ್ತದೆ ಎನ್ನುತ್ತಾ, ಆ ಲೇಖನ ಹೇಳುವ ಹಾಗೆ ಯಾವುದೇ ಒಂದು ಸಮುದ್ರ ಉಕ್ಕಲು ಸಾಧ್ಯವಿಲ್ಲ ಏಕೆಂದರೆ ಇಡೀ ಜಗತ್ತಿನ ಎಲ್ಲಾ ಸಮುದ್ರಕ್ಕೂ ಪರಸ್ಪರ ಸಂಭಂದವಿದೆ. ಹೀಗಿರುವಾಗ ಅವು ಒಂದೇ ಮಟ್ಟದಲ್ಲಿಯೇ ಇರಬೇಕಾಗುತ್ತದೆ ಎಂದು ಸ್ಪಷ್ಟಪಡಿಸುತ್ತಾ, ಹೀಗಿದ್ದರೂ ವಾರ್ಷಿಕ ಒಂದು ಮಿ.ಮಿ. ಸಮುದ್ರಮಟ್ಟ ಏರುತ್ತಿದೆ ಎನ್ನಲಾಗುತ್ತದೆ, ಹಾಗಾದರೆ ಮುಂದಿನ ಸಾವಿರ ವರ್ಷಗಳಲ್ಲಿ ಒಂದು ಅಡಿ ಮಾತ್ರ ಹೆಚ್ಚುತ್ತದೆ ಎಂದರು.

ಭೂಮಿಯ ಉಷ್ಣತೆ ಹೆಚ್ಚಾಗುತ್ತಿದೆಯೆ?

ಭೂಮಿಯ ಉಷ್ಣತೆ ಹೆಚ್ಚಾಗುತ್ತಿದೆ ಎಂಬುದು ಇದುವರೆಗೂ ಸಾಬೀತಾಗಿಲ್ಲ. ಆದರೆ ಜೀವನದ ಪರಿಸ್ಥಿತಿ ಸರಿಯಿಲ್ಲದೆ ಜೀವನದ ಮೇಲಿನ ಒತ್ತಡ ಹೆಚ್ಚಾಗುತ್ತಿರುವುದರಿಂದ ಈ ರೀತಿ ಜನಕ್ಕೆ ಅನ್ನಿಸುತ್ತಿರಬಹುದು ಎನ್ನುತ್ತ, ಕೆಲವರು ಹೇಳುತ್ತಾರೆ ಇಂಗಾಲದ ಡೈಆಕ್ಸೈಡ್‌ನಿಂದ ಪದರವೊಂದು ನಿರ್ಮಾಣವಾಗುತ್ತಿದೆ, ಅದು ಸೂರ್ಯನ ಶಾಖ ಮತ್ತೆ ಮೇಲೆ ಹೋಗಲು ಬಿಡುತ್ತಿಲ್ಲ, ಹಾಗಾಗಿ ಭೂಮಿ ಬಿಸಿಯಾಗುತ್ತಿದೆ ಎಂದು, ಆದರೆ ನಾವು ಹೇಳಬೇಕು ಇದಕ್ಕೆ ಕಾರಣರಾಗಿರುವವರು ಮುಂದುವರೆದ ಪಾಶ್ಚಿಮಾತ್ಯ ರಾಷ್ಟ್ರಗಳೇ ಹೊರತು ನಾವಲ್ಲ, ಹಾಗಾಗಿ ಅವರೆ ಇದಕ್ಕೆ ಸಂಪೂರ್ಣ ಜವಾಬ್ದಾರರಾಗಬೇಕೆಂದು ಅದರ ಹಿಂದಿನ ರಾಜಕೀಯವನ್ನು ತಿಳಿಸಿದರು.

ಆ ಲೇಖನ ಅಸಂಬದ್ಧಗಳಿಂದ ತುಂಬಿ ತುಳುಕುತ್ತಿದೆ, ಅದರಲ್ಲಿ ಭೂಮಿ ಶಾಖಮಯವಾಗುತ್ತಿರುವುದು ಮತ್ತು ಭೂಮಿ ತಂಪಾಗುತ್ತಿರುವುದು ಎರಡರ ಬಗ್ಗೆಯೂ ಪ್ರಸ್ತಾಪಿಸಿ ದ್ವಂದ್ವಕ್ಕೀಡಾದರೆ, ಭೂಮಿ ತಂಪಾಗುತ್ತಿರುವುದಕ್ಕೆ ಕೈಗಾರಿಕೆಗಳು ಉಂಟುಮಾಡುತ್ತಿರುವ ದೂಳು ಸೂರ್ಯನ ಕಿರಣಗಳನ್ನು ತಡೆಯುತ್ತಿರುವುದೇ ಕಾರಣ ಎಂದಿದ್ದಾರೆ. ಆದರೆ ಈ ಮೇಲಿನ ಎರಡೂ ಅಪಾಯಗಳಿಗೆ ಕಾರಣರಾಗುತ್ತಿರುವವರು ನಾವಂತೂ ಅಲ್ಲ, ಬದಲಾಗಿ ಶತಮಾನ ಗಳಿಂದಲೂ ಮನುಕುಲವನ್ನು ಶೋಷಿಸಿ, ಅವರನ್ನು ನಿರ್ನಾಮ ಮಾಡುವತ್ತ ಹೆಜ್ಜೆ ಇಡುತ್ತಿರುವ ಪಾಶ್ಚಿಮಾತ್ಯ ಮುಂದುವರಿದ ಬಂಡವಾಳಶಾಹಿ ದೇಶಗಳು ಎಂದು ಹೇಳಿದ ಡಾ।। ಚಟರ್ಜಿ ಆದರೂ ಇದನ್ನು ತಡೆಯಲು ಈ ದೇಶಗಳು ಯಾವುದೇ ಜವಾಬ್ದಾರಿ ತೋರದೆ ಬೇಜವಾಬ್ದಾರಿಯಾಗಿವೆ ಎಂದು ಟೀಕಿಸಿದರು.

"ಇದು ಹೊಸ ಸುದ್ದಿಯಲ್ಲ, ಶತಮಾನಗಳಿಂದಲೂ ಪ್ರವಾದಿಗಳು ಬರಲಿರುವ ಪ್ರಳಯದ ಬಗ್ಗೆ ಕುರಿತು ವಿವರಿಸುತ್ತಲೆ ಬಂದಿದ್ದಾರೆ" ಎಂದು ಹೇಳುತ್ತದೆ ಆ ಲೇಖನ. ಆದರೂ ಒಮ್ಮೆಯೂ ಆ ರೀತಿ ಆಗದೆ ಮುಖಭಂಗವನ್ನೆ ಕಂಡಿರುವ ಇವರು ಈಗಲು ಮುಖಭಂಗವನ್ನು ಎದುರಿಸಲೇ ಬೇಕಾಗುತ್ತದೆ.

ಆದರೂ ಈ ಲೇಖನ ಹಬ್ಬಿಸಿರುವ ಪ್ರಳಯದ ವುಕಾರಿನ ಸಂದರ್ಭವನ್ನು ನಾವು ನೋಡಬೇಕಾಗುತ್ತದೆ. ಮೊದಲ ಬಾರಿ 1962ರ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಹಬ್ಬಿದ್ದರೆ, ಈಗ ದೇಶ ಮತ್ತೊಂದು ಚುನಾವಣೆಯನ್ನು ಎದುರಿಸುತ್ತಿದೆ. ಲೇಖನದಲ್ಲಿರುವಂತೆ ಭ್ರಷ್ಟಾಚಾರ ಹೆಚ್ಚಿ ಶಿಷ್ಟಾಚಾರ ಕಡಿಮೆಯಾಗಿದೆ, ದೇವರ ಮೇಲಿನ ಭಕ್ತಿ ಕಡಿಮೆಯಾಗುತ್ತಿದೆ, ವೇದಗಳ ಸತ್ಯವನ್ನು ಅಲ್ಲಗಳೆಯಲಾಗುತ್ತಿದೆ, ಆದರೆ ಇನ್ನೂ ಕಾಲ ಮಿಂಚಿಲ್ಲ, ಈಗಲೂ ಸರಿಪಡಿಸಿಕೊಳ್ಳಬಹುದಾಗಿದೆ. ಈಗ ನಾವು ಸ್ವಲ್ಪ ಯೋಚಿಸಬೇಕಾಗುತ್ತದೆ. ವೇದ, ಉಪನಿಷತ್ತು, ದೇವರ ಮೇಲಿನ ಭಕ್ತಿಯ ರುವಾರಿಗಳು ಈಗಿನ ಕಾವಿಪಡೆಗಳೆಂದು ಪ್ರಚಾರ ಮಾಡುತ್ತಿಲ್ಲವೆ, ಹಾಗಾದರೆ ನಾವು 1998 ಏಪ್ರಿಲ್- ಮೇನಲ್ಲಿ ನಡೆಯುವ ಪ್ರಳಯದಿಂದ ತಪ್ಪಿಸಿಕೊಳ್ಳಲು ಫೆಬ್ರವರಿ ಮಾರ್ಚಿನಲ್ಲಿ ನಡೆಯುವ ಚುನಾವಣೆಯಲ್ಲಿ ಕಾವಿ ಪಡೆಗಳಿಗೆ ಮೊರೆ ಹೋಗಬೇಕಲ್ಲವೆ ? ಹೇಗಿದೆ ಮರಿ ಗೋಬೆಲ್ಸ್‌ಗಳ ಕುಟಿಲ ತಂತ್ರ. ಆದರೆ ನಾವು ಹೇಳಬೇಕಾಗಿದೆ. "ಕುಟಿಲ ತಂತ್ರಗಳಿಗೆ ಬಗ್ಗುವ ಕುನ್ನಿಗಳು ನಾವಲ್ಲ, ವಿಜ್ಞಾನದ ಅಸ್ತ್ರದಿಂದ ನಿಮ್ಮ ತಂತ್ರಗಳ ತುಂಡರಿಸುತ್ತೇವೆಂದು" ಎಂದು.

ಈ ಕಾರ್ಯಕ್ರಮದಲ್ಲಿ ಕಾಂ.ಗುರು ಶಾಂತ್, ಜಗನ್ನಾಥ, ಬೇರೆ ಬೇರೆ ಸಂಘಟನೆಯ ಮುಖಂಡರುಗಳು ಹಾಜರಿದ್ದರೆ, ಲಕ್ಷ್ಮೀ ಕುಮಾರ್ ಸ್ವಾಗತಿಸಿ, ಗೋಪಾಲ ಕೃಷ್ಣ ವಂದಿಸುವುದರೊಂದಿಗೆ ಕಾರ್ಯಕ್ರಮ ಮುಕ್ತಾಯವಾಯ್ತು. ○

ಬೀಡಿ ಕಾರ್ಮಿಕರ ವಾರ್ಷಿಕ ಸಭೆ

ಮಂಗಳೂರು: ಡಿಸೆಂಬರ್ 7 ರಂದು ಮಂಗಳೂರು ಬೀಡಿ ಕಾರ್ಮಿಕರ ವಾರ್ಷಿಕ ಮಹಾಸಭೆ ನಡೆಯಿತು. ಕಾರ್ಮಿಕ ವರ್ಗದ ರಕ್ಷಣೆ ಮಾಡ'ಲು ಹಾಗೂ ದೇಶ ಇಂದು ಎದುರಿಸುತ್ತಿರುವ ಆರ್ಥಿಕ ಮತ್ತು ರಾಜಕೀಯ ಬಿಕ್ಕಟ್ಟಿನಿಂದ ಪಾರಾಗಲು ಕಾರ್ಮಿಕರು ರಾಜಕೀಯ ಪ್ರಜ್ಞೆಯನ್ನು ಬೆಳೆಸಿಕೊಳ್ಳುವುದು ತೀರಾ ಅಗತ್ಯವಾಗಿದೆ ಎಂದು ಸಭೆಯನ್ನುದ್ದೇಶಿಸಿ ಮಾತನ್ನಾಡಿದ ದಕ್ಷಿಣ ಕನ್ನಡ ಜಿಲ್ಲಾ ಸಿಐಟಿಯು ಕಾರ್ಯದರ್ಶಿ ಬಿ. ಮಾಧವ ಕರೆ ನೀಡಿದರು.

ಬೀಡಿ ಕಾರ್ಮಿಕರಿಗೆ ವಾರಕ್ಕೆ ಕೇವಲ ಎರಡು ಮೂರು ದಿನಗಳ ಕೆಲಸ ಸಿಗುತ್ತಿದೆ ಎಲೆಐವಲೇಜಿನ ವಿಷಯದಲ್ಲಿ ಅನ್ಯಾಯವಾಗುತ್ತಿದೆ. ಈ ಸಮಸ್ಯೆಗಳ ಪರಿಹಾರಕ್ಕಾಗಿ ಸಂಘಟನೆ ಬಲಪಡಿಸಿ ಹೋರಾಟ ನಡೆಸುವುದೊಂದೇ ಮಾರ್ಗ ಎಂದು ಜಿಲ್ಲಾ ಬೀಡಿ ಕಾರ್ಮಿಕರ ಫೆಡರೇಶನ್ನಿನ ಕಾರ್ಯದರ್ಶಿ ಜೆ. ಬಾಲಕೃಷ್ಣಶೆಟ್ಟಿ ತಿಳಿಸಿದರು. ಸಭೆಯನ್ನುದ್ದೇಶಿಸಿ ಮಾತನಾಡಿದ ಲೋಕಯ್ಯ ಕಾರ್ಮಿಕ'ರಿಗೆ ಇಂದು ಸಿಗುತ್ತಿರುವ ಪ್ರತಿಯೊಂದು ಸವಲ ತ್ತುಗಳು ಹೋರಾಟಗಳ ಫಲವೆಂದು ನೆನಪಿಸಿದರು.

ಹೊಸಸಮಿತಿ: ಅಧ್ಯಕ್ಷರು, ಯು.ಬಿ. ಲೋಕಯ್ಯ, ಉಪಾಧ್ಯಕ್ಷರಾಗಿ ರಾಮಚಂದ್ರ ಮತ್ತು ಇಂದಿರಾ, ಕಾರ್ಯದರ್ಶಿ ಕೆ. ವೀರಪ್ಪ, ಜತೆ ಕಾರ್ಯದರ್ಶಿಗಳು ಕೆ. ಯಾದವಶೆಟ್ಟಿ ನಳಿನಿ ಹಾಗೂ ಅಶೋಕ ಶ್ರೇಯಾನ್, ಕೋಶಾಧಿಕಾರಿಯಾಗಿ ಕಮಲಾಕ್ಷ ಬಂಗೇರ ಆಯ್ಕೆಯಾದರು.

ಹೆಂಚು ಕಾರ್ಮಿಕರ ಕೂಲಿ ಪರಿಷ್ಕರಣೆಗೆ ಒತ್ತಾಯ

ಹೊನ್ನಾವರ: ಇತ್ತೀಚಿಗೆ ನಡೆದ ಉತ್ತರ ಕನ್ನಡ ಜಿಲ್ಲಾ ಹೆಂಚು ಕಾರ್ಮಿಕರ ಸಂಘ (ಸಿಐಟಿಯು) ದ 3ನೇ ವಾರ್ಷಿಕ ಮಹಾ ಸಭೆಯು ಹೆಂಚು ಕಾರ್ಮಿಕರ ಕನಿಷ್ಠ ಕೂಲಿಯ ಪರಿಷ್ಕರಣೆ ನಡೆಸಬೇಕೆಂದು ಸರ್ಕಾರವನ್ನು ಒತ್ತಾಯಿಸಿದೆ.

1987 ರ ನಂತರ ಹೆಂಚಿನ ಕೈಗಾರಿಕೆಯ ಕಾರ್ಮಿಕರ ಕನಿಷ್ಠ ಕೂಲಿಯನ್ನು ಪರಿಷ್ಕರಿಸದ ಸರ್ಕಾರದ ಕಾರ್ಮಿಕ ವಿರೋಧಿ ನೀತಿಯನ್ನು ಸಭೆಯು ಖಂಡಿಸಿತು.

ವಾರ್ಷಿಕ ವರದಿಯು ಮೇಲೆ ವಿವಿಧ ಕಾರ್ಖಾನೆಗಳ ಕಾರ್ಮಿಕರು ಚರ್ಚಿಸಿ, ವರದಿಯನ್ನು ಸರ್ವಾನುಮತದಿಂದ ಅಂಗೀಕರಿಸಿತು.

ಸಭೆಯನ್ನುದ್ದೇಶಿಸಿ ಡಿ.ವೈ.ಎಫ್.ಐ ನ ಶಾಂತರಾಮ್ ನಾಯಕ್, ಶುಭಕೋರಿ ಎಸ್.ಎಫ್.ಐ ನ ಯುವರಾಜ ಕಂಬಾಳಿ ಮಠ ಹಾಗೂ ಕೆಮಿಕಲ್ ಮತ್ತು ಮೆಡಿಷನ್ ವರ್ಕರ್ಸ್ ಯೂನಿಯನ್‌ನ ಜಯಂತನಾಯ್ಕ ಮಾತನಾಡಿದರು. ಸಭೆಯ ಅಧ್ಯಕ್ಷತೆಯನ್ನು ಟಿ.ಎಸ್. ನಾಯ್ಕ ವಹಿಸಿದ್ದರು. ಮಂಜು ನಾಥ್ ಸ್ವಾಗತಿಸಿ, ಸುಭಾಷ್ ಕೊಪ್ಪೀಕರ್ ಕಾರ್ಯಕ್ರಮ ನಿರೂಪಿಸಿದರು.

ನೂತನ ಸಮಿತಿ

ಅಧ್ಯಕ್ಷರು-ಟಿ.ಎಸ್. ನಾಯ್ಕ. ಉಪಾಧ್ಯಕ್ಷರು ಸುಭಾಷ್ ಕೊಪ್ಪೀಕರ್, ಭೀರಣ್ಣ ನಾಯ್ಕ, ಮಂಜುಗೌಡ, ಪಾಂಡುರಂಗ ಶೆಟ್ಟಿಗಾರ್, ಪ್ರಧಾನ ಕಾರ್ಯದರ್ಶಿ ತಿಲಕ ಜಟ್ಟಿಗೌಡ ಜಂಟಿ ಕಾರ್ಯದರ್ಶಿ ಗಳಾಗಿ, ಶಂಕರ ದೇವಾಡಿಗ, ಮಂಜುನಾಥ ನಾಯ್ಕ, ಮುನ್ನೇರ್ ಡಿ. ಕೇಸ್ತ ಗಣಪತಿ, ದೇವಾಡಿಗ ಹಾಗೂ ಖಜಾಂಚಿಯಾಗಿ ಸೂರ್ಯ ಮಂಜುಗೌಡ ಆಯ್ಕೆಯಾಗಿದ್ದಾರೆ.

ಸಭೆಯು ಕೈಗೊಂಡ ಪ್ರಮುಖ ನಿರ್ಣಯಗಳು

ಗ್ರಾಮ ಸಹಾಯಕರ ಮುಷ್ಕರಕ್ಕೆ ಬೆಂಬಲ, ಗುತ್ತಿಗೆ ಕಾರ್ಮಿಕರ ಹೋರಾಟಕ್ಕೆ ಬೆಂಬಲ ಹಾಗೂ ಅನಂತವಾಡಿ ಹೋರಾಟದಲ್ಲಿ ಸುಳ್ಳು ಮೊಕದ್ದಮೆಗಳ ವಾಪಸ್ಸಿಗಾಗಿ ಒತ್ತಾಯ.

ಅಂಗನವಾಡಿ ನೌಕರರ ಧರಣಿ

ಸಿಂಧನೂರು: ನೆನೆಗುದಿಗೆ ಬಿದ್ದಿರುವ ಅಂಗನವಾಡಿ ನೌಕರರ ಬಹುದಿನಗಳ ಬೇಡಿಕೆಗಾಗಿ ಒತ್ತಾಯಿಸಿ ಅಂಗನವಾಡಿ ನೌಕರರು ಡಿಸೆಂಬರ್ 6 ರಂದು ಸಿಂಧನೂರಿನಲ್ಲಿ ಒಂದು ಮೆರವಣಿಗೆ ನಡೆಸಿ ನಂತರ ತಹಸೀಲ್ದಾರ್ ಮತ್ತು ತಾಲ್ಲೂಕು ಪಂಚಾಯತ್ ಕಾರ್ಯ ನಿರ್ವಾಹಕ ಅಧಿಕಾರಿಗೆ ಮನವಿ ಪತ್ರ ಸಲ್ಲಿಸಿ ನಂತರ ಸಿ.ಡಿ.ಪಿ.ಒ. ಕಛೇರಿಯ ಮುಂದೆ ಧರಣಿ ನಡೆಸಿದರು. ಸಭೆಯಲ್ಲಿ ಸಿಐಟಿಯು ಮುಖಂಡರೂ ಹಾಗೂ ಪುರಸಭೆ ಸದಸ್ಯರೂ ಆದ ಶೇಷಾದ್ರಿ, ಮಾನ್ವಿ ತಾಲ್ಲೂಕು ಪ್ರಾಂತ ರೈತ ಸಂಘದ ತಾಲ್ಲೂಕು ಗೌರವ ಅಧ್ಯಕ್ಷರಾದ ವೀರನಗೌಡ, ಅ.ನೌ.ಸಂಘದ ಕಾರ್ಯದರ್ಶಿ ಸಿ. ಚಿದಾನಂದ ದೊರೆ, ಅಂ. ನೌ. ಸಂಘದ ಅಧ್ಯಕ್ಷರಾದ ವಿದ್ಯಾವತಿ, ತಾಲ್ಲೂಕು ಉಪಾಧ್ಯಕ್ಷರುಗಳಾದ ದೇವಮ್ಮ ಪ್ರಭಾವತಿ ಸಹ ಕಾರ್ಯದರ್ಶಿ ಜಯಲಕ್ಷ್ಮಿ ಲೀಲಾ, ಸೋಮೇಶ್ವರ ಮುಂತಾದವರು ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಮಾತನಾಡಿದರು.

ಕಿರ್ಲೋಸ್ಕರ್ ಕಾರ್ಮಿಕರಿಗೆ ಸಿಐಟಿಯು ಬೆಂಬಲ

ಹುಬ್ಬಳ್ಳಿ: ಹುಬ್ಬಳ್ಳಿಯಲ್ಲಿರುವ ಮೈಸೂರು ಕಿರ್ಲೋಸ್ಕರ್ ಕಂಪನಿ ಆಡಳಿತ ವರ್ಗವು ಹಠಾತ್ತನೆ ಸಸ್ಪೆನ್‌ಶನ್ ಆಫ್ ಆಪರೇಶನ್ ಘೋಷಿಸಿ, ಸಾವಿರಾರು ಕಾರ್ಮಿಕರು ಬೀದಿ ಪಾಲಾಗುವಂತೆ ಮಾಡಿರುವುದನ್ನು ಧಾರವಾಡ ಸಿಐಟಿಯು ಜಿಲ್ಲಾ ಸಮಿತಿ ಬಲವಾಗಿ ಖಂಡಿಸಿದೆ. ಆಡಳಿತ ವರ್ಗವು ಚುನಾಯಿತ ಪ್ರತಿನಿಧಿ ಸಂಘದೊಂದಿಗೆ ಮಾತುಕತೆ ನಡೆಸಿ, ಕಾರ್ಮಿಕರ ನ್ಯಾಯಯುತ ಬೇಡಿಕೆಗಳನ್ನು ಸೌಹಾರ್ದಯುತವಾಗಿ ಬಗೆ ಹರಿಸಬೇಕೆಂದು ಆಡಳಿತ ವರ್ಗವನ್ನು ಜಿಲ್ಲಾ ಸಮಿತಿ ಒತ್ತಾಯಿಸಿದೆ. ಕಾರ್ಮಿಕರು ಮಾಡುತ್ತಿರುವ ಈ ಒಗ್ಗಟ್ಟಿನ ಹೋರಾಟಕ್ಕೆ ಸಿಐಟಿಯು ಜಿಲ್ಲಾ ಸಮಿತಿ ತನ್ನ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದೆ.

ಕಾರ್ಮಿಕರ ವಜಾಕ್ಕೆ ಖಂಡನೆ

ಬೆಂಗಳೂರು: ನಗರದ ಭಾರತ ಫ್ರಿಡ್ಜ್‌ವೆರ್ನರ್ ಕಾರ್ಖಾನೆ ಆಡಳಿತವು ಕಳೆದ ಎರಡು ವರ್ಷಗಳಿಂದ ಕುಂಟು ನೆಪದ ಆಧಾರದ ಮೇಲೆ ಕಾರ್ಮಿಕರನ್ನು ಅಮಾನತಿನಲ್ಲಿಟ್ಟು, ದೀರ್ಘಕಾಲದಿಂದಲೂ ವಿಚಾರಣೆಯ ನಾಟಕವಾಡುತ್ತಿರುವುದನ್ನು ಕಾರ್ಮಿಕ ಸಂಘವು ವಿರೋಧಿಸಿ ಮುಷ್ಕರ ನಡೆಸಲು ತೀರ್ಮಾನಿಸಿದಾಗ ಮಾತುಕತೆಯ ಮುಖಾಂತರ ಸಮಸ್ಯೆ ಬಗೆಹರಿಸುವುದಾಗಿ ತಿಳಿಸಿ, ಒಪ್ಪಂದ ನಡೆಯುತ್ತಿದ್ದಾಗ ಆಡಳಿತ ವರ್ಗವು ಸಂಘದ ಅಧ್ಯಕ್ಷರು ಕಾರ್ಯದರ್ಶಿ ಹಾಗೂ ಇಬ್ಬರು ಕಾರ್ಮಿಕರನ್ನು ವಜಾ ಮಾಡಿತು.

ಸರ್ಕಾರವು ಈ ವಿಚಾರವನ್ನು ಪರಿಶೀಲಿಸಿ ಕಂಪನಿಯು ಕೈಗಾರಿಕಾ ಕಾಯಿದೆಯನ್ನು ಉಲ್ಲಂಘಿಸಿರುವುದನ್ನು ಎತ್ತಿ ಹಿಡಿದು ಕೆಲಸದಿಂದ ವಜಾ ಆದ ಕಾರ್ಮಿಕರಿಗೆ ಶೇ. 75 ಸಂಬಳ ನೀಡುವಂತೆ ಆದೇಶಿಸಿತು. ನಂತರ ಕರ್ನಾಟಕ ನ್ಯಾಯಾಲಯವು ಸರ್ಕಾರಿ ಆಜ್ಞೆಯನ್ನು ಎತ್ತಿ ಹಿಡಿದು ವಜಾ ಆದ ಕಾರ್ಮಿಕರಿಗೆ ಮಧ್ಯಂತರವಾಗಿ ಮೂರು ಸಾವಿರ ರೂ ಪರಿಹಾರಕೊಡಬೇಕೆಂದು ಆದೇಶಿಸಿದೆ.

84 ದಿನಗಳ ಮುಷ್ಕರವನ್ನು ವಾಪಸ್ ಪಡೆದು ಕೆಲಸಕ್ಕೆ ಹಾಜರಾದ ಮೇಲೆ ಕಾರ್ಮಿಕರಿಗೆ ಆಡಳಿತ ವರ್ಗವು ಸಲ್ಲದ ಕಿರುಕುಳ ನೀಡುವುದರ ಜೊತೆಗೆ ಪ್ರಾರಂಭದಿಂದ ಕೊಡುತ್ತಿದ್ದ ಮಾಂಸಹಾರಿ ಊಟ, ಮೊಟ್ಟೆ, ಮೊಸರು, ಮತ್ತು ಬ್ರೆಡ್ ಕೊಡುವುದನ್ನು ನಿಲ್ಲಿಸಿದೆ. ಹಾಗೂ ಕ್ಯಾಂಟೀನ್ ಸೌಲಭ್ಯವನ್ನೇ ರದ್ದುಗೊಳಿಸುವ ಸಂಚನ್ನು ಹೊಂದಿದೆ ಎಂದು ಕಾರ್ಮಿಕ ಸಂಘವು ತಿಳಿಸಿದೆ. ಹಾಗೂ ಪ್ರತಿವರ್ಷದಂತೆ ಕಾರ್ಮಿಕರಿಗೆ ಬೋನಸ್ ನೀಡದೆ ಇರುವುದನ್ನು ಸಿಐಟಿಯು ಹಾಗೂ ಬಿ.ಎಫ್.ಡಬ್ಲ್ಯು.ಕೆ.ಎಸ್. ಸಂಘಗಳು ಖಂಡಿಸುವಂತೆ ಕಾರ್ಮಿಕರಿಗೆ ಕರೆ ನೀಡಿವೆ.

"ಬಂಡವಾಳಕ್ಕೆ ಈಗ ಹಾರುವ ರೆಕ್ಕೆ ಇದೆ"

ಕಲ್ಬುರ್ಗಿ ಜಿಲ್ಲಾ ಸಮ್ಮೇಳನ

ಇಡೀ ಪ್ರಪಂಚದ ಬಡವರ ಬದುಕು ಕಷ್ಟಕ್ಕೆ ಸಿಕ್ಕಿಹಾಕಿಕೊಂಡಿದೆ. ಎಲ್ಲಾ ದೇಶಗಳಲ್ಲೂ ಜಾಗತೀಕರಣ ಉದಾರೀಕರಣದ ವಿರುದ್ಧ ಹೋರಾಟ ಮೂಡಿ ಬರುತ್ತಿದೆ ಎಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯದರ್ಶಿ ಮಂಡಳಿ ಸದಸ್ಯ ಜಿ.ಎನ್.ನಾಗರಾಜ್ ಅವರು ಅಭಿಪ್ರಾಯಪಟ್ಟರು.

ಇಂದು ಪ್ರಪಂಚದ ಶ್ರೀಮಂತರು ಇಡೀ ಪ್ರಪಂಚವನ್ನು ಶೋಷಣೆ ಮಾಡಲು ಬಹುರಾಷ್ಟ್ರೀಯ ಕಂಪನಿಗಳನ್ನು ಸ್ಥಾಪಿಸಿ ಎಲ್ಲಾ ದೇಶದ ಸಂಪನ್ಮೂಲಗಳನ್ನು ಕೊಳ್ಳೆ ಹೊಡೆಯಲು ಪ್ರಯತ್ನಿಸುತ್ತಿದ್ದಾರೆ. ಪ್ರಪಂಚದಲ್ಲಿ ಯುದ್ಧವಾಗಿ ದೇಶ ದೇಶ ಹೊಡೆದಾಡುವಂತೆ ಮಾಡಿ ಕೋಟಿಗಟ್ಟಲೆ ಜನರು ಸತ್ತರೂ ನಮಗೆ ಲಾಭವಾಗಬೇಕು ಎಂದು ಈ ಕಂಪನಿಗಳು ಆಸೆಪಡುತ್ತವೆ ಎಂದರು.

ಆಳಂದದಲ್ಲಿ ನಡೆದ 16ನೆಯ ಕಲ್ಬುರ್ಗಿ ಜಿಲ್ಲಾ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಬಂಡವಾಳಕ್ಕೆ ಇಂದು ರೆಕ್ಕೆಗಳು ಇವೆ. ಈಗ ಹಾರುವ ಬಂಡವಾಳ ಚಲಾವಣೆಗೆ ಬಂದಿದೆ. ಜೂಜು ಮೋಜಿನ ಕಟ್ಟೆಗಳಲ್ಲಿ ಕುಳಿತು ಒಬ್ಬ ಶ್ರೀಮಂತ ಭಾರತದ ಆರ್ಥಿಕ ಪರಿಸ್ಥಿತಿಯನ್ನು ಅಲ್ಲೋಲಕಲ್ಲೋಲ ಮಾಡುತ್ತಾನೆ. ಮೊದಲು ಕೈಗಾರಿಕಾ ಬಂಡವಾಳ ಬರುತ್ತಿತ್ತು. ಈಗ ಬರುತ್ತಿರುವುದು ಹಣಕಾಸು ಬಂಡವಾಳ. ಕೈಗಾರಿಕೆಗಳ ಬದಲು ಶೇರು ಮಾರುಕಟ್ಟೆಗೆ ಹಣ ಹರಿದು ಬರುತ್ತಿದೆ.

ನಮ್ಮ ಸರ್ಕಾರ ಭಾರೀ ಗಾತ್ರದಲ್ಲಿ ವಿದೇಶಿ ಬಂಡವಾಳ ನಮ್ಮ ದೇಶಕ್ಕೆ ಹರಿದು ಬರುತ್ತದೆ ಎಂದು ಕೊಚ್ಚಿಕೊಳ್ಳುತ್ತಿದೆ. ಆದರೆ ಅದು ಬರುತ್ತಿರುವುದು ಇಲ್ಲಿನ ಕೈಗಾರಿಕೆಗಳನ್ನು, ಸರ್ಕಾರಿ ಕಂಪನಿಗಳನ್ನು ಅಭಿವೃದ್ಧಿಪಡಿಸಲು ಅಲ್ಲ. ಬದಲಿಗೆ ಅದನ್ನು ನುಂಗಿಹಾಕಲು ಬರುತ್ತಿದೆ. ಈಗಾಗಲೇ ಸ್ಥಾಪನೆ ಆಗಿರುವ ಕೈಗಾರಿಕೆಗಳಲ್ಲಿ ಹಣ ಹೂಡಿ ಕಂಪನಿಗಳನ್ನು ತಮ್ಮದಾಗಿಸಿಕೊಂಡು ನಮ್ಮ ದೇಶದ ವಿಜ್ಞಾನ, ಕಾರ್ಮಿಕರು ಬೆಳೆಸಿರುವ ಕೈಗಾರಿಕೆಗಳನ್ನು ಕೊಂಡು ನಮ್ಮದು ಎನ್ನುತ್ತಿದ್ದಾರೆ. ಈ ಕಾರಣದಿಂದಾಗಿ ಯಾವುದೇ ಹೊಸ ಕೈಗಾರಿಕೆ ಬರದೆ ಇರುವ ಕಂಪನಿಗಳು ಬಾಗಿಲು ಮುಚ್ಚುತ್ತಿವೆ ಎಂದು ನಾಗರಾಜ್ ಅಭಿಪ್ರಾಯಪಟ್ಟರು.

ಇದೇ ರೀತಿ ವಿದೇಶಿ ಬಂಡವಾಳಕ್ಕೆ ಮಣೆಹಾಕಿದ ದೇಶಗಳು ದಿವಾಳಿಯಾಗಿ ಹೋಗಿವೆ. ನಮ್ಮ ದೇಶ ಬಲಿಷ್ಠವಾಗಿದೆ ಎಂದು ಕೊಚ್ಚಿಕೊಳ್ಳುತ್ತಿದ್ದ ಮೆಕ್ಸಿಕೋ ಮೂರೇ ತಿಂಗಳಲ್ಲಿ ಮರುಭೂಮಿಯಾಗಿ ಹೋಯಿತು. ತಮ್ಮ ದೇಶದ ಪೆಟ್ರೋಲ್ ಬಾವಿಗಳನ್ನು ಅಮೇರಿಕಾಗೆ ಅಡ ಇಟ್ಟು ಪಾರಾಗಬೇಕಾದ ಸ್ಥಿತಿ ಬಂತು.

ಥೈಲ್ಯಾಂಡ್‌ನ್ನು ಪೂರ್ವದ ಹುಲಿಗಳು ಎಂದು ಬಣ್ಣಿಸುತ್ತಿದ್ದ ಮನಮೋಹನ್ ಸಿಂಗ್ ನಮ್ಮ ದೇಶವೂ ಹಾಗೆಯೇ ಆಗಬೇಕು ಎನ್ನುತ್ತಿದ್ದಾರೆ. ಥೈಲ್ಯಾಂಡ್‌ನ ಹಣದ ಬೆಲೆ ಅರ್ಧಕ್ಕರ್ಧ ಕುಸಿದು ಹೋಗಿದೆ, ಮನಮೋಹನ್ ಸಿಂಗ್, ಚಿದಂಬರಂ ಅವರ ಬಾಯಿ ಕಟ್ಟಿಹೋಗಿದೆ ಎಂದರು.

ನಮ್ಮ ದೇಶದಲ್ಲಿ ಕಾರ್ಮಿಕ ಕಾಯಿದೆಯನ್ನು ಬದಲಾಯಿಸಲು ಇದೇ ಶಕ್ತಿಗಳು ಐದು ವರ್ಷದಿಂದ ಪ್ರಯತ್ನಿಸುತ್ತಿವೆ. ಕಾರ್ಮಿಕ ಸಂಘ ಕಟ್ಟಿಕೊಳ್ಳಲು ಅವಕಾಶ ನಿರಾಕರಿಸುವುದು ಎಂದರೆ ರೈತ ಮಹಿಳೆ, ವಿದ್ಯಾರ್ಥಿ ಯುವಜನರ ಸಮಸ್ಯೆಯೂ ಹೌದು. ಅಭಿವೃದ್ಧಿ ಹೊಂದದ ದೇಶಗಳ ಕಾರ್ಮಿಕರ, ಜನಸಾಮಾನ್ಯರ ಸ್ಥಿತಿ ಇಂದು ಕಷ್ಟಕ್ಕೀಡಾಗಿದೆ ಎಂದರು.

ಆದರೆ ಈ ಶೋಷಣೆಯ ವಿರುದ್ಧ ದಿಕ್ಕಿನಲ್ಲಿ ಹೋರಾಟವೂ ಬೆಳೆದು ಬರುತ್ತಿದೆ. ಇಡೀ ಪ್ರಪಂಚದ ಬಂಡವಾಳಗಾರರ ವಿರುದ್ಧ ಒಗ್ಗಟ್ಟಾಗಿ ಹೋರಾಟ ಮಾಡುವುದು ಅಗತ್ಯವಾಗಿದೆ. ಮುಂದಿನ ಮೇ ದಿನಾಚರಣೆ ವಿಶ್ವದ ಬಂಡವಾಳಶಾಹಿ ವಿರುದ್ಧ ಶಪಥ ಕೈಗೊಳ್ಳುವ ದಿನಾಚರಣೆಯಾಗಲಿದೆ. ದುಡಿಯುವ ವರ್ಗದ ಚಳುವಳಿಯನ್ನು ಒಟ್ಟಿಗೇ ಸೇರಿಸಲು ಪ್ರಯತ್ನ ನಡೆಯುತ್ತಿದೆ. ಬಂಡವಾಳಶಾಹಿಗಳ ಸೊಕ್ಕನ್ನು ಮುರಿಯುವ, ಏಕಚಕ್ರಾಧಿಪತಿ ಎಂದು ಭಾವಿಸಿರುವ ಅಮೇರಿಕಾದ ವಿರುದ್ಧ ಹೋರಾಟ ಸಂಘಟಿಸುವ ಅರಿವು ದುಡಿಯುವ ವರ್ಗದಲ್ಲಿ ಮೂಡಿಬರುತ್ತದೆ ಎಂದರು.

ಹಿಂದಿನ ದಿನ ಆಳಂದ ಪಟ್ಟಣದಾದ್ಯಂತ ಆಕರ್ಷಕ ಮೆರವಣಿಗೆ ನಡೆಯಿತು. ನಂತರ ಭಾರೀ ಬಹಿರಂಗ ಸಭೆ ನಡೆಸಲಾಯಿತು. ಬಹಿರಂಗ ಸಭೆಯನ್ನು ಉದ್ದೇಶಿಸಿ ನಾಗರಾಜ್ ಮಾತನಾಡಿದರು.

ಸಿ.ಪಿ.ಐ(ಎಂ)ನ ಜಿಲ್ಲಾ ಕಾರ್ಯದರ್ಶಿ ಮಾರುತಿ ಮಾನ್ಪಡೆ ಅವರು ಮಾತನಾಡಿ ಜಿಲ್ಲೆಯ ರಾಜಕೀಯ ಹಣ ಮತ್ತು ಗೂಂಡಾ ಶಕ್ತಿಗಳಿಂದ ನಡೆಯುತ್ತಿದೆ. ಆಳಂದ ಸಕ್ಕರೆ ಕಾರ್ಖಾನೆ ಎಂ.ಎಸ್.ಕೆ. ಮಿಲ್ ನಷ್ಟದಲ್ಲಿ ನಡೆಯುತ್ತಿದ್ದರೂ ಜಿಲ್ಲೆಯ ಸಚಿವರುಗಳಿಗೆ ಈ ಸಮಸ್ಯೆ ಬಗೆಹರಿಸುವ ಇಚ್ಛೆ ಇಲ್ಲ ಎಂದು ಟೀಕಿಸಿದರು.

ಕೆ.ನೀಲಾ, ಬಸವರಾಜ ಮಂಡಿ, ಗಂಗೂಬಾಯಿ, ನೀಲಿ ಕರಗಂಜಿ, ಮೇಘರಾಜ ಕಠಾರೆ ಅವರೂ ಮಾತನಾಡಿದರು. ಬಾಬು ಹಿರಮ ಶೆಟ್ಟಿ ಲಾಡಮುಗಳಿ ಅಧ್ಯಕ್ಷತೆ ವಹಿಸಿದ್ದರು.

ಹುಲಿ ಆಟ : ಶೋಷಣೆಯ ಸ್ವರೂಪಗಳನ್ನು ಬಿಂಬಿಸಿದ ಜಾನಪದ ನೃತ್ಯ

ಜಮೀನ್ದಾರರ ಅಟ್ಟಹಾಸ, ಶೋಷಣೆಯ ಒಳಪದರುಗಳನ್ನು ಒಂದೊಂದಾಗಿ ಬಿಚ್ಚಿಟ್ಟ 'ಹುಲಿ ಆಟ' ಜಾನಪದ ನೃತ್ಯದ ದೃಶ್ಯವು ಸಾವಿರಾರು ಜನರ ಕಣ್ಣಾಗಳಲ್ಲಿ ಛಾಪು ಮೂಡಿಸಿದ್ದು, ಸಿ.ಪಿ.ಐ(ಎಂ)ನ 16ನೇ ಗುಲಬರ್ಗಾ ಜಿಲ್ಲಾ ಸಮ್ಮೇಳನದ ಭವ್ಯ ಮೆರವಣಿಗೆಯ ಒಂದು ವಿಶೇಷವಾಗಿತ್ತು.

ಕೋಲಾಟ, ಲೇಜೀಮು ಮತ್ತು ಡೊಳ್ಳು ಕುಣಿತ ಇತ್ಯಾದಿ ಕಲಾ ತಂಡಗಳ ನಾದ-ಘೋಷಣೆಗಳನ್ನೊಳಗೊಂಡ ಸಾವಿರಾರು ಜನರ ಭವ್ಯ ಮೆರವಣಿಗೆ ಆಳಂದದ ಪ್ರಮುಖ ಬೀದಿಗಳಲ್ಲಿ ಹಾದು ಹೋಗುವಾಗ ಜನ ಉತ್ಸುಕರಾಗಿ ಕಲಾತಂಡಗಳ ದೃಶ್ಯಗಳನ್ನು ವೀಕ್ಷಿಸುತ್ತಿದ್ದರು. ಮೆರವಣಿಗೆಯಲ್ಲಿ ಅರ್ಧದಷ್ಟು ಮಹಿಳೆಯರೇ ಇದ್ದುದು ಇನ್ನೊಂದು ವಿಶೇಷವಾಗಿತ್ತು.

ನಗರದ ವಿವಿಧ ವೃತ್ತಗಳಲ್ಲಿ ಆಕರ್ಷಕವಾಗಿ ಕಟ್ಟಿದ ಪರದಿ, ಬ್ಯಾನರ್ ಮತ್ತು ಪಕ್ಷದ ಧ್ವಜಗಳನ್ನು ಗಮನಿಸಿದಾಗ ಇಡೀ ಊರು ಹಬ್ಬದ ವಾತಾವರಣದಲ್ಲಿ ಮುಳುಗಿದಂತಿತ್ತು.

ದುಡಿಯುವ ಜನರ ಐಕ್ಯತೆಯನ್ನು ಪ್ರತಿಬಿಂಬಿಸಿದ ಭವ್ಯ ಮೆರವಣಿಗೆಯು ನಗರದ ಪೋಲೀಸ್ ಚೌಕಿಗೆ ಬಂದಾಗ ಬಹಿರಂಗ ಸಭೆಯಾಗಿ ಮಾರ್ಪಟ್ಟಿತು.

16ನೇ ರಾಜ್ಯ ಸಮ್ಮೇಳನ
ಕೋಲಾರ
ಡಿ. 30,31'97 - ಜ.1,2'98
ಸಿ.ಪಿ.ಐ.(ಎಂ)

ಮಳವಳ್ಳಿ ತಾಲೂಕು ಸಮ್ಮೇಳನ

ಇತ್ತೀಚೆಗೆ ಮಂಡ್ಯ ಜಿಲ್ಲೆಯ ಮಳವಳ್ಳಿ ಸಿಪಿಐ(ಎಂ)ನ ತಾಲೂಕು ಸಮ್ಮೇಳನ ನಡೆಯಿತು. ಸಮ್ಮೇಳನವನ್ನು ಸಿಪಿಐ(ಎಂ) ನ ರಾಜ್ಯ ಕಾರ್ಯದರ್ಶಿ ಪಿ. ರಾಮಚಂದ್ರ ರಾವ್ ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ತಾಲೂಕು ಕಾರ್ಯದರ್ಶಿ ಜಿ. ರಾಮಕೃಷ್ಣಯ್ಯ ವಹಿಸಿ ಮಾತನಾಡುತ್ತಾ ಪ್ರಜಾಸತ್ತಾತ್ಮಕ ಚಳುವಳಿಯನ್ನು ಪೋಲಿಸರಿಂದ ಹತ್ತಿಕ್ಕಲು ಸಾಧ್ಯವಿಲ್ಲ, ತಾಲೂಕಿನ ಆರೋಗ್ಯಕೇಂದ್ರದ ಅವ್ಯವಸ್ಥೆಯನ್ನು ಪ್ರತಿಭಟಿಸಿದ ಡಿ.ವೈ.ಎಫ್.ಐ ಕಾರ್ಯಕರ್ತರನ್ನು ಬೆದರಿಸಿ ಅವರ ಮೇಲೆ ಸುಳ್ಳು ಮೊಕದ್ದಮೆ ದಾಖಲಿಸಿರುವುದನ್ನು ಪ್ರಸ್ತಾಪಿಸಿ, ತಾಲೂಕಿನ ಪೋಲಿಸರ ನಡವಳಿಕೆಯನ್ನು ಟೀಕಿಸಿದರು. ಸಭೆಯಲ್ಲಿ ಜಿ.ಎನ್. ನಾಗರಾಜ್ ಭಾಗವಹಿಸಿದ್ದರು.

ಸಮ್ಮೇಳನವು ಹಲವಾರು ಸ್ಥಳೀಯ ವಿಷಯಗಳನ್ನು ಚರ್ಚಿಸಿ ಪ್ರದೇಶದ ಅಭಿವೃದ್ಧಿಗೆ ಸಂಬಂಧಿಸಿದಂತೆ ಹಲವು ನಿರ್ಣಯಗಳನ್ನು ಅಂಗೀಕರಿಸಿತು.

ಚಾಮುಂಡೇಶ್ವರಿ ಸಕ್ಕರೆ ಕಾರ್ಖಾನೆಯಿಂದ ರೈತರಿಗೆ ಬರಬೇಕಾಗಿರುವ ಬಾಕಿಗೆ ಒತ್ತಾಯಿಸಿ ಮತ್ತು ಕಬ್ಬಿಗೆ ವೈಜ್ಞಾನಿಕ ಬೆಲೆ ನಿಗದಿಪಡಿಸಲು, ಮಳವಳ್ಳಿಯ ಚರ್ಮ ಕೈಗಾರಿಕೆಯನ್ನು ಅಭಿವೃದ್ಧಿಪಡಿಸುವಂತೆ, ಹಾಗೂ ಇಡೀ ಜಿಲ್ಲೆಗೆ ಸಮಗ್ರರಸ್ತೆ ಮತ್ತು ಬಸ್ ಸೌಕರ್ಯಕ್ಕಾಗಿ ಒತ್ತಾಯಿಸುವ ನಿರ್ಣಯವನ್ನು ಅಂಗೀಕರಿಸಿತು.

ಮಳವಳ್ಳಿ ತಾಲೂಕು ಸಮಿತಿಯನ್ನು ಮಂಡ್ಯ ಜಿಲ್ಲಾ ಪ್ರಾದೇಶಿಕ ಸಮಿತಿಯಾಗಿ ವಿಸ್ತರಿಸಲಾಗಿದೆ.

ನೂತನ ಪ್ರಾದೇಶಿಕ ಸಮಿತಿ

ಕಾರ್ಯದರ್ಶಿಯಾಗಿ ಜಿ.ರಾಮಕೃಷ್ಣ ಸದಸ್ಯರುಗಳಾಗಿ ಲತೀಫ್, ಹನುಮಂತು, ಪುಟ್ಟಮಾದಯ್ಯ, ನಾರಾಯಣ, ಪ್ರಕಾಶ್, ಜವರಯ್ಯ, ಭರತ್ ರಾಜ್, ಶಿವಕಾಳಯ್ಯ ಹಾಗೂ ಟಿ.ಎಲ್. ಕೃಷ್ಣೇಗೌಡ ಆಯ್ಕೆಗೊಂಡಿದ್ದಾರೆ.

ಬರದ ಭೀಕರತೆ ; ಆಳುವ ಮಂದಿಯ ನಿರ್ಲಿಪ್ತತೆ

ಬಳ್ಳಾರಿ ಜಿಲ್ಲಾ ವಾರ್ತಾ ಪತ್ರ **ಯು.ಬಸವರಾಜು**

ಬಳ್ಳಾರಿ ಜಿಲ್ಲೆಯ ಬಹು ಸಂಖ್ಯಾತ ಕೂಲಿಕಾರರು ಬಡರೈತರು, ಮಧ್ಯಮ ರೈತರು ಕಳೆದ 5-6 ತಿಂಗಳಿಂದ ಕಣ್ಣಾಮುಚ್ಚಾಲೆಯಾಡಿದ ಮುಂಗಾರು - ಹಿಂಗಾರು ಮಳೆಗೆ ಬಲಿಯಾಗಿ ಬರದ ಭೀಕರತೆಯನ್ನು ಅನುಭವಿಸುತ್ತಿದ್ದಾರೆ. ನೀರಾವರಿ ಪ್ರದೇಶದಲ್ಲಿ ಅಲ್ಪ ಸ್ವಲ್ಪ ಸಿಗುತ್ತಿದ್ದ. ಕೂಲಿ ಕೆಲಸಗಳು ಹೊಸದಾಗಿ ದಾಳಿ ಇಟ್ಟ ಯಂತ್ರಗಳಿಂದಾಗಿ ಬಹಳ ದೂರದ ಕಾಫಿ ಸೀಮೆಯ ಕಡೆ ತಿರುಗಿ ನೋಡುವ ಅತಂತ್ರ ಸ್ಥಿತಿ ಬಂದಿದೆ. ಕಳೆದ ಒಂದು ತಿಂಗಳಿಂದಲೂ ಜಿಲ್ಲೆಯ ಮುಖ್ಯವಾಗಿ ತಾಂಡಗಳಲ್ಲಿ ಕಾಫಿ ಸೀಮೆಯ ಏಜೆಂಟರು ಬಿಟ್ಟ ಲಾರಿಗಳ ಶಬ್ದ ಕೇಳುತ್ತಲೇ ಅಗಲಿ ಹೋಗುವ ಬಂಧು ಬಳಗದವರ ಗದ್ಗದ ಸ್ವರ ರೋಧನ ಅಲೆ ಅಲೆಯಾಗಿ ಕೇಳಿ ಬರುತ್ತದೆ. ಮತ್ತೊಂದೆಡೆ ಜಿಲ್ಲೆಯ ಪೂರ್ವ ತಾಲೂಕುಗಳಲ್ಲಿ ನೀರಾವರಿ ಇರುವವರು ತುಂಗ ಭದ್ರ ನದಿಯಲ್ಲಿ ಹೂಳು ದಿನೆ ದಿನೆ ತುಂಬುತ್ತಿರುವುದರಿಂದ ಈ ಬಾರಿ ಡಿಸೆಂಬರ್ 15 ರವರೆಗಾದರೂ (ಹೆಚ್.ಸಿ.ಎಲ್.) ನೀರು ದೊರೆಯಲಾರವೇನೋ ಎಂದು ಭಯದ ಭೀತಿಯಲ್ಲಿದ್ದಾರೆ. ಪ್ರತಿ ಎಕರೆಗೆ 10-15 ಸಾವಿರ ರೂಪಾಯಿಯ ನಷ್ಟದ ಕತ್ತಿ ಅವರ ತಲೆಯ ಮೇಲೆ ತೂಗುತ್ತಿದೆ. ನಗರದ ಕಾರ್ಮಿಕರು ಬೆಲೆ ಏರಿಕೆಯ ಇರುಸು-ಮುರಸನ್ನು ಅನುಭವಿಸುತ್ತಾ ಹೋರಾಟದ ದಿಕ್ಕು ನೋಡುತ್ತಿದ್ದಾರೆ. ಮಧ್ಯಮ ವರ್ಗ ಬ್ಯಾಂಕ್, ಎಲ್.ಐ.ಸಿ. ಕೆಲಸಗಾರರು ಎಂದಿನಂತೆ ಹೊಸ ಆರ್ಥಿಕ ನೀತಿ ಹಾಗೂ ಉದಾರವಾದಿ ನಿಲುವಿನ ವಿರುದ್ಧ ಹೋರಾಡುತ್ತಿದ್ದಾರೆ. ವ್ಯಾಪಾರಗಾರರಿಗೆ ಬರದ ಛಾಯೆ ತಗುಲಿದ್ದು ವ್ಯಾಪಾರ ಆಮೆ ವೇಗದಲ್ಲಿ ಸಾಗಿದೆ. ನೀರಾವರಿ ಪ್ರದೇಶದಲ್ಲಿ ಮದುವೆಯ ಕಾಲ ವ್ಯಾಪಾರಕ್ಕೆ ಚಿಗುರು ತಂದಿದೆ.

ಬರಗಾಲ ತೀವ್ರವಾಗಿ ತೊಂದರೆ ಕೊಟ್ಟಿರುವಾಗ ಆಳುವ ಜನತಾದಳ ನಿರ್ಲಿಪ್ತವಾಗಿದೆ. ಆಗಾಗ ಉಸ್ತುವಾರಿ ಮಂತ್ರಿಗಳು ಬರ ಪರಿಹಾರ ಕೈಗೊಳ್ಳುವುದಾಗಿ 6. ತಿಂಗಳಿಂದ ಹೇಳುತ್ತಲೇ ಹೊರಟಿದ್ದಾರೆ. ತಮ್ಮ ಕೀರ್ತಿಯನ್ನು ಹೆಚ್ಚಿಸಿಕೊಳ್ಳಲು ಬರಕ್ಕಿಂತ ಹಂಪಿ ಉತ್ಸವವೇ ಮುಖ್ಯವಾಗಿ ಕಂಡು ಬಂದಿದೆ ಅವರಿಗೆ.

ಜನತಾದಳದ ಮುಸುಕಿನೊಳಗಿನ ಜಗಳ ತೆರೆಯ ಮೇಲೆ ಬಂದಿದೆ. ಎನ್.ಎಮ್. ನಬಿ ಕೂಡ್ಲಿಗಿ ಶಾಸಕರು. ಬಹಿರಂಗವಾಗಿ ಉಸ್ತುವಾರಿ ಮಂತ್ರಿ ಎಂ.ಪಿ. ಪ್ರಕಾಶ್‌ರವರ ವಿರುದ್ಧ ಮುಖ್ಯಮಂತ್ರಿಗಳು ಕೇಂದ್ರ ಮಂತ್ರಿ ಎಸ್.ಆರ್. ಬೊಮ್ಮಾಯಿ ಇದ್ದ ಸಭೆಯಲ್ಲಿಯೇ ಸೆಡ್ಡು ಹೊಡೆದಿದ್ದಾರೆ. ಬಳ್ಳಾರಿಯ ಎ.ಪಿ.ಎಂ.ಸಿ.ಚುನಾವಣೆಯಲ್ಲಿ ಜನತಾದಳದ ಮಹಾಪ್ರಧಾನ ಕಾರ್ಯದರ್ಶಿ ವೈ. ನೆಟ್ಟಕಲ್ಲಪ್ಪ ಹಾಗೂ ಬಳ್ಳಾರಿ ಜಿಲ್ಲೆಯ ಅಧ್ಯಕ್ಷರಾದ ಶಿವರಾಮರೆಡ್ಡಿಯವರು ಒಬ್ಬರ ಕಾಲು ಒಬ್ಬರು ಎಳೆದು ಗೆದ್ದು ಅಧಿಕಾರ ಹಿಡಿಯಬಹುದಾದ ಜಾಗದಲ್ಲಿ ಹೀನಾಯವಾಗಿ ಸೋತು ಸುಣ್ಣವಾಗಿದ್ದಾರೆ. ಸ್ವಜನ ಪಕ್ಷಪಾತ, ಅಧಿಕಾರಶಾಹಿತನ ಸರ್ವಾಧಿಕಾರಿ ನಡವಳಿಕೆ ಕಾರ್ಯಕರ್ತರಲ್ಲಿ ಬೇಸರ ಹುಟ್ಟಿಸಿದೆ.

ಬಹು ಸಂಖ್ಯಾತ ಶಾಸಕರನ್ನು ಹಾಗೂ ಪಾರ್ಲಿಮೆಂಟ್ ಸದಸ್ಯರನ್ನು ಅದೇ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ವಿರೋಧ ಪಕ್ಷದ ಸ್ಥಾನದಲ್ಲಿರುವ ಕಾಂಗ್ರೆಯ, ಬರಗಾಲದ ಕುರಿತು ನಾಮಕಾವಾಸ್ತೆ ಹೋರಾಟ ನಡೆಸಿದೆ. ಶಾಶ್ವತ ಪರಿಹಾರ ಕೇಳುತ್ತಿಲ್ಲ. ಜಿಲ್ಲೆಯ ಎಲ್ಲಾ ತಾಲೂಕಿಗೂ ಎಂ.ಪಿ. ಭೇಟಿಯಿಟ್ಟಿದ್ದಾರೆ.

ಇದರಲ್ಲಿನ ಆಂತರಿಕ ಒಳಜಗಳ ಪಾರ್ಲಿಮೆಂಟ್ ಸದಸ್ಯರನ್ನೂ ಹಿಡಿದೆಳೆದಾಡುವ ಮಟ್ಟಿಗೆ, ಪೋಲೀಸರು ಮಧ್ಯ ಪ್ರವೇಶಿಸ ಬೇಕಾದ ಮಟ್ಟಿಗೆ ಬೆಳೆಯುತ್ತಿದೆ.

ಕೆ.ಸಿ.ಪಿ. ವೀಲಿನಗೊಂಡಾಗ ಬಲವಾಗಿದ್ದ ಕಾಂಗ್ರೆ ಬಂಗಾರಪ್ಪನವರ ಇರಸು ಮುರಸು ಒಡಕಿನ ಧ್ವನಿಗೆ ಬೆಂಬಲವಾಗಿಯೇ ಇದ್ದಾರೆ. ಜಿಲ್ಲೆಯ ಸ್ಪಷ್ಟವಾಗಿ ಬೇರೆ ಬೇರೆ ತಾಲೂಕಿನಲ್ಲಿ 2-3 ಗುಂಪುಗಳು ಕಾಣಿಸುತ್ತವೆ. ಬಳ್ಳಾರಿ ನಗರದ ಶಾಸಕರು ಅವರ ಬಂಧುಗಳು ಈ ಹಿಂದೆ ತಮ್ಮ ಜನಾಂಗದ ಸಮಾವೇಶ ನಡೆಸಿ ಅದರ ಮೇಲೆ ಹಿಡಿತ ಸಾಧಿಸಿದ್ದಾರೆ. ಗುರುತಿಸಲೇ ಬೇಕಾದಷ್ಟು ಗಣನೀಯ ಸಂಖ್ಯೆಯ ಅಂದಾಜು ವಲಸೆಗಾರರ ಬೆಂಬಲ ಇವರಿಗೆ ಇದ್ದೇ ಇದೆ. ನಗರದ ಜನತೆ ಹಾಗೂ ಇವರ ನಡುವಿನ ವೈರುಧ್ಯ ಬೆಳೆಯುತ್ತಲೇ ಇದೆ.

ಇದು ಹೀಗಿರುವಾಗಲೇ ಜಿಲ್ಲೆಯ 2 ಭಾಗಗಳಲ್ಲಿ ಹ.ಬೋ. ಹಳ್ಳಿ ಹಾಗೂ ಶಿರುಗುಪ್ಪಗಳಲ್ಲಿ ಉತ್ತರ ಕರ್ನಾಟಕ ಮಟ್ಟದ ಆರ್.ಎಸ್.ಎಸ್. ವಿಶ್ವ ಹಿಂದೂ ಪರಿಷತ್‌ನ ಶಿಬಿರಗಳನ್ನು ಬಿ.ಜೆ.ಪಿ. ಸಂಘಟಿಸಿದೆ. ಹಂಪಿಯಲ್ಲಿ ಭಜರಂಗ ದಳದ ರಾಜ್ಯ ಸಮಾವೇಶವನ್ನೂ ಹೊಸಪೇಟೆ ಶಾಸಕರ ನಾಯಕತ್ವದಲ್ಲಿ ನಡೆಸುತ್ತಾ ಸದ್ದಿಲ್ಲದೆ ಕೋಮುವಾದಿ ಮೊಟ್ಟೆಗಳನ್ನೂ ಮರಿ ಮಾಡಲು ಕಾವು ಕೊಡುತ್ತಿದೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಹಾಗೂ ಸಿ.ಐ.ಟಿ.ಯು. ಚಟುವಟಿಕೆಗಳು ಶಿರುಗುಪ್ಪ ಬಂಡವಾಳಶಾಹಿ ಭೂಮಾಲಕರನ್ನ ತೀವ್ರವಾಗಿ ತಟ್ಟಿರುವುದು ಅವರು ಇಂಚಿಂಚಾಗಿ ಕೋಮುವಾದದತ್ತ ಸರಿಯುತ್ತಿರುವುದರಲ್ಲಿಕಾಣುತ್ತಿದೆ. ರಾಜ್ಯ ರೈತ ಸಂಘದ ಒಡಕು ಬಿ.ಜೆ.ಪಿ.ಗೆ ಬಲ ತಂದಿದೆಯಾದರು ಗಣನೀಯವಾಗಿಯೇನು ಇಲ್ಲಾ.

●

ಸಿ.ಪಿ.ಐ.(ಎಂ) ಹಾಗೂ ಸಾಮೂಹಿಕ ಸಂಘಟನೆಗಳು ಜನ ಜೀವನ ಪರಿಸ್ಥಿತಿಯ ವಿರುದ್ಧ ಮಿತಿಯಲ್ಲಾದರೂ ಧ್ವನಿ ಎತ್ತುತ್ತಿವೆ. ಬರಗಾಲದ ವಿರುದ್ಧ ನೀರಿಗಾಗಿ, ಬರಗಾಲ ಕಾಮಗಾರಿಗಾಗಿ ಮೇವಿಗಾಗಿ, ಮಹಿಳೆಯರ ಮೇಲಿನ ದೌರ್ಜನ್ಯ ವಿರೋಧಿಸಿ ಕೂಲಿಗಾಗಿ, ಸಂಬಳಕ್ಕಾಗಿ, ನಾಗರಿಕ ಸೌಲಭ್ಯಗಳಿಗಾಗಿ ಚಳುವಳಿ ನಡೆಸಿದೆ. ಈ ಬಾರಿ ಶಾಖಾ ಸಮ್ಮೇಳನಗಳು ಬಹಳ ವಿಶೇಷವಾಗಿ ನಡೆದಿವೆ. ಶೇ. 70 ರಷ್ಟು ಶಾಖೆಗಳು ಕನಿಷ್ಠ 5 ರಿಂದ 10 ಪುಟದ ಕಾರ್ಯದರ್ಶಿಗಳು ಮಂಡಿಸಿದ ಕರಡು ವರದಿಯನ್ನು ಚರ್ಚಿಸಿದೆ. ಪದ್ಧತಿಯಂತೆ ಧ್ವಜಾರೋಹಣ-ಉದ್ಘಾಟನಾ ಸಮಾರಂಭ ಕೆಲವು ಕಡೆ ಕರಪತ್ರ ಹಂಚಿ ಸಾರ್ವಜನಿಕ ಸಭೆ ರ್‍ಯಾಲಿ ನಡೆಸಿವೆ. ಶಾಖಾ ಸಮ್ಮೇಳನಗಳು ತಮ್ಮ ಪ್ರದೇಶದ ವರ್ಗ ವೈರಿಗಳನ್ನು ವರ್ಗ ಮಿತ್ರರನ್ನು ಆ ಪ್ರದೇಶದ ಬಹು ಸಂಖ್ಯಾತ ದುಡಿಯುವ ಜನರನ್ನು ಬಾದಿಸುವ ಪ್ರಮುಖ ಪ್ರಶ್ನೆಗಳನ್ನು - ಅಸ್ಪೃಶ್ಯತೆಯ ಅಸಮಾನತೆಯ ಪ್ರಶ್ನೆಗಳನ್ನು ಗುರುತಿಸಿ ಕಾರ್ಯಕ್ರಮ ರೂಪಿಸಿಕೊಂಡಿರುವುದೊಂದು ವಿಶೇಷವಾಗಿದೆ.

ನೂರಾರು ಜನರ ಬೃಹತ್ ರ್‍ಯಾಲಿಗಳನ್ನು ನಡೆಸಿ ಬಹಿರಂಗ ಅಧಿವೇಶನಗಳನ್ನು ತಾಲೂಕಾ ಸಮ್ಮೇಳನಗಳನ್ನು ನಡೆಸಿವೆ. ಈ ತಾಲೂಕಾ ಸಮ್ಮೇಳನಗಳು ಈ ಹಿಂದಿನ ಜಿಲ್ಲಾ ಸಮ್ಮೇಳನಕ್ಕೆ ಹೋಲಿಸಿದಾಗ ತೀರ ಹತ್ತಿರವಾಗಿ ನಿಲ್ಲುತ್ತವೆ. ಗುಣಾತ್ಮಕವಾಗಿ ಬೆಳೆದಿರುವುದು ಕಂಡು ಬಂದಿದೆ. ಹೊಸ ಆರ್ಥಿಕ ನೀತಿ, ಸಾರ್ವಜನಿಕ ರಂಗದ ಖಾಸಗೀಕರಣ ವಿರೋಧಿಸಿವೆ. ಬರಗಾಲದ ವಿರುದ್ಧ ಶಾಶ್ವತ ಪರಿಹಾರಕ್ಕಾಗಿ ಒತ್ತಾಯಿ ಸಿವೆ. ಜಾತಿವಾದ ಕೋಮುವಾದದ ವಿರುದ್ಧ ಹಾಗೂ ತಾಲೂಕಿನ ಅಭಿವೃದ್ಧಿಯ ಪ್ರಶ್ನೆಗಳನ್ನು ಪ್ರಚಾರ ಗೈಯ್ಯಲು ತೀರ್ಮಾನಿಸಿವೆ.

ಹ.ಬೊ. ಹಳ್ಳಿ ತಾಲೂಕಾ ಸಮ್ಮೇಳನದಲ್ಲಿಯೇ, ಸರಳವಾಗಿ ಮದುವೆಯಾದ ಸ್ಥಳೀಯ ಸಮಿತಿ ಕಾರ್ಯದರ್ಶಿ ಜಗನ್ನಾಥ. ಎಸ್., ಜೆ.ಎಂ.ಎಸ್.ನ ದೇವದಾಸಿ ಸಂಘದ ಮುಂದಾಳು ಕಾಂ|| ಮಾಳಮ್ಮನೊಂದಿಗೆ, ಎಸ್.ಎಫ್. ಐ. ಮುಖಂಡ ರಂಗಪ್ಪ ದಾಸರ ಬಳ್ಳಾರಿಯ ದೇವದಾಸಿಯರ ಹಾಗೂ ಅಂಗನವಾಡಿ ನೌಕರರ ಸಂಘದ ಮುಂದಾಳು ಕಾಂ|| ಎನ್. ಟಿ. ಲಲಿತರವರನ್ನು ತಾಲೂಕಿನ ಜನತೆ ಬಹಳ ಆಶ್ಚರ್ಯದಿಂದ ಸ್ವಾಗತಿಸಿದ್ದಾರೆ. ಹರಿಜನ ಹುಡಿಗಿಯನ್ನು ಲಿಂಗಾಯಿತ ಜಾತಿಯ, ಮೇಲ್ಜಾತಿಯ ಹುಡುಗರು ಮದುವೆಯಾದದ್ದು ಪ್ರಶಂಸೆಗೊಳಪಡುತ್ತಿದೆ.

ಹೊಸಪೇಟೆ ಸ್ಥಳೀಯ ಸಮಿತಿ ಸಮ್ಮೇಳನದಲ್ಲಿ ಮುಂಬರುವ ಹೊಸ ಸಮಿತಿಗೆ ಆಯ್ಕೆ ಮಾಡುವಾಗ ಸಮ್ಮೇಳನ ಗುಪ್ತ ಮತದಾನಕ್ಕೆ ಮೊರೆ ಹೋಯಿತು. 12 ಜಾಗಕ್ಕೆ 13 ಸ್ಪರ್ಧಾಳುಗಳು ಬಂದಿದ್ದರಿಂದ ಈ ಪರಿಸ್ಥಿತಿ ಉಂಟಾಯಿತು. ಹಳೆಯ ಸ್ಥಳೀಯ ಸಮಿತಿಯ ಸೂಚನೆಯ ಒಬ್ಬ ಸಂಗಾತಿಯನ್ನು ಸಮ್ಮೇಳನ ಕೈ ಬಿಟ್ಟಿತು. ಈ ಚುನಾವಣೆಯು ಕಮ್ಯುನಿಸ್ಟ್ ಆಂತರಿಕ ಪ್ರಜಾಸತ್ತೆಯನ್ನು ಹೊಗಳಿ ಹಾಡುವಂತೆ ಮಾಡಿದೆ.

●


ಶಿರುಗುಪ್ಪ ಸ್ಥಳೀಯ ಸಮ್ಮೇಳನದಲ್ಲಿ ಹೊಸದಾಗಿ ಆಯ್ಕೆ ಆದ ಸ್ಥಳೀಯ ಸಮಿತಿಯು ಈ ಬಾರಿ ಹೊಸ ಕಾರ್ಯದರ್ಶಿ ಯನ್ನು ಆಯ್ಕೆ ಮಾಡಿಕೊಂಡಿತು. ನೌಕರರೇ ಮುಖ್ಯವಾಗಿರುವ ಬಳ್ಳಾರಿ ನಗರ ಸಮಿತಿ ಸಮ್ಮೇಳನ ಭಯದ ನೆರಳಿನಿಂದ ಹೊರ ಬಂದು ಬಹಿರಂಗವಾಗಿ ಧ್ವಜಾರೋಹಣ ಗೈದು ಘೋಷಣೆ ಕೂಗಿ ಉದ್ಘಾಟನಾ ಸಮಾರಂಭ ಏರ್ಪಡಿಸಿ ಸಮ್ಮೇಳನ ಯಶಸ್ವಿಯಾಗಿ ನಡೆಸಿತು. ಕೂಲಿಕಾರ, ಬಡರೈತರೇ ಹೆಚ್ಚಾಗಿದ್ದ ಬಳ್ಳಾರಿ ಗ್ರಾಮಾಂತರ ಸ್ಥಳೀಯ ಸಮಿತಿ ಸಮ್ಮೇಳನ ಇಬ್ಬರು ಮಹಿಳೆಯರನ್ನು ಸ್ಥಳೀಯ ಸಮಿತಿಗೆ ಆರಿಸಿದರೆ, ಹೊಸಪೇಟೆ, ಹಗರಿಬೊಮ್ಮನ ಹಳ್ಳಿಗಳ ಸಮ್ಮೇಳನಗಳು ತಲಾ ಒಬ್ಬೊರಂತೆ ಮಹಿಳಾ ಸಂಗಾತಿಯನ್ನು ಸ್ಥಳೀಯ ಸಮಿತಿಗೆ ಆಯ್ಕೆಮಾಡಿ ದಿಟ್ಟ ಹೆಜ್ಜೆಯನ್ನಿಟ್ಟಿವೆ. ○



ಭಾರತೀಯ ವಿಮೋಚನಾ ಸಮರ

ಸುಮಾರು ಎರಡು ಶತಮಾನಗಳ (1757-1947) ವಸಾಹತುಶಾಹಿ ವಿರೋಧಿ ಸಮರದಲ್ಲಿ ಭಾರತ ಒಂದು ಆಧುನಿಕ ರಾಷ್ಟ್ರವಾಗಿ ಬೆಸೆದುಕೊಂಡ, ಭಾರತೀಯ ಜನಗಳ ಅಪಾರ ತ್ಯಾಗ-ಬಲಿದಾನಗಳ ಒಂದು ಪಕ್ಷಿನೋಟ.

ಏಪ್ರಿಲ್ 18, 1930 ರ ರಾತ್ರಿ 10 ಗಂಟೆ. ಯುವಕ್ರಾಂತಿಕಾರಿಗಳ ಗುಂಪೊಂದು ಪೂರ್ವದ ಬಂದರು ನಗರ ಚಿತ್ತಗಾಂಗ್‌ನಲ್ಲಿ ಎರಡು ಶಸ್ತ್ರಾಗಾರಗಳನ್ನು ವಶಪಡಿಸಿಕೊಂಡರು. ಹೊರಜಗತ್ತಿನೊಡನೆ ಚಿತ್ತಗಾಂಗ್‌ನ ಸಂಪರ್ಕವನ್ನು ಕಡಿದು ಹಾಕಿದರು.



ಸೂರ್ಯಸೇನ್ ಅಥವಾ ಮಾಸ್ಟರ್‌ದಾ ಈ ಬಂಡಾಯದ ಮುಖಂಡರು. ಅವರ 'ಭಾರತೀಯ ಗಣತಂತ್ರ ಸೇನೆ' ಚಿತ್ತಗಾಂಗ್ ಸ್ವತಂತ್ರವಾಯಿತು ಎಂದು ಸಾರಿತು. ನಾಲ್ಕು ವರ್ಷಗಳ ಕಾಲ ಈ ಬಂಡಾಯ ನಡೆಯಿತು. **ನಿರ್ಮಲ್ ಸೇನ್, ಅನೂಪ್ ಸಿಂಗ್, ಅಂಬಿಕಾ ಚಕ್ರವರ್ತಿ, ಗಣೇಶ್ ಘೋಷ್, ಕಲ್ಪನಾ ದತ್, ತಾರಕೇಶ್ವರ್ ದಸ್ತಿದಾರ್, ಪ್ರೀತಿಲತಾ ವಡ್ಡೇದರ್** ಈ ಯುವ ಕ್ರಾಂತಿಕಾರಿಗಳಲ್ಲಿ ಪ್ರಮುಖರು.



ಪ್ರೀತಿಲತಾ ವಡ್ಡೇದರ್ ನೇತೃತ್ವದಲ್ಲಿ 7 ಯುವ ಕ್ರಾಂತಿಕಾರಿಗಳು ಯುರೋಪಿಯನ್ ಕ್ಲಬ್ ಮೇಲೆ ಧಾಳಿ ನಡೆಸಿದರು. ನಂತರ ಪೋಲೀಸ್ ಬಂಧನ ತಪ್ಪಿಸಿಕೊಳ್ಳಲು ಆಕೆ ಆತ್ಮಹತ್ಯೆ ಮಾಡಿಕೊಂಡಳು. ಇದಕ್ಕೆ ಮೊದಲು ಜೂನ್ 13 ರಂದು ನಿರ್ಮಲ್ ಸೇನ್ ಮತ್ತೊಬ್ಬ ಸಂಗಾತಿ ಬ್ರಿಟಿಶ್ ಮಿಲಿಟರಿ ಬುಲೆಟ್‌ಗಳಿಗೆ ಬಲಿಯಾದರು. ಸೂರ್ಯಸೇನ್ ಪೋಲೀಸರಿಗೆ ಸಿಕ್ಕಿಬಿದ್ದರು. ಮೇ 1933 ರಲ್ಲಿ ಹಳ್ಳಿಯೊಂದರಲ್ಲಿ ಬ್ರಿಟಿಶ್ ಮಿಲಿಟರಿಯೊಂದಿಗೆ ಸಶಸ್ತ್ರ ಸಂಘರ್ಷದಲ್ಲಿ ಇಬ್ಬರು ಮಡಿದರು. ಕಲ್ಪನಾ ದತ್ ಮತ್ತು ತಾರಕೇಶ್ವರ್ ದಸ್ತಿದಾರ್ ಸಿಕ್ಕಿಬಿದ್ದರು. ಜನವರಿ 1934 ರಲ್ಲಿ ಇನ್ನೂ ಕೆಲವು ಕ್ರಾಂತಿಕಾರಿಗಳು ಗುಂಡುಗಳಿಗೆ ಬಲಿಯಾದರು. ಕೆಲವರನ್ನು ನೇಣಿಗೇರಿಸಲಾಯಿತು.





ಜನವರಿ 12, 1934 ರಂದು ಬ್ರಿಟಿಶರು ಮಾಸ್ಟರ್‌ದಾ ರನ್ನು ಅತ್ಯಂತ ರಾಕ್ಷಸೀ ರೀತಿಯಲ್ಲಿ ಗಲ್ಲಿಗೇರಿಸಿದರು. ಜೊತೆಗೆ ತಾರಕೇಶ್ವರ್ ದಸ್ತಿದಾರ್ ಕೂಡಾ ನೇಣುಗಂಬವೇರಿದರು.

ಏಪ್ರಿಲ್ 23, 1930 **ಪೇಶಾವರ್‌ನಲ್ಲಿ** ಪಠಾಣರ ಒಂದು ದೊಡ್ಡ ಸ್ವಯಂ ಸೇವಕ ಪಡೆ ಗಡಿನಾಡ ಗಾಂಧಿ ಗಫಾರ್ ಖಾನ್ ರವರ ಕರೆಯ ಮೇರೆಗೆ ವಿದೇಶಿ ಬಟ್ಟೆ ಅಂಗಡಿಗಳ ಮುಂದೆ ಪಿಕೆಟಿಂಗ್ ನಡೆಸಿದರು. ಬ್ರಿಟಿಶ್ ಸೈನಿಕ ಪಡೆಗಳು ಅವರನ್ನು ತಡೆದು ಗೋಳೀಬಾರ್ ನಡೆಸಿದರು. ನಿಶ್ಶಸ್ತ್ರ ಸತ್ಯಾಗ್ರಹಿಗಳ ಸಾವು ನೋವುಗಳಿಂದ ಕ್ರುದ್ಧರಾದ ಪಠಾಣರು ಬ್ರಿಟಿಶರ ಸಶಸ್ತ್ರ ವಾಹನಗಳಿಗೆ ಬೆಂಕಿಯಿಟ್ಟರು. ಆಗ ಬ್ರಿಟಿಶರು ಗಢ್‌ವಾಲೀ ಸೈನಿಕ ತುಕಡಿಯನ್ನು ತರಿಸಿದರು. ಈ ಸೈನಿಕರು ಬಹುಪಾಲು ಹಿಂದೂಗಳು. ಪಠಾಣರು ಬಹುಪಾಲು ಮುಸ್ಲಿಮರು. ಗಢ್‌ವಾಲೀ ಸೈನಿಕರಿಗೆ ಪಠಾಣರ ಮೇಲೆ ಗುಂಡು ಹಾರಿಸಲು ಆದೇಶ ನೀಡಲಾಯಿತು. ಈ ಮೂಲಕ ಹಿಂದೂ-ಮುಸ್ಲಿಂ ಗಲಭೆ ಎಬ್ಬಿಸಿ ಈ ಸ್ವಾತಂತ್ರ್ಯ ಹೋರಾಟವನ್ನು ಮುರಿಯುವುದು ಬ್ರಿಟಿಶರ ಸಂಚಾಗಿತ್ತು. ಅವರ ಸಂಚು ವಿಫಲವಾಯಿತು.


ಠಾಕುರ್ ಚಂದ್ರಸಿಂಗ್ ಗಢ್‌ವಾಲೀ ತನ್ನ ಬ್ರಿಟಿಶ್ ಮೇಲಧಿಕಾರಿಯ ಆದೇಶವನ್ನು ಧಿಕ್ಕರಿಸಿ ತನ್ನ ಬಂದೂಕನ್ನು ಕೆಳಕ್ಕೆಸೆದ. ಉಳಿದ ಎಲ್ಲಾ ಸೈನಿಕರೂ ಹಾಗೇ ಮಾಡಿದರು. ನೆರೆದಿದ್ದ ಪಠಾಣರು ಧಾವಿಸಿ ಬಂದು ಸೈನಿಕರನ್ನು ಬಿಗಿದಪ್ಪಿಕೊಂಡರು. ಬ್ರಿಟಿಶ್ ಅಧಿಕಾರಿಗಳು ಓಡಿಹೋದರು. ನಂತರ ಮಿಲಿಟರಿ ನ್ಯಾಯಾಲಯ ಚಂದ್ರ ಸಿಂಗ್‌ಗೆ ಮರಣ ದಂಡನೆಯನ್ನು ವಿಧಿಸಿತು - ನಂತರ ಅದನ್ನು ಆಜೀವನ ಗಡಿಪಾರಿಗೆ ಇಳಿಸಲಾಯಿತು. ಇನ್ನೂ ಕೆಲವು ಗಢ್‌ವಾಲೀ ಸೈನಿಕರಿಗೆ ದೀರ್ಘಾವಧಿ ಶಿಕ್ಷೆಯಾಯಿತು. ಈ ಅವಧಿಯಲ್ಲಿ ಬಹಳದಿನ ಪೇಶಾವರದಲ್ಲಿ ಬ್ರಿಟಿಶ್ ಆಡಳಿತ ಕುಸಿದುಹೋಗಿತ್ತು. ಒಂದು ದೊಡ್ಡ ಬ್ರಿಟಿಶ್ ತುಕಡಿ ಬಂದ ಮೇಲೆಯೇ ಭಯೋತ್ಪಾದನೆ ನಡೆಸಿ ಅದನ್ನು ಬ್ರಿಟಿಶರು ಮತ್ತೆ ವಶಪಡಿಸಿಕೊಳ್ಳಬೇಕಾಯಿತು.

(ಮುಂದುವರಿಯುವುದು)



ಗಡಿನಾಡ ಗಾಂಧಿಯವರ ನೇತೃತ್ವದ ಲಾಲ್‌ಕುರ್ತಾ ಸ್ವಯಂಸೇವಕರು

ಬಿಜೆಪಿಯ ಆಹಾಯವನ್ನು ತಡೆಯಲು ಸಂಯುಕ್ತರಂಗ ರಚನೆಯಾಗಿತ್ತು. ಕಾಂಗ್ರೆಸ್ ಅದಕ್ಕೆ ಬೆಂಬಲ ನೀಡಿದ್ದೂ ಅದೇ ಕಾರಣದಿಂದ. ಆದರೆ ಈಗಿನ ಬೆಳವಣಿಗೆಗಳಿಂದ ಬಿಜೆಪಿಗೆ ಸಂತೋಷವಾಗಿದ್ದರೂ ಕಾಂಗ್ರೆಸ್ ಮಾತ್ರ, ಸಂಯುಕ್ತ ರಂಗದ ಮೇಲೆಯೇ ಹರಿಹಾಯುತ್ತಿದೆಯೇ ಹೊರತು ಬಿಜೆಪಿಯ ಮೇಲಲ್ಲ; ತನ್ನ ಅವನತಿಯ ಬಗ್ಗೆ ಈಗಲೂ ಅದು ಆತ್ಮವಿಮರ್ಶೆ ಮಾಡಿಕೊಳ್ಳುತ್ತಿಲ್ಲ; ಮುಂಬರುವ ಚುನಾವಣೆಗಳಲ್ಲಿ ಜನ ಇದಕ್ಕೆ ಉತ್ತರ ನೀಡುತ್ತಾರೆ ಎನ್ನುತ್ತಾರೆ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿಗಳು.



ವ್ಯಂಗ್ಯ ಚಿತ್ರ ಕೃಪೆ: ಆರ್.ಕೆ.ಲಕ್ಷ್ಮಣ್, ಟೈಮ್ಸ್ ಆಫ್ ಇಂಡಿಯಾದಲ್ಲಿ

ಸುರ್ಜಿತ್

ಕಾಂಗ್ರೆಸ್ ಯಾರ ವಿರುದ್ಧ ಹರಿಹಾಯುತ್ತಿದೆ ?

1996 ರ ಸಾರ್ವತ್ರಿಕ ಚುನಾವಣೆಗಳಿಂದ ಕಾಂಗ್ರೆಸ್ ಪಕ್ಷ ಯಾವುದೇ ಪಾಠ ಕಲಿತಂತಿಲ್ಲ. 545 ಸದಸ್ಯ ಬಲದ ಲೋಕಸಭೆಯಲ್ಲಿ ಕೇವಲ 140 ಸ್ಥಾನಗಳಿಗಿಳಿದು ಭಾರೀ ಸೋಲುಂಡರೂ ಆ ಪಕ್ಷಕ್ಕೆ ಈಗಲೂ ಯಾವ ಸ್ಪಷ್ಟ ದಿಕ್ಕೂ ಇದ್ದಂತಿಲ್ಲ.

ಕಾಂಗ್ರೆಸ್‌ನ ಭಾರೀ ಪರಾಭವದಿಂದ ಅತಿಹೆಚ್ಚು ಪ್ರಯೋಜನ ಪಡೆದ ಬಿಜೆಪಿ ಕೇಂದ್ರದಲ್ಲಿ ಅಧಿಕಾರದ ಗದ್ದುಗೆಯೇರದಂತೆ ತಡೆಯುವ ಪ್ರಯತ್ನದಲ್ಲಿ ರಚನೆಯಾದದ್ದು 13 ಪಕ್ಷಗಳ ಸಂಯುಕ್ತ ರಂಗ. ಆಗ ಅದಕ್ಕೆ ಸರಕಾರ ರಚಿಸಲು ಹೊರಗಿನಿಂದ ಬೆಂಬಲ ನೀಡಿದ ಕಾಂಗ್ರೆಸ್ ಇದಕ್ಕೆ ಕೊಟ್ಟ ಪ್ರಧಾನ ಕಾರಣ - ''*ದೇಶದಲ್ಲಿ ಕೋಮುವಾದಿ ಶಕ್ತಿಗಳು ತಲೆಯತ್ತುವುದನ್ನು ತಡೆಯಲು ಮತ್ತು ಜನಗಳು ಕಾಂಗ್ರೆಸ್‌ಗೆ ಸಂಬಂಧಪಟ್ಟಂತೆ ನೀಡಿದ ಆದೇಶವನ್ನು ಗೌರವಿಸಲು*'' ಎಂದು. ಕೋಮುವಾದಿ ಶಕ್ತಿಗಳ ಬಗ್ಗೆ ರಾಜಿ-ಸಂಧಾನದ ನಿಲುವು ತಳೆದುಕೊಂಡು ಬಂದ ಕಾಂಗ್ರೆಸ್ ಕೊನೆಗಾದರೂ ಕೋಮುವಾದಿ ಶಕ್ತಿಗಳ ವಿರುದ್ಧ ಹೋರಾಟವನ್ನು ನಡೆಸುತ್ತದೆ ಎಂದು ಆಗ ನಿರೀಕ್ಷಿಸಲಾಗಿತ್ತು. ಆಗ ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದ ನರಸಿಂಹರಾಯರು ಹಿಂದಿನ ಸಂದರ್ಭಗಳಲ್ಲಿ ಮಾಡಿದಂತೆ ಮಾಡದೆ ಕಾಂಗ್ರೆಸ್ ಪೂರ್ಣ ಐದು ವರ್ಷಗಳ ಕಾಲ ಸಂಯುಕ್ತ ರಂಗ ಸರ್ಕಾರಕ್ಕೆ ಬೆಂಬಲ ನೀಡುವುದಾಗಿ ಸಾರಿದರು.

ಆದರೆ ಕಾಂಗ್ರೆಸ್‌ನ ನಾಯಕತ್ವ ಬದಲಾದಾಗ ಅದರ ಸಹನೆಯೂ ಕುಸಿದಂತೆ ಕಾಣುತ್ತದೆ. ಯಾವುದೇ ಕಾರಣಗಳಿಲ್ಲದೆ ಮಾರ್ಚ್ 30, 1997 ರಂದು ಕೆಲವೇ ತಿಂಗಳ ಹಿಂದೆ ನೀಡಿದ್ದ ವಚನವನ್ನು ಮುರಿದು ಇದ್ದಕ್ಕಿದ್ದಂತೆ ಬೆಂಬಲ ಹಿಂತೆಗೆದುಕೊಂಡು ತಾನೇ ಸರಕಾರ ರಚಿಸುವುದಾಗಿ ಹೇಳಿಕೊಂಡಿತು.

ಜ್ಞಾನೋದಯವಾದರೂ....

ಈಗ ಕಾಂಗ್ರೆಸ್ ಆರಂಭಿಸಿರುವ ಅಪಪ್ರಚಾರವನ್ನು ಸರಿಯಾಗಿ ತಿಳಿಯಲು ನಂತರದ ಘಟನೆಗಳ ಒಂದು ಸ್ಥೂಲ ಅವಲೋಕನ ಈಗ ಅಗತ್ಯ. ದೇವೇಗೌಡರ ಸರಕಾರ ವಿಶ್ವಾಸ ಠರಾವು ಮಂಡಿಸಿದಾಗ ತಾನು ಏಕಾಂಗಿಯಾಗಿದ್ದೇನೆ ಎಂದು ಕಾಂಗ್ರೆಸ್‌ಗೆ ಜ್ಞಾನೋದಯವಾಯಿತು. ಆಗ ಸಂಯುಕ್ತ ರಂಗ ಸರಕಾರದ ಮುಖಂಡತ್ವ ಬದಲಿಸುವಂತೆ ಅದು ಆಗ್ರಹಿಸಿತು. ಮಧ್ಯಾವಧಿ ಚುನಾವಣೆ ತಪ್ಪಿಸುವ ಆತುರದಲ್ಲಿ ಸಂಯುಕ್ತ ರಂಗದ ಪಕ್ಷಗಳು ಈ ಕಾಂಗ್ರೆಸ್ ಒತ್ತಡಕ್ಕೆ ತಲೆಬಾಗಿದವು. ಎಡಪಕ್ಷಗಳು ಮಾತ್ರ ಇದನ್ನು ಒಪ್ಪಿರಲಿಲ್ಲ. ಏಕೆಂದರೆ ಅಂತಹ ಪರಿಸ್ಥಿತಿ ಸೃಷ್ಟಿಯಾದದ್ದು ಕಾಂಗ್ರೆಸ್‌ನ ಹಠಮಾರಿ ನಿಲುವಿನಿಂದಲೇ.

ಈ ಹೊರಗಣ ಬೆಂಬಲ ಇನ್ನೂ ಕೆಲವು ತಿಂಗಳು ಮುಂದುವರಿದ ನಂತರ ಮತ್ತೆ ಅದು ಕವಣೆ ಎಸೆಯಿತು. ಈಗ ಅದಕ್ಕೆ ದೊರೆತ ಪ್ರಶ್ನೆ - ಗೃಹ ಇಲಾಖೆಗೆ ಸಲ್ಲಿಸಿದ ಜೈನ್ ಆಯೋಗದ ಮಧ್ಯಾವಧಿ ವರದಿ. ಅದರ ಕೆಲವು ಭಾಗಗಳು ಪತ್ರಿಕೆಗೆ ಸೋರಿಹೋಗಿದ್ದವು. ಈ ವರದಿಯನ್ನು ಲೋಕಸಭೆಯಲ್ಲಿ ಮಂಡಿಸಬೇಕೆಂದು ಕಾಂಗ್ರೆಸ್ ಒತ್ತಾಯಿಸಿತು. ನಮ್ಮ ಪಕ್ಷವೂ ಒತ್ತಾಯಿಸಿತು. ಸರಕಾರ ಇದಕ್ಕೆ ತಕ್ಷಣ ಒಪ್ಪಿದಾಗ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ತನ್ನ ನವಂಬರ್ 9, 1997 ರ ಸಭೆಯಲ್ಲಿ ಅದನ್ನು ಸ್ವಾಗತಿಸಿತು -

''*ಸರಕಾರ ನಮ್ಮ ಆಗ್ರಹವನ್ನು ಒಪ್ಪಿಕೊಂಡು ಜೈನ್ ಆಯೋಗದ ವರದಿಯನ್ನು ಚಳಿಗಾಲದ ಅಧಿವೇಶನದ ಮೊದಲ ದಿನ ಅದನ್ನು ಮಂಡಿಸುವುದಾಗಿ ನಮ್ಮ ಉಪಾಧ್ಯಕ್ಷ ಶ್ರೀ ಜಿತೇಂದ್ರ ಪ್ರಸಾದ್‌ರವರಿಗೆ ಕೇಂದ್ರ ಗೃಹ ಮಂತ್ರಿಗಳು ತಿಳಿಸಿರುವುದನ್ನು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ತೃಪ್ತಿಯಿಂದ ಗಮನಿಸಿದೆ*''.

ಇದು ಆ ನಿರ್ಣಯದ ಒಕ್ಕಣಿಕೆ. ಮುಂದುವರೆದು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಹೀಗೆ ಹೇಳಿತ್ತು -

''*ಕೆಲವು ಪಕ್ಷದ ಸದಸ್ಯರು ಪಕ್ಷದ ಘೋಷಿತ ಧೋರಣೆಗಳ ವಿರುದ್ಧ ಮಾಧ್ಯಮಗಳಲ್ಲಿ ತಮ್ಮ ಅಭಿಪ್ರಾಯವನ್ನು, ಮುಖಂಡರ ವಿರುದ್ಧ ಟೀಕೆಗಳನ್ನು ಮಾಡಿ ಅಶಿಸ್ತಿನಿಂದ ವರ್ತಿಸುತ್ತಿದ್ದಾರೆ ಎಂದು ಖೇದದಿಂದ ಗಮನಿಸುತ್ತದೆ*''

ಮತ್ತೊಂದು ರಂಪ

ಆದರೂ ಮರುದಿನದಿಂದಲೇ ಡಿಎಂಕೆ ರಾಜೀವ್ ಗಾಂಧಿಯವರ ಹತ್ಯೆಯಲ್ಲಿ ಶಾಮೀಲಾಗಿದೆ ಎಂಬ ಅರ್ಥಹೀನ, ಆಧಾರಹೀನ ಕಾರಣ ನೀಡಿ ಡಿಎಂಕೆ ಮಂತ್ರಿಗಳನ್ನು ಸರಕಾರದಿಂದ ಕೈಬಿಡಬೇಕು ಎಂದು ಕಾಂಗ್ರೆಸ್‌ನ ಹಲವು ಮುಖಂಡರು ಹೇಳಿಕೆ ನೀಡಲಾರಂಭಿಸಿದರು. ಜೈನ್ ವರದಿಯಲ್ಲೂ ಎಲ್ಲೂ ಈ ಆಪಾದನೆಯನ್ನು ಸಾಬೀತು ಮಾಡುವ ಸೂಚನೆಗಳು ಇರದಿದ್ದರೂ ಇದು ಮುಂದುವರಿಯಿತು.

ಕಾಂಗ್ರೆಸ್ ಅಧ್ಯಕ್ಷರ ಮೇಲೆ ಎಂತಹ ಒತ್ತಡ ಬಂತೆಂದರೆ ನವಂಬರ್ 17 ರಂದು ಅವರು ಕಾಂಗ್ರೆಸ್ ಸಂಸದೀಯ ಪಕ್ಷದ ಸಭೆ ಕರೆಯಬೇಕಾಯಿತು. ಅವರು ತಮ್ಮ ''ಎಂ.ಪಿ.ಗಳ ಭಾವನೆಗಳನ್ನು ಅರಿತು ಒಂದು ನಿಲುವು ತಗೊಳ್ಳುವಂತೆ'' ಒತ್ತಡ ಬಂತು.

ಇಷ್ಟೆಲ್ಲಾ ರಂಪಗಳ ನಡುವೆ ಕೆಲವು ದಿನಗಳ ಹಿಂದೆಯಷ್ಟೇ ನಡೆದ ಉತ್ತರ ಪ್ರದೇಶದ ವಿಧಾನ ಸಭೆಯಲ್ಲಿನ ಘಟನೆಗಳು ಹಿನ್ನಡೆಗೆ ಸರಿದವು. ಅಲ್ಲಿಯ ಕಲ್ಯಾಣ್ ಸಿಂಗ್ ಸರಕಾರದ ಅನೀತಿಯುತ ಮಸಲತ್ತುಗಳ ಮೂಲಕ, ಹಣ ಮತ್ತು ಮಂತ್ರಿ ಪದವಿಯ ಆಮಿಷ ತೋರಿಸಿ ತನ್ನ ಅಲ್ಪಮತವನ್ನು ಬಹುಮತವಾಗಿ ಪರಿವರ್ತಿಸಿತು. ಕಾಂಗ್ರೆಸ್ಸಿನ 39 ರಲ್ಲಿ 22 ಸದಸ್ಯರು ಸಿಡಿದು ಹೋಗಿ ಬಿಜೆಪಿಯನ್ನು ಬೆಂಬಲಿಸಿದರು. ಅದೇ ರೀತಿ ಬಿಎಸ್‌ಪಿಯ 12 ಎಂಎಲ್‌ಎಗಳು ಜನತಾದಳದ ಮೂವರು ಎಂಎಲ್‌ಎಗಳು ಆಮಿಷಕ್ಕೆ ಬಲಿಬಿದ್ದರು.

ಬಿಜೆಪಿ ಅಧಿಕಾರಕ್ಕಾಗಿ ಏನು ಮಾಡಲೂ ಸಿದ್ಧವಿರುವ ಒಂದು ಪಕ್ಷ ಎಂದು ಬಯಲಿಗೆಳೆದ ಘಟನೆಯಿದು. ಕಾಂಗ್ರೆಸ್ ಈ ಪ್ರಶ್ನೆಯನ್ನು ಲೋಕಸಭೆಯಲ್ಲಿ ಎತ್ತಿ ಬಿಜೆಪಿಯನ್ನು ಇಕ್ಕಟ್ಟಿನಲ್ಲಿ ಸಿಲುಕಿಸುವ ಅವಕಾಶವಿತ್ತು. ಆದರೆ ಬಿ.ಜೆ.ಪಿ. ತನ್ನ ಉತ್ತರ ಪ್ರದೇಶದ ಗಂಭೀರ ಉಲ್ಲಂಘನೆಗಳಿಗೆ ಶಿಕ್ಷೆ ಅನುಭವಿಸದೆ ತಪ್ಪಿಸಿಕೊಳ್ಳಲು ಕಾಂಗ್ರೆಸ್ ಅವಕಾಶ ಮಾಡಿಕೊಟ್ಟಿತು. ತನ್ನ ಹಠಮಾರಿ ನಿಲುವಿನಿಂದಾಗಿ ಅದು ಜೈನ್ ಆಯೋಗದ ವರದಿಯ ಬಗ್ಗೆಯಾಗಲಿ, ಬಿಜೆಪಿಯ ಕುಕೃತ್ಯಗಳ ಬಗ್ಗೆಯಾಗಲೀ ಚರ್ಚೆ ನಡೆಸಲು ಅವಕಾಶವನ್ನೇ ನೀಡಲಿಲ್ಲ. ತಪ್ಪಿತಸ್ಥ ಎಂದು ಸಾಬೀತೇ ಆಗದ ಪಕ್ಷವೊಂದನ್ನು ಶಿಕ್ಷಿಸುವುದಷ್ಟೇ ಅದಕ್ಕೆ ಬೇಕಾಗಿತ್ತು.

ರಾಜೀವ್ ಗಾಂಧಿಯ ಹತ್ಯೆಗೆ ಕಾರಣವಾದ ಪಿತೂರಿದಾರರನ್ನು ಪತ್ತೆ ಹಚ್ಚಲು ತಾನೂ ಅಷ್ಟೇ ಕಾತುರವಾಗಿರುವುದಾಗಿ ಸ್ಪಷ್ಟಪಡಿಸಿದ ಸಂಯುಕ್ತರಂಗ ಅಷ್ಟೇ ದೃಢವಾಗಿ ಕಾಂಗ್ರೆಸ್ಸಿನ ತರ್ಕಹೀನ ಬೇಡಿಕೆಯನ್ನು ಒಪ್ಪಲು ಸಾಧ್ಯವಿಲ್ಲ ಎಂದೂ ಸ್ಪಷ್ಟ ಪಡಿಸಬೇಕಾಯಿತು.

ಎಲ್‌ಟಿಟಿಇ ಗೆ ಬೆಂಬಲದ ಬಗ್ಗೆ ಹೇಳಬೇಕಾದರೆ ತಮಿಳುನಾಡಿನ ವಿವಿಧ ಪಕ್ಷಗಳು ಬೇರೆ ಬೇರೆ ಸಮಯಗಳಲ್ಲಿ ಅದಕ್ಕೆ ಸಹಾಯ ನೀಡಿದ್ದಾರೆ. ಕಾಂಗ್ರೆಸ್ ಕೂಡಾ ಇದರಲ್ಲಿ ಸೇರಿದೆ. ಸಿಪಿಐ(ಎಂ) ಮಾತ್ರವೇ ಎಲ್‌ಟಿಟಿಇಯನ್ನು ಬೆಂಬಲಿಸದೆ ತಮಿಳು ಸಮಸ್ಯೆಗೆ ಶ್ರೀಲಂಕಾದ ಒಗ್ಗಟ್ಟಿನ ಚೌಕಟ್ಟಿನೊಳಗೇ ಪರಿಹಾರ ಪಡೆಯಬೇಕು ಎಂದು ಒತ್ತಾಯಿಸುತ್ತಾ ಬಂದಿತ್ತು.

ಇಷ್ಟೇ ಅಲ್ಲ, 1996 ರ ಚುನಾವಣೆಗಳಲ್ಲೂ ಕಾಂಗ್ರೆಸ್ ಡಿಎಂಕೆ ಯೊಂದಿಗೆ ಒಂದು ವ್ಯವಹಾರ ಕುದುರಿಸಲು ವಿವಿಧ ಪ್ರಯತ್ನಗಳನ್ನು ನಡೆಸಿತ್ತು ಎಂಬುದನ್ನು ಕಾಂಗ್ರೆಸ್ಸಿಗರು ಮರೆತಂತೆ ಕಾಣುತ್ತದೆ. ತಮಿಳುನಾಡು ಪ್ರದೇಶ ಕಾಂಗ್ರೆಸ್ ಸಮಿತಿ ಪೂರ್ಣವಾಗಿ ಡಿಎಂಕೆಯೊಂದಿಗೆ ಮೈತ್ರಿ ಬಯಸಿತ್ತು. ಆದರೆ ಎಐಎಡಿಎಂಕೆಯೊಂದಿಗೆ ಮೈತ್ರಿ ಮಾಡಿಕೊಂಡರೆ ಹೆಚ್ಚು ಸ್ಥಾನಗಳು ದೊರೆಯಬಹುದೆಂಬ ಲೆಕ್ಕಾಚಾರದಿಂದ ಕೇಂದ್ರ ನಾಯಕತ್ವ ಇದಕ್ಕೆ ಒಪ್ಪದಾಗ ಕೊನೆಗೆ ಟಿಎಂಸಿ ರಚನೆಯಾಗಿ ಅದು ಡಿಎಂಕೆಯೊಂದಿಗೆ ಮೈತ್ರಿ ಮಾಡಿಕೊಂಡಿತು. ಈ ಕೂಟ ಚುನಾವಣೆಗಳಲ್ಲಿ ಭಾರೀ ಗೆಲುವು ಪಡೆದು ಕಾಂಗ್ರೆಸ್ ಅತ್ಯಂತ ಹೀನ ಸೋಲು ಉಣ್ಣಬೇಕಾಯಿತು.

ಗುಜ್ರಾಲ್ ಸರಕಾರಕ್ಕೆ ಕಾಂಗ್ರೆಸ್ ಬೆಂಬಲ ಹಿಂತೆಗೆದುಕೊಂಡಾಗ ರಾಜೀನಾಮೆ ನೀಡಿ, ಸಂಯುಕ್ತ ರಂಗದ ಎಲ್ಲಾ ಪಕ್ಷಗಳು ಬಿಜೆಪಿ ಅಥವಾ ಕಾಂಗ್ರೆಸ್ ನೇತೃತ್ವದ ಯಾವುದೇ ಸರಕಾರಕ್ಕೆ ಬೆಂಬಲ ನೀಡುವುದಿಲ್ಲ ಎಂದು ರಾಷ್ಟ್ರಪತಿಗಳಿಗೆ ಪತ್ರ ಬರೆದದ್ದರಿಂದ ಬಿಜೆಪಿಯ ಪ್ರಯತ್ನ ವಿಫಲವಾಯಿತು. ಬದಲಿಗೆ ಅವರ ನಿಜ ಬಣ್ಣ ಈ ಪ್ರಕ್ರಿಯೆಯಲ್ಲಿ ಬಯಲಾಯಿತು.

ವೈರುಧ್ಯಗಳ ಕಂತೆ

ಈಗಿನ ಸನ್ನಿವೇಶಕ್ಕೆ ಕಾಂಗ್ರೆಸ್ಸೇ ಹೊಣೆ. ಈ ನಾಟಕದ ನಂತರವೂ ಡಿಸೆಂಬರ್ 6, 1997 ರಂದು ಆ ಪಕ್ಷ ನೀಡಿರುವ ಹೇಳಿಕೆ ಹಲವಾರು ವೈರುಧ್ಯಗಳ ಕಂತೆಯೆಂದೇ ಹೇಳಬೇಕಾಗುತ್ತದೆ. ಮತ್ತೆ ಡಿಎಂಕೆಯ ಬಗ್ಗೆ ಅರ್ಥಹೀನ ಆಪಾದನೆಯನ್ನು ಪುನರುಚ್ಚರಿಸಿರುವುದಲ್ಲದೆ, ಸಂಯುಕ್ತ ರಂಗದ ಘಟಕ ಪಕ್ಷಗಳು ಒಂದಿಲ್ಲೊಂದು ಸಮಯದಲ್ಲಿ ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಂಡಿರುವುದಾಗಿ ಅದು ಆಪಾದಿಸಿದೆ. ಸಿಪಿಐ(ಎಂ) ಎಂದೂ ಬಿಜೆಪಿಯೊಂದಿಗಾಗಲೀ, ಅದರ ಹಿಂದಿನ ಅವತಾರಗಳಿಂದಾಗಲೀ ಮೈತ್ರಿಗಿಳಿದಿಲ್ಲ. ಕಾಂಗ್ರೆಸ್ 1977 ರ ಬಗ್ಗೆ ಹೇಳಿದೆ. ಆಗ ಅಧಿಕಾರಕ್ಕೆ ಬಂದ ಪಕ್ಷ ಜನತಾಪಕ್ಷ. ತುರ್ತು ಪರಿಸ್ಥಿತಿಯ ಆಳ್ವಿಕೆಯ ವಿರುದ್ಧ ಹೋರಾಟದ ನಿರ್ದಿಷ್ಟ ಸನ್ನಿವೇಶದಲ್ಲಿ ಮೂಡಿ ಬಂದ ಪಕ್ಷ ಅದು. ಜನಸಂಘವೂ ಸೇರಿದಂತೆ ಹಲವು ಪಕ್ಷಗಳು ವಿಲೀನಗೊಂಡು ಮೂಡಿದ ಪಕ್ಷ ಅದು. ಸಿಪಿಐ(ಎಂ) ಹೊರಗಿನಿಂದ [illegible] ನೀಡಿತು. ಆದರೆ ತುರ್ತುಪರಿಸ್ಥಿತಿಯ ಚೌಕಟ್ಟನ್ನು ಕಳಚಿಹಾಕಿದ ಕೂಡಲೇ ತನ್ನ ಬೆಂಬಲ ಹಿಂತೆಗೆದುಕೊಂಡಿತು.

1990 ರಲ್ಲಿ ಅಧಿಕಾರಕ್ಕೆ ಬಂದದ್ದು ರಾಷ್ಟ್ರೀಯ ರಂಗ ಸರಕಾರ. ಜನತಾದಳ ಬಿಜೆಪಿಯೊಂದಿಗೆ ಒಂದು ಹೊಂದಾಣಿಕೆ ಮಾಡಿಕೊಂಡಿತ್ತು, ಮೈತ್ರಿ ಮಾಡಿಕೊಂಡಿರಲಿಲ್ಲ. ಎಡಪಕ್ಷಗಳಂತೂ ಬಿಜೆಪಿಯೊಂದಿಗೆ ಹೊಂದಾಣಿಕೆಯನ್ನೂ ಮಾಡಿಕೊಂಡಿರಲಿಲ್ಲ. 1990 ಚುನಾವಣೆಗಳ ನಂತರ ರಚನೆಯಾದ ವಿ.ಪಿ.ಸಿಂಗ್ ಸರಕಾರ ಒಂದೆಡೆ ಬಿಜೆಪಿ ಇನ್ನೊಂದೆಡೆ ಎಡ ಪಕ್ಷಗಳ ಬೆಂಬಲ ಪಡೆದಿತ್ತು. ಆದರೆ ಇವೆರಡೂ ಸರಕಾರದಲ್ಲಿ ಭಾಗವಹಿಸಲಿಲ್ಲ. ಆದರೆ ಒಂದು ವಿಷಯವನ್ನು ಮರೆಯಲಾಗದು - ವಿ.ಪಿ.ಸಿಂಗ್ ಸರಕಾರ ಕೋಮುವಾದಿ ಸವಾಲನ್ನು ಎದುರಿಸಿದಾಗ, ಬಿಜೆಪಿ ತನ್ನ ಬೆಂಬಲವನ್ನು ಹಿಂತೆಗೆದುಕೊಂಡಿತು. ಕಾಂಗ್ರೆಸ್ ರಾಷ್ಟ್ರೀಯ ರಂಗದ ಬೆಂಬಲಕ್ಕೆ ಬರುವ ಬದಲು ಬಿಜೆಪಿಯೊಂದಿಗೆ ಮಾತನಾಡಿ ಸರಕಾರವನ್ನು ಉರುಳಿಸಿತು.

ಈಗಲೂ ಆತ್ಮವಿಮರ್ಶೆಯಿಲ್ಲ

ಈಗ ತನ್ನದೇ ಕೃತ್ಯಗಳಲ್ಲಿ ಸಿಲುಕಿಕೊಂಡ ಆ ಪಕ್ಷ ಆ ಕಗ್ಗಂಟಿನಿಂದ ಬಿಡಿಸಿಕೊಳ್ಳಲಾಗದೆ ಬಲಿಪಶುಗಳ ಹುಡುಕಾಟದಲ್ಲಿದೆ. ತನ್ನ ಕೃತ್ಯಗಳಿಂದಾಗಿ ಪತ್ರಿಕೆಗಳಲ್ಲಿ ಅದು ಎಲ್ಲೆಡೆಯಿಂದ ಖಂಡನೆಗೊಳಗಾದರೂ ಇನ್ನೂ ವಾಸ್ತವವನ್ನು ಒಪ್ಪಿಕೊಳ್ಳಲು ಅದಕ್ಕೆ ಸಾಧ್ಯವಾಗುತ್ತಿಲ್ಲ. ತನ್ನ ಜನಬೆಂಬಲ, ಸಾಮಾಜಿಕ ನೆಲೆ ಕುಸಿಯುತ್ತಿದೆ ಎಂಬ ವಾಸ್ತವತೆಯನ್ನು ಅರಿಯಲು ಅದಕ್ಕಿನ್ನೂ ಸಾಧ್ಯವಾಗುತ್ತಿಲ್ಲ. ಅಲ್ಪಸಂಖ್ಯಾತರು, ಪರಿಶಿಷ್ಟ ಜಾತಿ, ಪರಿಶಿಷ್ಟ ಬುಡಕಟ್ಟುಗಳ ಜನ ಕಾಂಗ್ರೆಸ್ಸಿನಿಂದ ಏಕೆ ದೂರ ಸರಿದಿದ್ದಾರೆ. ದೇಶದ 25 ರಾಜ್ಯಗಳಲ್ಲಿ ಕೇವಲ 6 ರಲ್ಲಿ ಮಾತ್ರವೇ ಏಕೆ ಆಳುವ ಪಕ್ಷವಾಗಿದೆ - ತನ್ನ ಸದಸ್ಯರು ಯಾವುದೇ ಹಿಂಜರಿಕೆಯಿಲ್ಲದೆ ಬಿಜೆಪಿಗೆ ಸೇರುವಷ್ಟು, ತನ್ನ ಸೈದ್ಧಾಂತಿಕ ನೆಲೆ ಏಕೆ ಹ್ರಾಸಗೊಂಡಿದೆ ಎಂಬ ಬಗ್ಗೆ ಈಗಲೂ ಆತ್ಮವಿಮರ್ಶೆ ಮಾಡಿಕೊಳ್ಳುತ್ತಿಲ್ಲ.

ಬಿಜೆಪಿಯ ಬೆದರಿಕೆಯನ್ನು ತಡೆಯಲು ಸಂಯುಕ್ತ ರಂಗ ರಚನೆಯಾಗಿತ್ತು. ಆ ಕಾರಣದಿಂದಲೇ ಕಾಂಗ್ರೆಸ್ ಅದಕ್ಕೆ ಬೆಂಬಲ ನೀಡಿತ್ತು. ಆದರೆ ಈಗಿನ ಬೆಳವಣಿಗೆಗಳಿಂದ ಬಿಜೆಪಿಗೆ ಬಹಳ ಸಂತೋಷವಾಗಿದ್ದರೂ ಕಾಂಗ್ರೆಸ್ ತನ್ನ ಧಾಳಿಯನ್ನು ಈಗಲೂ ಸಂಯುಕ್ತ ರಂಗದ ಮೇಲೆ ಕೇಂದ್ರೀಕರಿಸಿದೆಯೇ ಹೊರತು ಬಿಜೆಪಿಯ ಮೇಲಲ್ಲ.

ಮುಂಬರುವ ಚುನಾವಣೆಗಳಲ್ಲಿ ಜನಗಳ ಮುಂದಿರುವ ಪ್ರಮುಖ ಪ್ರಶ್ನೆಗಳಲ್ಲಿ ಸ್ಥಿರತೆಯೂ ಒಂದು ಎಂಬುದರಲ್ಲಿ ಸಂದೇಹವಿಲ್ಲ. ಜನ ಕಾಂಗ್ರೆಸ್ಸಿನ ಆಟವನ್ನು ನೋಡಿದ್ದಾರೆ. ಬಿಜೆಪಿಯ ಆಟವನ್ನೂ ನೋಡಿದ್ದಾರೆ. ಇವೆಲ್ಲದರಲ್ಲಿ ಯಾವುದೇ ಕಳಂಕ ಹಚ್ಚಿಕೊಳ್ಳದೇ ಪಾರಾಗಿರುವುದೆಂದರೆ ದೃಢ ಹಾಗೂ ಯಾವುದೇ ರಾಜಿಗಿಳಿಯದ ನಿಲುವು ತಳೆದ ಸಂಯುಕ್ತ ರಂಗ ಮಾತ್ರವೇ. ಸ್ಥಿರತೆ ಬೇಕಾದರೆ ಅದು ರಾಷ್ಟ್ರೀಯ ಐಕ್ಯತೆ, ನಮ್ಮ ಸಮಾಜದ ಜಾತ್ಯಾತೀತ ಆಧಾರವನ್ನು ಬಲಪಡಿಸುವ ಹಾಗೂ ಬಡತನ, ಹಸಿವು, ನಿರುದ್ಯೋಗ ಇತ್ಯಾದಿ ಸಮಸ್ಯೆಗಳನ್ನು ಎದುರಿಸುವ ಮೂಲಕ ಮಾತ್ರವೇ ಸಾಧ್ಯ.

ಮುಂಬರುವ ದಿನಗಳಲ್ಲಿ ರಾಜಕೀಯ ವಾತಾವರಣದಲ್ಲಿ ಬಿಸಿಯೇರುತ್ತದೆ. ಎಲ್ಲಾ ರಾಜಕೀಯ ಶಕ್ತಿಗಳು ಜನಗಳ ಮುಂದೆ ತಂತಮ್ಮ ದೃಷ್ಟಿಕೋನಗಳನ್ನು ಇಡುತ್ತಾರೆ. ಈಗ ನಡೆದಿರುವ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಅವರು ಕಾಂಗ್ರೆಸ್ ಮತ್ತು ಬಿಜೆಪಿಯನ್ನು ವಿರೋಧಿಸಿ ಸಂಯುಕ್ತ ರಂಗವನ್ನು ಬಯಸುವುದಾಗಿ ತೋರಲಿದ್ದಾರೆ. ಏಕೆಂದರೆ ಪ್ರಸ್ತುತ ಸವಾಲುಗಳಲ್ಲಿ ಕೆಲವನ್ನು ಎದುರಿಸಬಲ್ಲ ಏಕೈಕ ಶಕ್ತಿ ಅದು. ಮುಂಬರುವ ಚುನಾವಣೆಗಳಲ್ಲಿ ಜನಗಳಿಂದ ಅದಕ್ಕೆ ಸ್ಪಂದನ, ಬೆಂಬಲ ದೊರೆಯಲಿದೆ.

○

ಮತ್ತೆ ಭಾರತದ ಹಣಕಾಸು ವಲಯಕ್ಕೆ ಸಾಮ್ರಾಜ್ಯಶಾಹಿಗಳ ಮುತ್ತಿಗೆ

ಈಗ ಮತ್ತೆ ಭಾರತದ ಹಣಕಾಸು ವಲಯಕ್ಕೆ ಸಾಮ್ರಾಜ್ಯಶಾಹಿಗಳು ಮುತ್ತಿಗೆ ಹಾಕಿದ್ದಾರೆ. ಹಾಗೆ ನೋಡಿದರೆ ಭಾರತ ತನ್ನ ಹಣಕಾಸು ವಲಯವನ್ನು ತೆರೆಯುವಂತೆ, ಇನ್ನೂ ಹೆಚ್ಚೆಚ್ಚು ತೆರೆಯುವಂತೆ ಅವರು ಒತ್ತಡ ಹೇರುತ್ತಲೇ ಇದ್ದಾರೆ. ಈಗ ಅಮೇರಿಕದ ವಾಣಿಜ್ಯ ಕಾರ್ಯದರ್ಶಿ ಡೇಲಿ ಬಂದಾಗ ಈ ವಿಷಯ ದಲ್ಲಿ ಇನ್ನೂ ಹೆಚ್ಚಿನ ಒತ್ತಡ ಹೇರಿ ಹೋಗಿದ್ದಾನೆ. ಭಾರತ ತನ್ನ ವಿಮಾ ವಲಯವನ್ನು ತೆರೆಯುವಂತೆ ಮಾಡಲು ಅಮೇರಿಕ ಕೆಲಸ ಮಾಡುತ್ತದೆ ಎಂದು ಆತ ಒಡೆದು ಹೇಳಿದ್ದಾನೆ. ಭಾರತದೊಳಕ್ಕೆ ದೊಡ್ಡ ಪ್ರಮಾಣದಲ್ಲಿ ವಿದೇಶಿ ಹೂಡಿಕೆ ಹರಿದುಬರಲು ಹಣಕಾಸು ವಲಯವನ್ನು ಇನ್ನೂ ಹೆಚ್ಚಿಗೆ ತೆರೆಯಲೇ ಬೇಕು ಎಂದು ಆತ ಹೇಳಿದ್ದಾನೆ.

ಈ ಒತ್ತಡಗಳ ಹಿನ್ನೆಲೆಯಲ್ಲಿ ವಿಶ್ವ ವ್ಯಾಪಾರ ಸಂಸ್ಥೆಯ ಗಡುವಾದ ಡಿಸೆಂಬರ್ 12 ಅನ್ನು ಗಮನದಲ್ಲಿಟ್ಟುಕೊಂಡು ಭಾರತ ಸರ್ಕಾರ ಹಣಕಾಸು ವಲಯವನ್ನು ತೆರೆಯುವ ಒಂದು ಯೋಜನೆಯನ್ನು ಸಿದ್ಧಪಡಿಸಿ ಅದನ್ನು ಜಾರಿಗೆ ತರುವ ನಿರ್ಧಾರವನ್ನೂ ತೆಗೆದುಕೊಂಡಿದೆ. ವಿದೇಶೀ ಬ್ಯಾಂಕುಗಳು ಶಾಖೆ ತೆರೆಯಲು ಅವರು ನಮ್ಮ ದೇಶದಲ್ಲಿ ತಮ್ಮ ಆಸ್ತಿ ಹೆಚ್ಚಿಸಿ ಕೊಳ್ಳಲು, ವಿದೇಶೀ ಬ್ಯಾಂಕುಗಳು ಗ್ರಾಮೀಣ ಪ್ರದೇಶಗಳಿಗೆ ತಮ್ಮ ಸೇವೆಗಳನ್ನು ವಿಸ್ತರಿಸಲು ಅವಕಾಶಗಳನ್ನು/ ರಿಯಾಯಿತಿಗಳನ್ನು ನೀಡುವ ನಿರ್ಧಾರ ಸರ್ಕಾರದ್ದು.

ವಿದೇಶೀ ಬ್ಯಾಂಕುಗಳು ಭಾರತದಲ್ಲಿ ವರ್ಷವೊಂದಕ್ಕೆ 12ಶಾಖೆಗಳನ್ನು ತೆರೆಯಲು ಒಪ್ಪಿಗೆಯನ್ನು ಭಾರತ ನೀಡಿದೆ. ಹೀಗೆ ವಿಶ್ವ ವ್ಯಾಪಾರ ಸಂಸ್ಥೆಯ ಮೂಲಕ ಮತ್ತು ನೇರವಾಗಿ ಒತ್ತಡವನ್ನು ಹೇರಿ ಭಾರತದ ಹಣಕಾಸು ವಲಯವನ್ನು ತಮ್ಮ ಲಾಭಕ್ಕೆ ತೆರೆಯುವಂತೆ ಮಾಡುವಲ್ಲಿ ಅಭಿವೃದ್ಧಿ ಹೊಂದಿದ ದೇಶಗಳು ಸಫಲತೆ ಕಾಣುತ್ತಿದ್ದಾರೆ. ಇದಲ್ಲದೆ ನಮ್ಮ ಕೇಂದ್ರ ಹಣಕಾಸು ಮಂತ್ರಿ ಪಿ. ಚಿದಂಬರಂ ವಿದೇಶೀ ಹೂಡಿಕೆಗೆ ಎಲ್ಲ ತರಹದ ಅನುಕೂಲಗಳನ್ನು ಮಾಡಿಕೊಡಲಾಗುವುದೆಂದು ಭರವಸೆ ನೀಡುತ್ತಲೇ ಬಂದಿದ್ದಾರೆ. ನಮ್ಮ ಹಣಕಾಸು ವಲಯ ವಿದೇಶಿಯರ ಲಾಭಕ್ಕೆ ಹೆಚ್ಚೆಚ್ಚು ಅನುಕೂಲಕರವಾಗುತ್ತ ಹೋದಂತೆಲ್ಲ ನಮ್ಮ ದೇಶದ ಜನಸಾಮಾನ್ಯರಿಗೆ ಹೆಚ್ಚೆಚ್ಚು ಅನಾನುಕೂಲವಾಗುತ್ತ ಹೋಗುತ್ತದೆ. ಅದೇ ಜಾಗತೀಕರಣದ ಉದ್ದೇಶ.

ಭೌದ್ಧಿಕ ಆಸ್ತಿ ಹಕ್ಕುಗಳ ಮೇಲೂ ಒತ್ತಡ

ಹಣಕಾಸು ವಲಯವೊಂದೇ ಅಲ್ಲ. ಡೇಲಿ ಮಹಾಶಯ ಭಾರತ ತನ್ನ ಬೌದ್ಧಿಕ ಆಸ್ತಿ ಹಕ್ಕುಗಳನ್ನು ಹೆಚ್ಚು ಬಲಪಡಿಸ ಬೇಕೆಂದು ಹೇಳಿದ್ದಾನೆ. ಇದರರ್ಥ ಭಾರತದ ಪೇಟೆಂಟ್ ಕಾಯಿದೆಯನ್ನು ಬದಲಾಯಿಸ ಬೇಕೆಂಬುದು. ಭಾರತ ಔಷಧಗಳ ಉತ್ಪಾದನೆಯ ದೊಡ್ಡ ಕೇಂದ್ರವಾಗಬಹುದೆಂದೂ ಆತ ಹೇಳಿದ್ದಾನೆ. ಭಾರತದ ಆರೋಗ್ಯ ಉದ್ದಿಮೆಯ ಮೇಲೆ ಅಮೇರಿಕದ ಬಹು ರಾಷ್ಟ್ರೀಯ ಕಂಪನಿಗಳ ಕಾಕ ಕಣ್ಣು ಬಿದ್ದಿದೆ ಮತ್ತು ಈ ಡೇಲಿ ಮಹಾಶಯ ಆ ಕಂಪನಿಗಳ ಆಶಯವನ್ನು ಈ ಮೂಲಕ ಪ್ರತಿನಿಧಿಸುತ್ತಿದ್ದಾನೆ ಎಂಬುದು ಸ್ಪಷ್ಟ. ಸ್ವಾತಂತ್ರ್ಯಾನಂತರದಲ್ಲಿ ಸೋವಿಯತ್ ಯೂನಿಯನ್ನಿನ ನೆರವಿನ ಮೂಲಕ ಮತ್ತು ಭಾರತದ ಪೇಟೆಂಟ್ ಕಾಯಿದೆಗಳ ಮೂಲಕ ಈ ಔಷಧ ಉದ್ದಿಮೆಯನ್ನು ಬೆಳೆಸಲಾಯಿತೆಂಬುದು ಈಗ ಚರಿತ್ರೆ. ಭಾರತ ಈ ಮೂಲಕ ಹೆಚ್ಚು ಸ್ವಾವಲಂಭಿಯಾಯಿತು. ಈ ಸ್ವಾವಲಂಬನೆ ಸಾಮ್ರಾಜ್ಯಶಾಹಿ ದೇಶಗಳಿಗೆ ಕಣ್ಣುರಿಯುಂಟು ಮಾಡಿತು. ಆದ್ದರಿಂದಲೇ ಅವರು ಭಾರತದ ಪೇಟೆಂಟ್ ಕಾಯಿದೆಯನ್ನು ಬದಲಾಯಿಸಲು ಮೊದಲಿನಿಂದಲೂ ಒತ್ತಡ ಹೇರುತ್ತ ಬಂದಿದ್ದಾರೆ. ಈಗ ಭಾರತ ಸರ್ಕಾರವೂ ಉದಾರೀಕರಣದ ಹೆಸರಿನಲ್ಲಿ ವಿಶ್ವ ವ್ಯಾಪಾರ ಸಂಸ್ಥೆಯ ಹೆಸರಿನಲ್ಲಿ ತನ್ನ ಹಿತಾಸಕ್ತಿಗಳನ್ನೇ ಬದಿಗಿಡುತ್ತಿರುವ ಸಂದರ್ಭದಲ್ಲಿ ಹೆಚ್ಚಿನ ಒತ್ತಡವನ್ನು ಹೇರುತ್ತಿದ್ದಾರೆ.

ಇದಲ್ಲದೆ ಡೇಲಿ ಮಹಾಶಯ ಅವರು ಅಮೇರಿಕ ಭಾರತಕ್ಕೆ ಅವಶ್ಯವಿರುವ ಎಲ್ಲ ತರಹದ ತಾಂತ್ರಿಕ ನೆರವನ್ನು ನೀಡುವ ಭರವಸೆಯನ್ನು ನೀಡಿದ್ದಾನೆ. ಒಂದು ಕಡೆ ಒತ್ತಡ ಮತ್ತು ಇನ್ನೊಂದು ಕಡೆ ಈ ತಾಂತ್ರಿಕ ನೆರವಿನ ಅಮಿಷವನ್ನು ಒಡ್ಡುತ್ತಿದ್ದಾನೆ. ಆತ ವಿಶೇಷವಾಗಿ ವಿದ್ಯುತ್ ವಲಯವನ್ನೂ ಹೆಸರಿಸಿದ್ದಾನೆ. ಎನ್ರಾನ್ ಮತ್ತು ಕೋಜೆಂಟ್ರಿಕ್ಸ್‌ಗಳನ್ನು ಭಾರತದ ವಿದ್ಯುತ್ ವಲಯದಲ್ಲಿ ಎಂತಹ ಅಲ್ಲೋಲ ಕಲ್ಲೋಲ ಉಂಟು ಮಾಡುತ್ತಿವೆ ಎಂಬುದು ಇಂದು ಎಲ್ಲರಿಗೂ ಗೊತ್ತಿರುವ ವಿಷಯ. ಹೀಗಿರುವಾಗ ಭಾರತಕ್ಕೆ ಅಮೇರಿಕದ ಕಂಪನಿಗಳು ತಾಂತ್ರಿಕ ನೆರವು ನೀಡುತ್ತವೆ ಎಂದರೆ ಅದು ಎಂತಹದ್ದೆಂಬುದು ನಿಮಗೆ ಸ್ಪಷ್ಟವಾಗಿಗೊತ್ತಾಗುತ್ತದೆ.

ಇಷ್ಟೆಲ್ಲ ಹೇಳಿರುವುದಲ್ಲದೆ ಭಾರತದ ಕೇಂದ್ರ, ಸರ್ಕಾರ ಉದಾರೀಕರಣವನ್ನು ಬಹಳ ನಿಧಾನವಾಗಿ ಮಾಡುತಿದೆ ಎಂದೂ ಆತ ಆರೋಪ ಹೊರಿಸಿದ್ದಾನೆ. ಭಾರತದ ರಾಜ್ಯ ಸರ್ಕಾರಗಳೇ ಏನಾದರೂ ಮಾಡಿದರ ಮಾಡಬಹುದೇ ಹೊರತು ಕೇಂದ್ರ ಸರ್ಕಾರವಲ್ಲ ಎಂದೂ ಆತ ಹೇಳಿದ್ದಾನೆ. ಈ ಡೇಲಿ ಮಹಾಶಯನ ಉದ್ದೇಶಗಳಂತೂ ಬಹಳ ಸ್ಪಷ್ಟವಲ್ಲವೆ?

ಉದಾರ ಸಂಬಳ

ಖಾಸಗಿ ಕಂಪನಿಗಳು ತಮ್ಮ ಕಾರ್ಯ ನಿರ್ವಾಹಕರುಗಳಿಗೆ ನೀಡುವ ಸಂಬಳದ ಮೇಲೆ ನಿರ್ಬಂಧವಿದೆ .ಆದರೆ ಉದಾರೀಕರಣ ಈ ನಿರ್ಬಂಧವನ್ನು ತೆಗೆದು ಹಾಕುವ ಪ್ರಯತ್ನ ಮಾಡುತ್ತಿದೆ. ಅದು ಬೇರೆ ವಿಷಯ.

ಕೋರ್ ಹೆಲಕೋರ್ ಲಿ. ಎಂಬ ಕಂಪನಿಯ ಅಧ್ಯಕ್ಷ ಹಾಗೂ ವ್ಯವಸ್ಥಾಪಕ ನಿರ್ದೇಶಕ ಸುಶೀಲಕುಮಾರ್ ಹಂಡಾನಿಗೆ 1996-97 ಸಾಲಿಗೆ 76.5 ಲಕ್ಷ ರುಪಾಯಿಗಳ ಸಂಬಳ ನೀಡಲಾಗಿದೆಯಂತೆ. ಇತರೆ ಭತ್ಯೆಗಳ ಜೊತೆಗೆ ಅವರು ಒಟ್ಟು ಪಡೆದದ್ದು 1.15 ಕೋಟಿ ರುಫಾಯಿಗಳಷ್ಟು.

ಇದು ತೀರಾ ಒಳ್ಳೆಯ ಹಣಕಾಸು ಪರಿಸ್ಥಿತಿಯಲ್ಲಿರುವ ಕಂಪನಿ ನೀಡಿದ ಸಂಬಳ ಭತ್ಯೆಯಲ್ಲ. ಬದಲಿಗೆ ಈ ಕಂಪನಿ ಹಣಕಾಸು ಮುಗ್ಗಟ್ಟಿನಲ್ಲಿದೆ. ಆದರೂ ವ್ಯವಸ್ಥಾಪಕ ನಿರ್ದೇಶಕರನಿಗೆ ಈ ಪ್ರಮಾಣದ ಸಂಬಳ, ಭತ್ಯೆ.

ಭಾರತದ ಕಂಪನಿ ಕಾಯಿದೆಯ ಪ್ರಕಾರ ಈ ಕಂಪನಿ 76.40 ಲಕ್ಷ ರೂಪಾಯಿಗಳಷ್ಟು ಹೆಚ್ಚಿಗೆ (ಮಿತಿಗಿಂತ) ನೀಡಿದೆ. ಉದಾರೀಕರಣದಲ್ಲಿ ಏನೇನೆಲ್ಲ ಆಗಬಹುದೆಂಬುದಕ್ಕೆ ಇದೊಂದು ಉದಾಹರಣೆ ಅಷ್ಟೇ. ಕಂಪನಿ ಮುಳುಗುತ್ತಿದ್ದರೂ ಒಬ್ಬ ವ್ಯವಸ್ಥಾಪಕ ನಿರ್ದೇಶಕನಿಗೆ ಇಷ್ಟು ದೊಡ್ಡ ಪ್ರಮಾಣದ ಸಂಬಳ ನೀಡುವುದು ಸೋಜಿಗದ ವಿಷಯವಲ್ಲವೆ?

ಕಾರ್ಮಿಕರಿಗೆ ಹೆಚ್ಚಿನ ಸಂಬಳ ನೀಡಲು ಈ ಕಂಪನಿಗಳು ಎಂದಾದರೂ ಒಪ್ಪುತ್ತವೆಯೇ? ಕಾರ್ಮಿಕ ಸಂಬಳ ಹೆಚ್ಚಳ ದಿಂದಾಗಿ ಉದ್ದಿಮೆ ರೋಗಗ್ರಸ್ತವಾಯಿತೆಂದೇ ಎಷ್ಟೋ ಕಂಪನಿಗಳು ವಾದಿಸುತ್ತವೆ. ಹೇಗಿದೆ ಈ ನ್ಯಾಯ?

ವಾರದ ಆರ್ಥಿಕ ಟಿಪ್ಪಣಿಗಳು

ಜಿ.ಎಸ್.ಮಣಿ

ಔದ್ಯಮಿಕ ಬೆಳವಣಿಗೆಯ ಕನಸು

ಉದಾರೀಕರಣದ ಗತಿ ನೋಡಿದರೆ ಖಂಡಿತವಾಗಿಯೂ ಔದ್ಯಮಿಕ ಬೆಳವಣಿಗೆ ಹೆಚ್ಚಾಗಲೇ ಬೇಕಾಗಿತ್ತು. ಉತ್ತಮ ಮಳೆ, ಬೆಳೆ, ಉದಾರೀಕರಣವಾದಿಯಾದ ಹಣಕಾಸು ಸಚಿವ ಎಲ್ಲವೂ ಅನುಕೂಲಕರವಾಗಿದ್ದರೂ ಔದ್ಯಮಿಕ ಬೆಳವಣಿಗೆ ಮಾತ್ರ ನೆಲ ನೋಡುತ್ತಿದೆ. ಈ ಸಾಲಿನ ಅಂದರೆ 1997-98 ರ ಸಾಲಿನ ಮೊದಲರ್ಧದ ಔದ್ಯಮಿಕ ಬೆಳವಣಿಗೆಯ ದರ ಶೇ. 4.7 ಕ್ಕೆ ಇಳಿದಿದೆ. ಕಳೆದ ವರ್ಷದ ಮೊದಲರ್ಧದಲ್ಲಿ ಈ ದರ ಶೇ. 10.7 ರಷ್ಟಿತ್ತು. ಅಂದರೆ ಶೇ. 6 ರಷ್ಟು ಕುಸಿತ.

ಔದ್ಯಮಿಕ ಬೆಳವಣಿಗೆಯ ಸೂಚ್ಯಂಕದ ಬೆಳವಣಿಗೆ ಕಳೆದ ವರ್ಷದಲ್ಲಿ ಶೇ. 9.4 ರಷ್ಟಿದ್ದದ್ದು ಈ ಶೇ. 2 ಕ್ಕೆ ಇಳಿದಿದೆ. ಒಟ್ಟಾರೆ ಔದ್ಯಮಿಕ ಬೆಳವಣಿಗೆಯಲ್ಲಿನ ಕುಸಿತ ಇನ್ನೂ ಹೆಚ್ಚಾಗುತ್ತಿತ್ತು. ಆದರೆ ವಿದ್ಯುತ್ ಮತ್ತು ಗಣಿಗಾರಿಕೆ ವಲಯಗಳಲ್ಲಿ ಅನುಕ್ರಮವಾಗಿ ಶೇ. 7.2 ಮತ್ತು ಶೇ. 6 ರಷ್ಟು ಬೆಳವಣಿಗೆ ಇರುವುದರಿಂದ ಈ ಕುಸಿತದ ಮಟ್ಟ ಕಡಿಮೆ ಇರುವುದು.

ಬರುವ ದಿನಗಳಲ್ಲಿ ಭಾರತದ ಆರ್ಥಿಕ ಎದುರಿಸಬಹುದಾದ ಕಷ್ಟ, ಕೋಟಲೆಗಳ ಸೂಚನೆಯಲ್ಲವೆ ಇದು?


ಭಾಜಪ ಸರ್ಕಾರದೊಂದಿಗೆ ವ್ಯವಹರಿಸಲು ಸಿದ್ಧವಾಗುತ್ತಿರುವ ಅಮೇರಿಕ

ಭಾರತದ ಭಾಜಪ ಸರ್ಕಾರ ಅಡಳಿತಕ್ಕೆ ಬಂದರೆ ಆಗಲೂ ತಮಗೇ ಲಾಭವಾಗಬೇಕು ಮತ್ತು ಆಗುತ್ತದೆ ಎಂಬುದು ಅಮೇರಿಕದ ಬಯಕೆ ಮತ್ತು ತಿಳುವಳಿಕೆ. ಭಾಜಪದ ನಿಜ ಸ್ವರೂಪವನ್ನು ಅಮೇರಿಕದ ಸರ್ಕಾರ ಅರ್ಥ ಮಾಡಿಕೊಂಡಿದೆ ಎಂಬುದು ಸ್ಪಷ್ಟ.

ಹಾಗೊಮ್ಮೆ ಭಾಜಪ ಸರ್ಕಾರ ಅಧಿಕಾರಕ್ಕೆ ಬಂದರೆ ಅಮೇರಿಕದ ತಂತ್ರ ಏನಿರಬೇಕೆಂಬುದನ್ನು ಅಮೇರಿಕದ ಸರ್ಕಾರ ವಿವರಗಳನ್ನು ಸಂಗ್ರಹಿಸಿ ತಯಾರಿ ಮಾಡಿಕೊಳ್ಳುತ್ತಿದೆಯಂತೆ. ಒಂದು ರೀತಿಯಲ್ಲಿ ಭಾಜಪ ಸರ್ಕಾರ ಆಧಿಕಾರಕ್ಕೆ ಬಂದರೆ ತನಗೆ ಅನುಕೂಲವಾಗುತ್ತದೆ ಎಂಬುದೂ ಅದರ ತಿಳುವಳಿಕೆಯಂತೆ. ಹೇಗಿದೆ ಸಾಮ್ರಾಜ್ಯಶಾಹಿಯ ಈ ತಯಾರಿ?

ಕಾವಿಪಡೆಗಳು ಸ್ವತಃ ವರ್ಣಿಸಿಕೊಂಡ ನಾಲ್ಕು 'ಚ'ಗಳ ಮೂಲಕವೇ ಈಗ ಕಟಕಟೆಯಲ್ಲಿ ನಿಂತಿವೆ. ಅವರ 'ಚೆಹರಾ'(ಮುಖ) ಮೌಲ್ಯಹೀನ ಮುಖ, ಅವರ 'ಚಾಲ್'(ವರ್ತನೆ) ಸಮಯಸಾಧಕತನದ ವರ್ತನೆ, ಅವರ 'ಚರಿತ್'(ಚಾರಿತ್ರ್ಯ) ಎಂದರೆ ರಾಜಕೀಯ ಅವನತಿಯ ವೇಗದ ದಾರಿ, ಅವರ 'ಚಿಂತನ್'(ಚಿಂತನೆ) ಎಂದರೆ ವಂಚನೆ ಎಂದು ಇತ್ತೀಚಿನ ದಿನಗಳಲ್ಲಿ ಹೇಗೆ ಬಯಲಾಗಿದೆ ಎಂಬುದನ್ನು ಇಲ್ಲಿ ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯರಾದ ಸೀತಾರಾಂ ಯೆಚೂರಿಯವರು ವರ್ಣಿಸುತ್ತಾರೆ.

ಬಿಜೆಪಿ: ಇಂದೂ ಬೇಡ ಎಂದೆಂದಿಗೂ ಬೇಡ



ಇತ್ತೀಚಿನ ದಿನಗಳಲ್ಲಿ ನಡೆಯುತ್ತಿರುವ ಒಂದು ದೊಡ್ಡ ರಾಜಕೀಯ ನಾಟಕದಲ್ಲಿ ಬಿಜೆಪಿಯ ವಂಚನೆ, ಕಪಟ, ಇಬ್ಬಂದಿತನ ಎಲ್ಲರ ಗಮನ ಸೆಳೆದಿದೆ. 11ನೇ ಲೋಕಸಭೆಯ ವಿಸರ್ಜನೆಯ ಮೊದಲೂ, ನಂತರವೂ ತಾನು ಕೇಂದ್ರದಲ್ಲಿ ಅಧಿಕಾರ ಗಿಟ್ಟಿಸಲು ಎಲ್ಲಾ ನೀತಿ-ನಿಯಮ ಗಳನ್ನು ಗಾಳಿಗೆ ತೂರಲು, ಅವನತಿಯ ಯಾವ ಪ್ರಪಾತಕ್ಕೂ ಇಳಿಯಲು ಸಿದ್ಧ ಎಂದು ಅದು ಪ್ರದರ್ಶಿಸಿದೆ. ಹಣ ಮತ್ತು ಮಂತ್ರಿ ಪದವಿಯ ಆಮಿಷ ತೋರಿಸಿ ಪಕ್ಷಾಂತರ ನಡೆಸಿ ಬಹುಮತ ಸೃಷ್ಟಿಸುವ ಕಲೆಯಲ್ಲಿ ಪರಿಣತಿ ಪಡೆದ ಬಿಜೆಪಿ ಕೇಂದ್ರದಲ್ಲೂ ಉತ್ತರ ಪ್ರದೇಶದ ಪ್ರಯೋಗವನ್ನು ಪುನರಾವರ್ತಿಸಲು ಪ್ರಯತ್ನಿಸಿತು. ತಮಗೆ ಕೇವಲ 40 ಕಾಂಗ್ರೆಸ್ ಎಂ.ಪಿ.ಗಳನ್ನು ಸೆಳೆಯಲು ಸಾಧ್ಯವಾಯಿತು, ಪಕ್ಷಾಂತರ ವಿರೋಧಿ ಕಾನೂನಿನ ಪ್ರಕಾರ ಬೇಕಾದ ಮೂರನೇ ಒಂದು ಸಂಖ್ಯೆಗಿಂತ ಏಳು ಕಮ್ಮಿಯಾಯಿತು ಎಂದು ಯಾವ ನಾಚಿಕೆಯೂ ಇಲ್ಲದೆ ಬಿಜೆಪಿ ಅಧ್ಯಕ್ಷ ಎಲ್.ಕೆ.ಅಡ್ವಾಣಿಯವರು ಹೇಳಿದ್ದು ನೋಡಿದರೆ ಅದಕ್ಕೀಗ 'ನೀತಿಬದ್ಧ ಶಿಸ್ತಿನ ಪಕ್ಷ'ವೆಂಬ ನಟನೆಯೂ ಬೇಕಿಲ್ಲ ಎಂಬುದು ಕಾಣುತ್ತದೆ.

ಬಿಜೆಪಿಯ ಈ ಹತಾಶ ಕೃತ್ಯಗಳು ಅದರ ನಿಜ ಸ್ವರೂಪವನ್ನು ಬಯಲಿಗೆ ತಂದಿವೆಯಷ್ಟೇ ಅಲ್ಲ, ಮುಂಬರುವ ಚುನಾವಣೆಗಳಲ್ಲಿ ಕೇವಲ ತಾನೇ ಬಹುಮತ ಪಡೆಯಲು ಸಾಧ್ಯವಿಲ್ಲ ಎಂಬ ನಿರ್ಧಾರಕ್ಕೂ ಅದು ಬಂದಿದೆ ಎನ್ನುವುದನ್ನು ತೋರಿವೆ. ಆದ್ದರಿಂದಲೇ ಹೇಗಾದರೂ 'ಮಾಡಿ ಹೊಸ ಚುನಾವಣೆಗಳನ್ನು ತಡೆಯಲು ಅದು ಸರ್ವಪ್ರಯತ್ನ ನಡೆಸಿತು. ಆದರೂ ಅದು ವಿಫಲವಾಯಿತೆನ್ನುವುದು ಒಂದು ಜಾತ್ಯಾತೀತ ಪ್ರಜಾಪ್ರಭುತ್ವವಾದಿ ಗಣತಂತ್ರ ಬಯಸುವವರೆಲ್ಲರೂ ನಿಟ್ಟುಸಿರು ಬಿಡುವಂತೆ ಮಾಡಿದೆ.

ತನಗೆ ಏಕಾಂಗಿಯಾಗಿ ಬಹುಮತ ಸಿಗುವುದಿಲ್ಲ ಎಂಬ ಲೆಕ್ಕಾಚಾರದಿಂದಲೇ ಈ ಕಾವಿಪಡೆ ತನ್ನ ಎಂದಿನ ಕಪಟ, ವಂಚನೆಗೆ ಇಳಿದಿದೆ. ಒಂದೆಡೆ ಆ ಪಕ್ಷದ ಮುಖಂಡತ್ವದ ಒಂದು ವಿಭಾಗ' ಪ್ರಜಾಪ್ರಭುತ್ವ'ದ ವೇಷಧರಿಸಿ ವಿವಿಧ ಪ್ರಾದೇಶಿಕ ಪಕ್ಷಗಳಲ್ಲಿ ಮನವಿ ಮಾಡಿಕೊಳ್ಳುತ್ತಿದ್ದಾರೆ- ಒಂದು ಸಮರ್ಥ ಸರಕಾರ ರಚಿಸಲು ತಮ್ಮೊಂದಿಗೆ ಕೈಜೋಡಿಸಿ ಎಂದು. ಈ ರೀತಿ 'ಗೌರವಸ್ಥ' ರೆಂಬ ಲೇಪ ಹಚ್ಚಿಕೊಂಡು ತಮ್ಮ ಹಿಂದೂ ಕೋಮುವಾದಿ ಅಜೆಂಡಾದ ಉಗ್ರಗಾಮಿತನವನ್ನು ಬಿಟ್ಟು ಬಿಟ್ಟಿದ್ದೇವೆ ಎಂಬ ಭಾವನೆ ಉಂಟುಮಾಡಲು ಅವರು ಪ್ರಯತ್ನಿಸುತ್ತಿದ್ದಾರೆ.

ಇನ್ನೊಂದು ಕಡೆ ಅವರ ಇತರ ಪಡೆಗಳು ಕೋಮು ಭಾವೋದ್ವೇಗವನ್ನು ಬಡಿದೆಬ್ಬಿಸಿ ತಮ್ಮ ಸಾಂಪ್ರದಾಯಿಕ ನೆಲೆಯನ್ನು ಉಳಿಸಿ ಕೊಳ್ಳಲು, ಸಾಧ್ಯವಾದರೆ ಬೆಳೆಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಆದ್ದರಿಂದಲೇ ಕಲ್ಯಾಣ್ ಸಿಂಗ್ ಐದು ವರ್ಷಗಳ ಹಿಂದೆ ಬಾಬ್ರಿ ಮಸೀದಿಯನ್ನು ಧ್ವಂಸ ಮಾಡಿದ ಕರಸೇವಕರನ್ನು 'ಗೌರವಿ'ಸುತ್ತಾರೆ; ವಿಹೆಚ್‌ಪಿ ಅಯೋಧ್ಯೆಯಂತೆ ಕಾಶಿ, ಮಥುರಾಗಳನ್ನು 'ವಿಮೋಚನೆ'ಗೊಳಿಸಲಾಗುತ್ತದೆ ಎಂದು ಬೊಬ್ಬಿಡುತ್ತಿದೆ; ಈ ನಡುವೆ ಭಜರಂಗದಳ ಇಂತಹ ಚಟುವಟಿಕೆಗಳಿಗೆ ತನ್ನ ಕುಪ್ರಸಿದ್ಧ ಭುಜಬಲದ ಸೇವೆಗಳನ್ನು ಪಕ್ಕಾಗೊಳಿಸುವಲ್ಲಿ ಮಗ್ನವಾಗಿದೆ.

ದುಷ್ಟವಿಧಾನ

ಕಾಶಿ ಮತ್ತು ಮಥುರಾ ತನ್ನ ಕಾರ್ಯಕ್ರಮ ಪಟ್ಟಿಯಲ್ಲಿಲ್ಲ ಎಂದು ಬಿಜೆಪಿ ಹೇಳುತ್ತಾ ಬಂದಿತ್ತು. ಇದನ್ನು ಮುಂಬರುವ ಚುನಾವಣೆಗಳಿಗೆ ತನ್ನ ಪಕ್ಷವನ್ನು ಸಿದ್ಧಗೊಳಿಸುವಾಗಲೂ ವಾಜಪೇಯಿ ಪುನರುಚ್ಚರಿಸಿದರು. ಆದರೆ ಅದೇ ವೇಳೆಗೆ ಬಿಜೆಪಿ ಅಧ್ಯಕ್ಷರು - 'ನೀವು ಅಯೋಧ್ಯೆಯ ಮೇಲಿನ ದಾವೆಯನ್ನು ಬಿಟ್ಟು ಕೊಡುವುದಾದರೆ ವಿಹೆಚ್‌ಪಿ ಕಾಶಿ ಮತ್ತು ಮಥುರಾ ಮೇಲಿನ ತಮ್ಮ ದಾವೆಗಳನ್ನು ಬಿಟ್ಟುಕೊಡುವಂತೆ ನಾನು ಮನವೊಲಿಸುತ್ತೇನೆ'' ಎಂದು ಮುಸ್ಲಿಂ ಸಮುದಾಯಕ್ಕೆ ಹೇಳಿದ್ದಾರೆ. ಇದು ಅವರು ಮುಸ್ಲಿಮರೊಂದಿಗೆ ಶಾಂತಿಗೆ ತೋರಿದ ಸೂಚನೆ ಎಂದು ಬಗೆದಿದ್ದಾರೆ. ನಿಜವಾಗಿಯೂ ಇದು ಬಿಜೆಪಿಯ ಕಾರ್ಯಕ್ರಮ ಪಟ್ಟಿಯಲ್ಲಿ ಕಾಶಿ ಮತ್ತು ಮಥುರಾಗಳನ್ನು ಸೇರಿಸುವ ಒಂದು ದುಷ್ಟ ವಿಧಾನವೇ ಸರಿ.

ಕೋಮುಧ್ರುವೀಕರಣ ಮುಂಬರುವ ಚುನಾವಣೆಗಳಲ್ಲಿ ಕಾವಿ ಪಡೆಗಳ ಕಾರ್ಯತಂತ್ರದ ಮೂಲ ಅಂಶವಾಗಿರುತ್ತದೆ ಎಂಬ ಬಗ್ಗೆ ಈಗ ಸಂದೇಹ ಬೇಕಿಲ್ಲ. ಉತ್ತರ ಪ್ರದೇಶದ ಮುಖ್ಯಮಂತ್ರಿಗಳು ಅಯೋಧ್ಯೆಯಲ್ಲಿ ದೇವಸ್ಥಾನ ಕಟ್ಟಬೇಕಾದರೆ ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬರಬೇಕು ಎಂದು ಮತ್ತೆ - ಮತ್ತೆ ಹೇಳುತ್ತಿರುವುದು ಇದಕ್ಕೊಂದು ಸಾಕ್ಷಿ. ಬಿಜೆಪಿ ಇಂತಹ ಕಾರ್ಯಕ್ರಮ ಹಾಕಿಕೊಂಡಿರುವಾಗ ತಮಿಳುನಾಡಿನ ಕೊಯಮತ್ತೂರಿನಲ್ಲಿ ಇತ್ತೀಚೆಗೆ ನಡೆದಂತಹ ಕೋಮು ಗಲಭೆ ನಡೆಯುವುದರಲ್ಲಿ ಆಶ್ಚರ್ಯವೇನಿಲ್ಲ. ದೇಶದ ಈ ಭಾಗದಲ್ಲಿ ಬೇರೆಡೆಗೆ ಹೋಲಿಸಿದರೆ ಕೋಮುಧ್ರುವೀಕರಣ ಅಷ್ಟೇನೂ ಆಗಿರಲಿಲ್ಲ. ಆದರೆ ದಿಲ್ಲಿಯಲ್ಲಿ ಅಧಿಕಾರ ಲಪಟಾಯಿಸುವ ತನ್ನ ರಾಜಕೀಯ ಮಹದಾಸೆಯನ್ನು ಈಡೇರಿಸಿ ಕೊಳ್ಳಲು ಕಾವಿ ಪಡೆಗಳು ಇಂತಹ ಗಲಭೆಗಳನ್ನು ಸೃಷ್ಟಿಸುವುದು ಖಂಡಿತ, ವಿಶೇಷವಾಗಿ ಬೆಂಬಲ ಇಲ್ಲದಿದ್ದ ಜಾಗಗಳಲ್ಲಿ. ಇಂತಹ ಕೆಲಸಗಳಲ್ಲಿ ವಿಹೆಚ್‌ಪಿಗೆ ಮುಸ್ಲಿಂ ಮೂಲಭೂತ ವಾದಿ ಶಕ್ತಿಗಳ ಬೆಂಬಲಕ್ಕೂ ಕೊರತೆಯಿರುವುದಿಲ್ಲ. ದಕ್ಷಿಣದಲ್ಲಿ ಇತ್ತೀಚೆಗೆ ನಡೆದ ರೈಲು ಸ್ಫೋಟಗಳಲ್ಲಿ ಇದನ್ನು ಕಾಣಬಹುದು. ಚುನಾವಣೆಗಳು ಸಮೀಪಿಸಿದಂತೆ ಈ ಕೋಮು ಧ್ರುವೀಕರಣವನ್ನು ಇನ್ನಷ್ಟು ತೀವ್ರಗೊಳಿಸಲು ಬಿಜೆಪಿ ತನ್ನ ಕೈಲಾದದ್ದೆಲ್ಲಾ ಮಾಡುತ್ತದೆ.

ಇದೆಂತಾ ಮಾದರಿ?

ತಾನೊಂದು 'ಭಿನ್ನ ಮಾದರಿಯ ಪಕ್ಷ' ಎಂದು ಇದುವರೆಗೆ ಬಿಜೆಪಿ ಹೆಮ್ಮೆಯಿಂದ ಹೇಳಿಕೊಳ್ಳುತ್ತಿತ್ತು. ಅದರದ್ದೇ ಪದಗುಚ್ಛಗಳನ್ನು ಬಳಸುವುದಾದರೆ 'ಚೆಹರಾ'(ಮುಖ) 'ಚಾಲ್' (ವರ್ತನೆ, ರಾಜಕೀಯ ಮಾರ್ಗ), 'ಚರಿತ್' (ಚಾರಿತ್ರ್ಯ) 'ಚಿಂತನ್' (ತತ್ವ- ಸಿದ್ಧಾಂತ) ಇತರೆಲ್ಲಾ ಆಳುವ ವರ್ಗಗಳ ಪಕ್ಷಗಳಿಗಿಂತ ಮುಖ್ಯವಾಗಿ ಕಾಂಗ್ರೆಸ್ಸಿಗಿಂತ ಭಿನ್ನವಾಗಿದೆ ಎಂದು ಹೇಳಿಕೊಳ್ಳುತ್ತಿತ್ತು. ಆದರೆ ಇವೆಲ್ಲಾ ಪೊಳ್ಳು ಮಾತುಗಳು ಎಂದು ಈಗ ಸಿದ್ಧವಾಗಿದೆ.

ಅದರ 'ಚೆಹರಾ'(ಮುಖ) ಯಾವುದೇ ಮೌಲ್ಯಗಳಿಲ್ಲದ ಅತ್ಯಂತ ಸಮಯಸಾಧಕ ಮುಖ ಎಂಬುದು ಉತ್ತರ ಪ್ರದೇಶದಲ್ಲಿ ಅದು ಪಕ್ಷಾಂತರ ಏರ್ಪಡಿಸಿದ ರೀತಿಯಿಂದ ಸ್ಪಷ್ಟವಾಗಿದೆ. ಈ ಹಿಂದೆ ಬಿಎಸ್‌ಪಿ ಮುಲಾಯಂ ಸಿಂಗ್ ಸರ್ಕಾರದಿಂದ ಬೆಂಬಲ ಹಿಂತೆಗೆದುಕೊಂಡಾಗ ಬಿಜೆಪಿ ಆ ಸರ್ಕಾರವನ್ನು ವಜಾ ಮಾಡಬೇಕೆಂದು ಆಗ್ರಹಿಸಿತ್ತು. ಬಿಎಸ್‌ಪಿಯನ್ನು ಬೆಂಬಲಿಸಿ ಅತುರಾತುರವಾಗಿ ಮಧ್ಯರಾತ್ರಿಯಲ್ಲಿ ಮಾಯಾವತಿಯವರನ್ನು ಮುಖ್ಯಮಂತ್ರಿಯಾಗಿ ಪ್ರತಿಷ್ಠಾಪಿಸಿತು. ಆದರೆ ಈ ಬಾರಿ ಬಿಎಸ್‌ಪಿ ಅದೇ ರೀತಿ ಬೆಂಬಲ ಹಿಂತೆಗೆದುಕೊಂಡಾಗ ಆ ಪ್ರಕಾರವೇ ರಾಜೀನಾಮೆ ಕೊಡುವ ಬದಲು ಬಹುಮತವನ್ನು ವಿಧಾನ ಸಭೆಯಲ್ಲಿ ಸಾಬೀತು ಮಾಡಲು ಅವಕಾಶ ಕೊಡಬೇಕೆಂದು ಹೇಳಲಾರಂಭಿಸಿತು. ಆ ಬಹುಮತವನ್ನು ಹೇಗೆ ಸಾಬೀತು ಮಾಡಿತು ಎಂಬುದು ಎಲ್ಲರಿಗೂ ಗೊತ್ತು. ಅದು ಪ್ರಜಾಪ್ರಭುತ್ವದ ಅತ್ಯಂತ ಹೀನ ತಮಾಷೆಯಂತಿದೆ.

ಅದರ 'ಚಾಲ್'(ವರ್ತನೆ) ಅಂತೂ ಎಂತಹದ್ದೆಂದರೆ ಯಾವುದೇ ವಿಧಾನದಿಂದ ಕೇಂದ್ರದಲ್ಲಿ ತಾನೇ ಸರ್ಕಾರವೆಂದೆನಿಸಿಕೊಳ್ಳಲು ಅದು ನಡೆಸಿದ ನಗ್ನ ಸಮಯಸಾಧಕತನದ ಮಟ್ಟಕ್ಕಿಳಿಯಿತು.

ಇವೆಲ್ಲಕ್ಕೆ ಅನುಗುಣವಾಗಿ ಅದರ 'ಚರಿತ್' (ಚಾರಿತ್ರ್ಯ) ಕೂಡಾ ಕದ್ದಿರುದ್ದವಾಯಿತು. ಸುಮಾರಾಗಿ ಎಲ್ಲಾ ರಾಜ್ಯಗಳಲ್ಲಿ ಯಾವುದೇ ನಾಚಿಕೆಯಿಲ್ಲದ ಗುಂಪುಗಾರಿಕೆಯಿಂದ ಅದೀಗ ತತ್ತರಿಸಿ ಹೋಗಿದೆ. ಅಧಿಕಾರದಾಹ ಮತ್ತು ವೈಯಕ್ತಿಕ ಪ್ರಯೋಜನ

ಪುಟ ೬ ನೋಡಿ

ಕೋಮು ಸೌಹಾರ್ದಕ್ಕೆ ಗುವಾಹಟಿ ರ್‍ಯಾಲಿ

ದೇಶದೊಳಗೆ



- ವಿಶ್ವ

ಡಿಸೆಂಬರ್ ಆರರ ಕರಾಳ ವಾರ್ಷಿಕ ದಿನದ ಅಂಗವಾಗಿ ಅಸ್ಸಾಂ ರಾಜಧಾನಿ ಗುವಾಹಟಿಯಲ್ಲಿ ಡಿಸೆಂಬರ್ 7ರಂದು ಬೃಹತ್ ರ್‍ಯಾಲಿಯೊಂದು ನಡೆಯಿತು. ಐದು ವರ್ಷಗಳ ಹಿಂದೆ ಕಾವಿ ಪಡೆಗಳು ಅಯೋಧ್ಯೆಯಲ್ಲಿ ಬಾಬರಿ ಮಸೀದಿಯನ್ನು ಧ್ವಂಸಗೊಳಿಸಿದ್ದ ಕರಾಳ ಕಾರ್ಯಕ್ಕೆ ಪ್ರತಿಭಟನೆಯಾಗಿ ಪ್ರತಿವರ್ಷ ಡಿಸೆಂಬರ್ ಆರನ್ನು ಕರಾಳ ದಿನವನ್ನಾಗಿ ಜಾತ್ಯಾತೀತ ಶಕ್ತಿಗಳು ದೇಶಾದ್ಯಂತ ಆಚರಿಸುತ್ತವೆ.

ಈ ವರ್ಷ ಡಿಸೆಂಬರ್ ಆರನ್ನು 'ಕೋಮು ಸೌಹಾರ್ದ ಹಾಗೂ ರಾಷ್ಟ್ರೀಯ ಐಕ್ಯತೆ ರಕ್ಷಣೆಯ ದಿನವನ್ನಾಗಿ ಆಚರಿಸಲು ಸಂಯುಕ್ತ ರಂಗ ಕರೆ ಕೊಟ್ಟಿತ್ತು. ಅದಕ್ಕೆ ಸ್ಪಂದಿಸಿ ಆಳುವ ಅಸ್ಸಾಂ ಗಣ ಪರಿಷತ್, ಸಿ.ಪಿ.ಐ.(ಎಂ) ಸಿ.ಪಿ.ಐ. ಮತ್ತು ಯು.ಪಿ. ಪಿ.ಎ. ಸಂಯುಕ್ತವಾಗಿ ಏರ್ಪಡಿಸಿದ್ದ ರ್‍ಯಾಲಿಯನ್ನು ದ್ದೇಶಿಸಿ ಪ್ರಧಾನಿ ಐ.ಕೆ. ಗುಜ್ರಾಲ್ ಮಾತನಾಡಿದರು. ಜಡ್ಜಸ್ ಫೀಲ್ಡ್‌ನಲ್ಲಿ ನಡೆದ ಸಾಮೂಹಿಕ ಸಭೆಯಲ್ಲಿ ಸಾವಿರಾರು ಜನರು ಪಾಲ್ಗೊಂಡಿದ್ದರು.

ದೇಶದ ಐಕ್ಯತೆಯನ್ನು ಕಾಪಾಡುವ ಶಕ್ತಿಗಳನ್ನು ಸಂಯುಕ್ತರಂಗ ಒಂದು ಗೂಡಿಸುತ್ತದೆ ಎಂದು ಪ್ರಧಾನಿ ಗುಜ್ರಾಲ್ ಹೇಳಿದರು. 1992 ರಲ್ಲಿ ಬಾಬರಿ ಮಸೀದಿಯನ್ನು ಕೆಡವಿದ ಬರ್ಬರ ಕೃತ್ಯವನ್ನು ನೆನಪಿಸಿದ ಗುಜ್ರಾಲ್, ಕೆಲವು ಶಕ್ತಿಗಳು ಈಗಲೂ ಜನರನ್ನು ಕೋಮು ಆಧಾರದಲ್ಲಿ ವಿಭಜಿಸಲು ಪ್ರಯತ್ನಿಸುತ್ತಿವೆ ಎಂದರು. ಧರ್ಮದ ಹೆಸರಿನಲ್ಲಿ ಭಾವನೆಗಳನ್ನು ಕೆರಳಿಸಿ ದೇಶದ ಜಾತ್ಯಾತೀತ ಸ್ವರೂಪವನ್ನು ನಾಶಮಾಡಲು ಈ ಶಕ್ತಿಗಳು ಇನ್ನಷ್ಟು ಪ್ರಯತ್ನಗಳನ್ನು ನಡೆಸುತ್ತಿವೆ ಎಂದು ಪ್ರಧಾನಿ ಹೇಳಿದರು. ಬಾಬರಿ ಮಸೀದಿ ಧ್ವಂಸದಂತ ಪ್ರಕರಣಗಳು ಭವಿಷ್ಯದಲ್ಲಿ ಮರುಕಳಿಸದಂತೆ ನಾವು ನೋಡಿಕೊಳ್ಳ ಬೇಕು ಎಂದು ಮನವಿ ಮಾಡಿದರು.

ಭಯೋತ್ಪಾದಕ, ಪ್ರತ್ಯೇಕತಾವಾದಿ ಶಕ್ತಿಗಳ ವಿರುದ್ಧವೂ ಹೋರಾಟ ನಡೆಸಿ ದೇಶದ ಐಕ್ಯವನ್ನು ರಕ್ಷಿಸಲು ಮುಂದಾಗ ಬೇಕು ಎಂದು ಪ್ರಧಾನಿ ಕರೆ ಕೊಟ್ಟರು. ಉಲ್ಫಾ, ಎನ್.ಡಿ. ಎಫ್.ಬಿ., ಬಿ.ಎಲ್. ಟಿ.ಎಫ್. ಮುಂತಾದ ಉಗ್ರಗಾಮಿ ಪ್ರತ್ಯೇಕತಾವಾದಿ ಸಂಘಟನೆಗಳು ಮಾತುಕತೆಗೆ ಮುಂದೆ ಬರಬೇಕು ಎಂಬ ಸಂಯುಕ್ತರಂಗದ ಮನವಿಯನ್ನು ಪ್ರಧಾನಿ ಅವರು ಉಚ್ಚರಿಸಿದರು.

ಮುಖ್ಯಮಂತ್ರಿ ಪ್ರಫುಲ್ಲ ಕುಮಾರ್ ಮೊಹಂತ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸಭೆಯಲ್ಲಿ ಮಾತನಾಡಿದ ಸಿ.ಪಿ.ಐ.(ಎಂ) ಅಸ್ಸಾಂ ರಾಜ್ಯ ಕಾರ್ಯದರ್ಶಿ ಹೇಮೇನ್ ದಾಸ್ ಬಿ.ಜೆ.ಪಿ.- ಆರ್.ಎಸ್.ಎಸ್., ವಿ. ಹೆಚ್.ಪಿ. ಒಳ ಗೊಂಡ ಕಾವಿ ಪಡೆ ಬಾಬರಿ ಮಸೀದಿಯನ್ನು ನಾಶ ಮಾಡಿದ ಪ್ರಕರಣವನ್ನು ಕಟುವಾಗಿ ಖಂಡಿಸಿದರು. ಆ ಪ್ರಕರಣದ ಬೆನ್ನಲ್ಲೇ ಅಸ್ಸಾಮಿನಲ್ಲಿ ಸಂಭವಿಸಿದ ದುರಂತಮಯ ಘಟನೆಗಳನ್ನು ಅವರು ನೆನಪಿಸಿದರು.

ಸಿ.ಪಿ.ಐ. ನಾಯಕ ಪ್ರಮೋದ್ ಗೊಗೊಯ್, ಯು.ಪಿ.ಪಿ.ಎ ಅಧ್ಯಕ್ಷ ಅಬ್ದುಲ್ ಮುಹಿಬ್ ಮುಜುಂದಾರ್, ಅಸ್ಸಾಂ ಸಚಿವ ಅತುಲ್ ಬೋರಾ ಮತ್ತು ಕೇಂದ್ರ ಸಚಿವ ವೀರೇಂದ್ರ ಪ್ರಸಾದ್ ವೈಶ್ಯಾ ಅವರೂ ರ್‍ಯಾಲಿಯಲ್ಲಿ ಮಾತನಾಡಿದರು.

ಪಶ್ಚಿಮ ಬಂಗಾಳದಲ್ಲಿ ವ್ಯಾಪಕ ಕಾರ್ಯಕ್ರಮ

ಹಿಂದೂ ಕೋಮುವಾದಿ ಶಕ್ತಿಗಳು ಅಯೋಧ್ಯೆಯಲ್ಲಿ ನೆಡಿಸಿದ್ದ ಬರ್ಬರ ಕೃತ್ಯವನ್ನು ಖಂಡಿಸಿ ಪಶ್ಚಿಮ ಬಂಗಾಳದಾದ್ಯಂತ ಹಲವು ಕಾರ್ಯಕ್ರಮಗಳು ನಡೆದವು. ಸಿ.ಪಿ.ಐ.(ಎಂ) ಕೇಂದ್ರ ಸಮಿತಿಯ ಕರೆಯ ಮೇರೆಗೆ ಮೆರವಣಿಗೆಗಳು, ರ್‍ಯಾಲಿಗಳು ಗೇಟ್ ಮೀಟಿಂಗ್‌ಗಳನ್ನು ನಡೆಸಲಾಯಿತು.

ರಾಜಧಾನಿ ಕಲ್ಕತ್ತಾದಲ್ಲಿ ಪ್ರಮುಖ ರ್‍ಯಾಲಿ ಮತ್ತು ಸಾಮೂಹಿಕ ಸಭೆ ನಡೆಯಿತು. ಎಡರಂಗದ ವಿವಿಧ ಅಂಗ ಪಕ್ಷಗಳ ಮುಖಂಡರು ಮಾತನಾಡಿದರು. ಬಿ.ಜೆ.ಪಿ. ಪಾತ್ರವನ್ನು ಅವರು ಖಂಡಿಸಿದರು ಹಾಗೂ ಕೋಮುವಾದಿ ಶಕ್ತಿಗಳ ವಿಚಾರದಲ್ಲಿ ಕಾಂಗ್ರೆಸ್ ಅನುಸರಿಸುವ ರಾಜಿ ಧೋರಣೆಯನ್ನು ಟೀಕಿಸಿದರು.

ಬರ್ದ್ವಾನ್‌ನಲ್ಲಿ ಸಿ.ಪಿ.ಐ.(ಎಂ) ಜಿಲ್ಲಾ ಸಮಿತಿ ಮತ್ತು ಜಿಲ್ಲೆಯ ಗುಸ್ಕರದಲ್ಲಿ ಎಡರಂಗ ಆಶ್ರರದಲ್ಲಿ ಮೆರವಣಿಗೆಗಳು ನಡೆದವು. ಕಾಂಗ್ರೆಸ್ ಮತ್ತು ಬಿ.ಜೆ.ಪಿ. ಈ ಕಾರ್ಯ ಕ್ರಮವನ್ನು ಕೆಡಿಸಲು ಪ್ರಯತ್ನಿಸಿದರೂ ಪೋಲೀಸರು ಮಧ್ಯಪ್ರವೇಶಿಸುವ ಮುಂಚೆಯೇ ಕಾರ್ಯಕ್ರಮದಲ್ಲಿ ಭಾಗವಹಿಸಲು ಬಂದವರು ಆಕ್ರಮಣಕೋರರನ್ನು ಹಿಮ್ಮೆಟ್ಟಿಸಿದರು.

ಬರ್ದ್ವಾನ್ ನಗರದ ಹೃದಯ ಭಾಗದಲ್ಲಿ ಅನೇಕ ಕಲಾವಿದರು ಬೃಹತ್ ಕ್ಯಾನ್‌ವಾಸ್ ಮೇಲೆ ಕೋಮುಗಲಭೆಯಿಂದ ಉಂಟಾಗುವ ಭಯಾನಕ ಸನ್ನಿವೇಶಗಳನ್ನು ಚಿತ್ರಿಸಿದರು. ಬೀದಿನಾಟಕಗಳ ಪ್ರದರ್ಶನ, ಹಾಡುಗಾರಿಕೆ ಮೊದಲಾದ ಕಾರ್ಯಕ್ರಮಗಳನ್ನು ಹಮ್ಮಿಕ್ಕೊಳ್ಳಲಾಗಿತ್ತು.

ಮಾಲ್ಡಾ ಜಿಲ್ಲೆಯಾದ್ಯಂತ ಮೆರವಣಿಗೆ ಮತ್ತು ಸಭೆಗಳು ನಡೆದ ಬಗ್ಗೆ ವರದಿಗಳು ಬಂದಿವೆ. ಪಾರುಲಿಯಾ ಜಿಲ್ಲೆ ಕೇಂದ್ರ ಮಾತ್ರವಲ್ಲದೆ ಜಿಲ್ಲೆಯ ಹಲವು ಕಡೆಗಳಲ್ಲಿ ನಡೆದ ಕಾರ್ಯಕ್ರಮಗಳಲ್ಲಿ ಪಕ್ಷದ ಮುಖಂಡರು ಮಾತನಾಡಿದರು. 24 ಪರಗಣ ಜಿಲ್ಲೆಯ ಬಾದಾನಗರ, ಬೆಲ್ಘೋರಿಯಾ, ಮಧ್ಯಮಾಗ್ರಾಮ್, ಬಾರಾಸಾತ್, ದೆಗಂಗ, ಡಮ್ ಡಮ್ ಮತ್ತು ಬಿರಾನ್‌ನಗರದಲ್ಲಿ ದೊಡ್ಡ ರ್‍ಯಾಲಿಗಳು ನಡೆದವು.

ಎಐಡಿಡಬ್ಲ್ಯುಎ, ಡಿವೈಎಫ್ಐ ಮತ್ತು ಎಸ್ ಎಫ್ ಐ ಮೂರೂ ಘಟಕಗಳೂ ಕರಾಳದಿನದ ಅಂಗವಾಗಿ ಪ್ರತಿಭಟನಾ ಕಾರ್ಯಕ್ರಮಗಳನ್ನು ಹಮ್ಮಿಕ್ಕೊಂಡಿದ್ದವು.

ರಾಜಧಾನಿಯಲ್ಲಿ ಧರಣಿ, ಪ್ರತಿಜ್ಞೆ

ಬಾಬರಿ ಮಸೀದಿ ನಾಶದ ಐದನೇ ಕರಾಳ ವಾರ್ಷಿಕ ದಿನವಾದ ಡಿಸೆಂಬರ್ ಆರರಂದು ರಾಜಧಾನಿ ದೆಹಲಿಯ ಐ.ಟಿ.ಓ. ಚೌಕದಲ್ಲಿ ಧರಣಿ ಸತ್ಯಾಗ್ರಹ ನಡೆಯಿತು. ಸಂಯುಕ್ತ ರಂಗದ ಅಂಗಪಕ್ಷಗಳ ದೆಹಲಿ ಘಟಕಗಳ ಆಶ್ರಯದಲ್ಲಿ ನಡೆದ ಧರಣಿಯಲ್ಲಿ ಜೀವನದ ನಾನಾ ರಂಗಗಳ ಜನರು ಪಾಲ್ಗೊಂಡಿದ್ದರು.

ಆರ್.ಎಸ್.ಎಸ್. ಬಿ.ಜೆ.ಪಿ. ಕೂಟ ನೇತೃತ್ವದ ಕ್ರಿಮಿನಲ್ ಹಾಗೂ ಕೋಮುವಾದಿ ಶಕ್ತಿಗಳ ವಿರುದ್ಧ ಹೋರಾಡುವುದಾಗಿ ಅವರು ಪಣತೊಟ್ಟರು.

ಸಂಯುಕ್ತರಂಗದ ಪಕ್ಷಗಳ ರಾಷ್ಟ್ರೀಯ ನಾಯಕರು ಧರಣಿ ನಿರತರನ್ನುದ್ದೇಶಿಸಿ ಮಾತನಾಡಿದರು. ಹರಿಕಿಷನ್ ಸಿಂಗ್ ಸುರ್ಜಿತ್, ಎ.ಬಿ. ಬರ್ಧನ್ ಮತ್ತು ಸುಶೀಲ್ ಭಟ್ಟಾಚಾರ್ಯ ಅವರಲ್ಲಿ ಸೇರಿದ್ದರು. ದೆಹಲಿ ರಾಜ್ಯ ಘಟಕಗಳ ಮುಖಂಡರೂ ಮಾತನಾಡಿದರು.

ಅಯೋಧ್ಯೆ ಯಾತ್ರೆಗೆ ಕರೆ ಕೊಟ್ಟಿರುವ ಆರ್.ಎಸ್.ಎಸ್.-ವಿ.ಹೆಚ್.ಪಿ.-ಬಿ.ಜೆ.ಪಿ. ಮೈತ್ರಿಕೂಟ ಇನ್ನೂ ಒಡ್ಡಿರುವ ಕೋಮುವೈಷಮ್ಯದ ಅಪಾಯಗಳ ಬಗ್ಗೆ ಜನರು ಎಚ್ಚರದಿಂದ ಇರಬೇಕು ಎಂದು ಭಾಷಣಕಾರರು ಕರೆಕೊಟ್ಟರು. ದೇಶದ ಏಕತೆಯನ್ನು ಒಡೆಯಲು ಪಣತೊಟ್ಟಿರುವ ಈ ಶಕ್ತಿಗಳು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಯಾವುದೇ ಪಾತ್ರವಹಿಸಿರಲಿಲ್ಲ ಎಂದು ಅವರು ಹೇಳಿದರು. ಸ್ವಾತಂತ್ರ್ಯ ಹೋರಾಟ ಕಾಲದಲ್ಲಿಆರ್.ಎಸ್.ಎಸ್.-ಬಿ.ಜೆ.ಪಿ. ಕೂಟದ ಒಬ್ಬನೇ ಒಬ್ಬ ನಾಯಕನೂ ಒಂದೇ ಒಂದು ದಿನವೂ ಜೈಲಿಗೆ ಹೋಗಿರಲಿಲ್ಲ ಎಂಬುದನ್ನು ಗಮನಕ್ಕೆ ತಂದರು.

ದಿನವಿಡೀ ನಡೆದ ಧರಣಿ ಸಂದರ್ಭದಲ್ಲಿ ನಾನಾ ಮುಖಂಡರು ಮಾಡಿದ ಭಾಷಣಗಳನ್ನು ಅಪಾರ ಪ್ರಮಾಣದಲ್ಲಿ ನಡೆದ ಜನರು ಆಲಿಸುತ್ತಿದ್ದರು.

ಕೈಗಾರಿಕಾ ಪ್ರದೇಶಗಳ ಕಾರ್ಮಿಕರು, ಕಾಲೇಜ್ ಪ್ರೊಫೆಸರ್‌ಗಳು ಮತ್ತು ವಿದ್ಯಾರ್ಥಿಗಳು, ವಕೀಲರು, ಪುನರ್‌ವಸತಿ ಪ್ರದೇಶಗಳ ಮಹಿಳೆಯರು ಮುಂತಾದವರು ಧರಣಿಯಲ್ಲಿ ಪಾಲ್ಗೊಂಡಿದ್ದರು.

ಜುಮ್ಮಾ ಮಸೀದಿ ಪ್ರದೇಶದ ಬುರ್ಖಾಧಾರಿ ಮಹಿಳೆಯರೂ ಧರಣಿಯಲ್ಲಿ ಭಾಗವಹಿಸಿದ್ದು ವಿಶೇಷ ಅಂಶವಾಗಿತ್ತು.

ಮಣಿಪುರ ಕಾಂಗ್ರೆಸ್ ಸರಕಾರ ಪತನ ಸಂಯುಕ್ತರಂಗ ಅಧಿಕಾರಕ್ಕೆ

ಮಣಿಪುರದಲ್ಲಿ ಕಳೆದ 7 ವರ್ಷಗಳಿಂದ ಅಧಿಕಾರದಲ್ಲಿದ್ದ ರಿಷಾಂಗ್ ಕೀಶಿಂಗ್ ನೇತೃತ್ವದ ಕಾಂಗ್ರೆಸ್ ಸರಕಾರ ಪತನಗೊಂಡಿದೆ. ಡಿಸೆಂಬರ್ 15 ರಂದು ನಡೆದ ರಾಜ್ಯ ವಿಧಾನ ಸಭೆಯ ವಿಶೇಷ ಅಧಿವೇಶನದಲ್ಲಿ ಕೀಶಿಂಗ್ ಸರಕಾರ ವಿಶ್ವಾಸ ಮತದಲ್ಲಿ ಸೋಲುಂಡಿತು. ವಿಶ್ವಾಸಮತದ ಪರವಾಗಿ ಕೇವಲ 16 ಹಾಗೂ ವಿರುದ್ಧವಾಗಿ 38 ಶಾಸಕರು ಮತ ಚಲಾಯಿಸಿದರು.

38 ಶಾಸಕರನ್ನು ಹೊಂದಿದ್ದ ಕಾಂಗ್ರೆಸ್ ಪಕ್ಷದಿಂದ 23 ಶಾಸಕರು ಸಿಡಿದು ಹೋಗಿ ಮಣಿಪುರ ರಾಜ್ಯ ಕಾಂಗ್ರೆಸ್ ಪಕ್ಷವನ್ನು ರಚಿಸಿಕೊಂಡಿದ್ದರು. ಹೊಸ ಪಕ್ಷದ ಸಹಿತ ಹಲವು ಪಕ್ಷಗಳು ಒಟ್ಟಾಗಿ ಮಣಿಪುರ ಸಂಯುಕ್ತ ರಂಗ ರಚನೆಗೊಂಡಿದೆ.

ಇದೀಗ ಕಾಂಗ್ರೆಸ್ ಸರಕಾರ ಪತನಗೊಂಡಿರುವುದರಿಂದ ಮಣಿಪುರ ಸಂಯುಕ್ತರಂಗದ ನಾಯಕ ನಿಪಮಚ್ ಸಿಂಗ್ ಡಿ. 16 ರಂದು ಹೊಸ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಲಿದ್ದಾರೆ. ಒಂದು ತಿಂಗಳೊಳಗೆ ಬಹುಮತವನ್ನು ಸಾಬೀತು ಪಡಿಸುವಂತೆ ರಾಜ್ಯಪಾಲರು ಸೂಚಿಸಿದ್ದು 38 ಸದಸ್ಯರ ಬೆಂಬಲವಿರುವ ಸಂಯುಕ್ತರಂಗ ಸರಕಾರ ವಿಶ್ವಾಸಮತ ನಿರ್ಣಯದಲ್ಲಿ ಗೆಲ್ಲುವುದು ಖಚಿತವಾಗಿದೆ.

ಶಿಕ್ಷಕರ ನೇಮಕ ಒತ್ತಾಯಿಸಿ ಚಳುವಳಿ, ಬಂಧನ

ಅಸ್ಸಾಮಿನಲ್ಲಿ ಖಾಲಿಯಿರುವ ಶಿಕ್ಷಕ ಹುದ್ದೆಗಳಿಗೆ ತಕ್ಷಣ ನೇಮಕ ನಡೆಸುವಂತೆ ಒತ್ತಾಯಿಸಿ ಚಳುವಳಿ ನಡೆಸಿದ 300ಕ್ಕೂ ಹೆಚ್ಚು ಡಿ.ವೈ.ಎಫ್.ಐ. ಕಾರ್ಯಕರ್ತರನ್ನು ಪೋಲೀಸರು ಬಂಧಿಸಿದರು.

ರಾಜ್ಯದಲ್ಲಿಸುಮಾರು 8,700 ಕ್ಕೂ ಹೆಚ್ಚು ಶಾಲಾ ಶಿಕ್ಷಕರ ಸ್ಥಾನಗಳು ಖಾಲಿ ಬಿದ್ದಿವೆ ಎಂಬುದ ಅಧಿಕೃತ ಅಂದಾಜು. ಗುವಾಹಟಿಯ ಕಹತಾರಾ ಪ್ರದೇಶದಲ್ಲಿರುವ ಡಿ.ಪಿ.ಐ. ಕಛೇರಿ ಮುಂದೆ ಡಿ.ವೈ.ಎಫ್.ಐ. ರಾಜ್ಯ ಮಟ್ಟದ ಪ್ರದರ್ಶನವನ್ನು ಏರ್ಪಾಡುಗೊಳಿಸಿತ್ತು. ರಾಜ್ಯದ ವಿವಿಧ ಭಾಗಗಳಿಂದ ಬಂದಿದ್ದ ನೂರಾರು ಕಾರ್ಯಕರ್ತರು ಪಾಲ್ಗೊಂಡಿದ್ದರು.

'ನೀವು ಬಯಸಿದ ಜಾಗದಲ್ಲಿ ನಮ್ಮನ್ನು ಕೊಂದು ಹಾಕಿ' ಸಾಹಿತಿ-ಕಲಾವಿದರ ಸವಾಲು

ಇದು ಬಿಹಾರದ ಉಳಿಗಮಾನ್ಯ ಪದ್ಧತಿಯ ವಾರಸುದಾರರ ಗೂಂಡಾ ಪಡೆ ಯಾದ ರಣಬೀರ್ ಸೇನೆಗೆ ಎಸೆದಿರುವ ಬಹಿರಂಗ ಸವಾಲು ಆಗಿದೆ. ಈ ಸೆಡ್ಡನ್ನು ಹೊಡೆ ದಿರುವವರಲ್ಲಿ ದೇಶದ ಖ್ಯಾತನಾಮರಾದ ಸಾಹಿತಿಗಳು, ಕಲಾವಿದರು, ಲೇಖಕರು ಮೊದಲಾದವರು ಸೇರಿದ್ದಾರೆ. ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ. ಯು.ಆರ್. ಅನಂತಮೂರ್ತಿ, ಕನ್ನಡದ ಖ್ಯಾತ ಸಾಹಿತಿ ಹೆಚ್.ಎಸ್. ಶಿವಪ್ರಕಾಶ್, ರಂಗಭೂಮಿ ಕಲಾವಿದ ಪ್ರಸನ್ನ,, ಜ್ಞಾನಪೀಠ ಪ್ರಶಸ್ತಿ ವಿಜೇತೆ ಮಹಾಶ್ವೇತಾ ದೇವಿ ಅವರೂ ಇದ್ದಾರೆ. ಭೂಮಾಲಿಕರ ಖಾಸಗಿ ಸೇನೆಯಾದ ರಣಬೀರ್ ಸೇನೆ ಈಚೆಗೆ ಬಿಹಾರದ ಜೆಹನಾಬಾದ್ ಜಿಲ್ಲೆಯ ಲಕ್ಷ್ಮಣಪುರ ಬಾತೆ ಎಂಬಲ್ಲಿ ಮಕ್ಕಳು, ಮಹಿಳೆಯರ ಸಹಿತ 61ಜನರ ಘೋರ ಹತ್ಯಾ ಕಾಂಡ ನಡೆಸಿತ್ತು. ಈ ಅಮಾನವೀಯ ಪ್ರಕರಣಕ್ಕೆ ವಿಶಿಷ್ಟ ಪ್ರತಿಭಟನೆಯ ರೂಪದಲ್ಲಿ ಬುದ್ಧಿಜೀವಿಗಳು ಈ ಸವಾಲನ್ನು ಎಸೆದಿದ್ದಾರೆ.

ರಣಬೀರ ಸೇನೆಯ ಬಂದೂಕುಗಳ ಮುಂದಿನಿಂದ ನಾವು ಒಂದಿಂಚೂ ಸರಿಯುವುದಿಲ್ಲ ಎಂದು ಪ್ರೇಮದ ಸಂದೇಶ ಸಾರಿದ ಬಿಹಾರದ ಮಹಾನ್ ಸಂತರಾದ ತುಳಸಿದಾಸ್ ಮತ್ತು ಸೂರದಾಸರ ಹೆಸರಿನಲ್ಲಿ ನಾವು ಪ್ರಮಾಣ ಮಾಡುತ್ತೇವೆ' ಎಂದು ಈ ಬುದ್ಧಿಜೀವಿಗಳು ಹೇಳಿದ್ದಾರೆ. 'ತನ್ನ ನೈತಿಕ ಮತ್ತು ದೈಹಿಕ ಹಕ್ಕಿನ ಬಗ್ಗೆ ರಣಬೀರ್ ಸೇನೆಗೆ ಅಷ್ಟು ವಿಶ್ವಾಸ ಇದ್ದರೆ ಅವರ ಆಯ್ಕೆಯ ಸ್ಥಳದಲ್ಲಿ ನಮ್ಮನ್ನು ಬಹಿರಂಗವಾಗಿ ಕೊಂದು ಅದನ್ನು ಸಾಬೀತುಪಡಿಸಲಿ' ಎಂಬ ಒಕ್ಕಣೆಯಲ್ಲಿ ಇರುವ ಪತ್ರದ ಪ್ರತಿಯನ್ನು ಸುದ್ದಿ ಮಾಧ್ಯಮಗಳಿಗೆ ಬಿಡುಗಡೆಗೊಳಿಸಲಾಗಿದೆ.

ಅಸಮಾನ ಸಮಾಜಿಕ ವ್ಯವಸ್ಥೆಗೆ ಆಕ್ರೋಶವನ್ನು ಸೂಚಿಸುವಲ್ಲಿ ಧ್ವನಿಯಾಗಿರುವ ಈ ಬಹಿರಂಗ ಪತ್ರಕ್ಕೆ ಸಹಿ ಹಾಕಿರುವವರು :

ಮಹಾಶ್ವೇತಾದೇವಿ, ಯು.ಆರ್. ಅನಂತ ಮೂರ್ತಿ, ನಿರ್ಮಲ ವರ್ಮಾ, ಮೃಣಾಲ್ ಸೇನ್, ಗೋವಿಂದ ನಿಹಲಾನಿ, ಹಬೀಬ್ ತನ್ವೀರ್, ತಕಳಿ ಶಿವಶಿಂಕರ ಪಿಳ್ಳೆ, ಶಂಖ ಘೋಷ್, ಸುಭಾಷ್ ಮುಖ್ಯೋಪಾಧ್ಯಾಯ, ದಿಲೀಪ್ ಚಿತ್ರೆ, ಎಂ. ಮುಕುಂದನ್, ಭೀಷ್ಮ ಸಹಾನಿ, ಅಸ್ಗರ್‌ಅಲಿ ಎಂಜಿನಿಯರ್, ದೇವೇಶ್ ರೇ, ಸುಚಿ ಕೌತಾರಾಯ್, ಕೆ.ಸಚ್ಚಿದಾನಂದನ್, ಜ್ಯೋತಿ ಪ್ರಸಾದ್ ಚಟ್ಟೋಪಾಧ್ಯಾಯ, ಆನಂದ, ಎಚ್.ಎಸ್. ಶಿವಪ್ರಕಾಶ, ಸಂದೀಪನ್ ಚಟ್ಟೋಪಾಧ್ಯಾಯ, ಅಮಿತಾಬಾ ದಾಸಗುಪ್ತಾ ಮತ್ತು ಪ್ರಸನ್ನ.

ಬಿಜೆಪಿ: ಎಂದೆಂದಿಗೂ ಬೇಡ

ಪುಟ 5 ರಿಂದ

ಗಳು ಈಗ ಬಿಜೆಪಿಯ ಮುಖಂಡರ ಪ್ರಧಾನ ಲಕ್ಷಣವಾಗಿ ಬಿಟ್ಟಿದೆ- 'ಚಾರಿತ್ರ್ಯ'ವಾಗಿಬಿಟ್ಟಿದೆ. ಅದು ಅಧಿಕಾರ ದಲ್ಲಿರುವ ಪ್ರತಿ ರಾಜ್ಯದಲ್ಲೂ ಗುಂಪುಗಾರಿಕೆಯ ಜಗಳ ಪ್ರಬಲವಾಗಿದೆ. ಇದರಿಂದ ಕಾಂಗ್ರೆಸ್ಸಿಗೂ ಈ ಪಕ್ಷಕ್ಕೂ ಇದ್ದ ವ್ಯತ್ಯಾಸಗಳೆಲ್ಲಾ ಅಳಿಸಿಹೋಗಿವೆ. ಈಗ ಬಿಜೆಪಿ ಭಾರತೀಯ ಸಂಸದೀಯ ಪ್ರಜಾಪ್ರಭುತ್ವದಲ್ಲಿ ರಾಜಕೀಯ ಅವನತಿಯ ವೇಗದ ದಾರಿಯನ್ನು ಪ್ರತಿನಿಧಿಸುವ ಪಕ್ಷ. ಕ್ರಿಮಿನಲ್‌ಗಳು, ಸಮಯ ಸಾಧಕರ ಹಕೋಟಿಯ ದಾರಿಯಿದು. ಮಹಾರಾಷ್ಟ್ರ, ರಾಜಸ್ತಾನಗಳಂತೆ ಬಿಜೆಪಿ ಆಳ್ವಿಕೆಯ ರಾಜ್ಯಗಳಲ್ಲಿ ಅದರ ಮುಖಂಡರಲ್ಲಿನ ಭ್ರಷ್ಟಾಚಾರ ಹಾಗೂ ಬಹುರಾಷ್ಟ್ರೀಯ ಕಂಪನಿಗಳೊಂದಿಗೆ ಸಂಪರ್ಕ - ಅದರ ನಿಜವಾದ ಚಾರಿತ್ರ್ಯ ಏನೆಂಬುದನ್ನು ತೋರಿಸಿ ಕೊಟ್ಟಿದೆ.

ಇನ್ನು ಅದರ 'ಚಿಂತನೆ' ಬಗ್ಗೆ ಎಷ್ಟು ಕಮ್ಮಿ ಹೇಳಿದರೆ ಅಷ್ಟು ಒಳ್ಳೆಯದು. ಅವರ ಸೈದ್ಧಾಂತಿಕ ವಂಚನೆಗೆ ಅವರ ಪ್ರಧಾನ ಕಾರ್ಯದರ್ಶಿಗಳಲ್ಲೊಬ್ಬರ ಮಾತುಗಳಿಗಿಂತ ಉತ್ತಮವಾದ ಸಾಕ್ಷಿ ಬೇಕೆ? ವಾಜಪೇಯಿಯವರು ಬಿಜೆಪಿಯ ನಿಜಮುಖವನ್ನು ಮರೆಮಾಚುವ ಮುಖವಾಡ ಎಂದು ಆತ ಸಾರ್ವಜನಿಕವಾಗಿಯೇ ಸಾರಿಲ್ಲವೇ? ಈ ಮುಖವಾಡ ಇತರ ಪಕ್ಷಗಳು 'ಅದೊಂದು ಸಮರ್ಥ ಪ್ರಜಾಸತ್ತಾತ್ಮಕ ಪರ್ಯಾಯ' ಎಂಬ ಭಾವನೆ ನೀಡಿದರೆ, ನಿಜಮುಖ ಒಂದು ಫ್ಯಾಸಿಸ್ಟ್ ಮಾದರಿಯ ಹಿಂದೂ ರಾಷ್ಟ್ರವನ್ನು ನಿರ್ಮಿಸುವ ಅದರ ನಿಜವಾದ ದುಷ್ಟ ಯೋಜನೆಯನ್ನು ಪ್ರತಿನಿಧಿಸುತ್ತದೆ.

ನಾಝೀ ನೆನಪು

ಇಲ್ಲಿ ಬಹುಶಃ ಇತಿಹಾಸದ ನಿದರ್ಶನವೊಂದನ್ನು ನೆನಪಿಸುವುದು ಒಳ್ಳೆಯದು. ನಾಝಿವಾದದ ಉದಯವಾದದ್ದು ಹೀಗೆಯೇ. ಹಿಟ್ಲರ್‌ಇಂತಹುದೇ ಒಂದು ತಂತ್ರಬಳಸಿ 'ರಾಷ್ಟ್ರೀಯ ಸಮಜವಾದ'ದ ಘೋಷಣೆ ಕೊಟ್ಟು ಜನಗಳು ಬೆಂಬಲ ನೀಡುವಂತೆ ಮಾಡಿದ. ಅಂತಹ ಬೆಂಬಲ ಸಿಕ್ಕ ಕೂಡಲೇ ಜನಗಳಿಗೆ ವಿಶ್ವಾಸಘಾತ ಮಾಡಿದ್ದಷ್ಟೇ ಅಲ್ಲ, ಮಾನವಕುಲದ ಮೇಲೆಯೇ ಅತ್ಯಂತ ಹೀನ ಅಪರಾಧ ಗಳನ್ನೆಸಗಿದ. ಬಿಜೆಪಿ ಇಂದು ಇದನ್ನೇ ಪುನರಾವರ್ತಿಸಲು ಪ್ರಯತ್ನಿಸುತ್ತಿದೆ. ಭೋಳೆ ಮಂದಿ ಅಥವಾ ನಮ್ಮ ಶತ್ರುಗಳಿಗೆ ತಮ್ಮ ಆತ್ಮವನ್ನು ಮಾರಿಕೊಂಡ ಸಮಯಸಾಧಕರು ಮಾತ್ರವೇ ಇಂತಹ ದುಷ್ಟ ಕಾರ್ಯತಂತ್ರಕ್ಕೆ ಬಲಿಬೀಳಲು ಸಾಧ್ಯ.

ಹೀಗೆ ಕಾವಿಪಡೆಗಳು ಅವರೇ ಹೇಳಿಕೊಂಡ ನಾಲ್ಕು 'ಚ'ಗಳ - ಚೆಹರಾ, ಚಾಲ್, ಚರಿತ್ರ್, ಚಿಂತನ್ - ಮೂಲಕವೇ ಕಟಕಟೆಯಲ್ಲಿ ನಿಂತಿವೆ. ಒಂದು ಫ್ಯಾಸಿಸ್ಟ್ ಮಾದರಿಯ ಹಿಂದೂ ರಾಷ್ಟ್ರವನ್ನು ಕಟ್ಟುವ ಅವರ ದುಷ್ಟಯೋಜನೆ ಗುಟ್ಟಾಗಿಯೇನೂ ಇಲ್ಲ. ಆದರೂ ಜನ ಇದನ್ನು ಕಾಣದೆ ತಮ್ಮನ್ನು ಬೆಂಬಲಿಸುವಂತೆ ವಂಚಿಸಲು ಅವರು ತಮ್ಮ ಬತ್ತಳಿಕೆಯಲ್ಲಿನ ವಿವಿಧ ಅಸ್ತ್ರಗಳನ್ನು ಬಳಸುತ್ತಿದ್ದಾರೆ.

'ಸ್ಥಿರತೆ' ಯ ಮಂತ್ರ ಹೊಸದೇನೂ ಅಲ್ಲ

ಈ ಹಿನ್ನೆಲೆಯಲ್ಲಿ ತಮಗೊಂದು 'ಅವಕಾಶ' ಕೊಡಿ ಎಂಬ ಅದರ ಮನವಿ, ತಾವು ಮಾತ್ರ 'ಸ್ಥಿರತೆ' ನೀಡಬಲ್ಲೆವು ಎಂಬ ಅವರ ತರ್ಕವನ್ನು ಪರಿಶೀಲಿಸಬೇಕು. ಈ ತಂತ್ರಗಳೂ ಹೊಸದೇನಲ್ಲ. ಹಿಟ್ಲರ್ ಮತ್ತು ಮುಸಲೋನಿ ಇಬ್ಬರೂ ಕೂಡ ಅಧಿಕಾರ ಪಡೆದದ್ದು ಈ ಸ್ಥಿರತೆಯ ಘೋಷಣೆಯ ಮೇಲೆಯೇ. ಫ್ಯಾಸಿಸ್ಟ್ ಶಕ್ತಿಗಳು ಸದಾ ಜನತೆಯ ಅಸಂತೃಪ್ತಿಯನ್ನು ತಮ್ಮ ಪ್ರಯೋಜಕ್ಕೆ ಬಳಸಿಕೊಂಡಿವೆ. ಆಕ್ರಾಮಕ ಸಂಕುಚಿತ ದೇಶಭಕ್ತಿಯನ್ನು ಉದ್ರೇಕಿಸುವುದೂ ಅವರ ಎಂದಿನ ತಂತ್ರ. ಬಿಜೆಪಿ ಪರಮಾಣು ಶಸ್ತ್ರಾಸ್ತ್ರಗಳನ್ನು ಪ್ರತಿಪಾದಿಸುವುದು ಈ ದೃಷ್ಟಿಯಿಂದಲೇ. ಸ್ವಪ್ರಯೋಜನಕ್ಕಾಗಿ ಒಮ್ಮೆ ಜನಗಳ ಬೆಂಬಲ ಹೇಗಾದರೂ ಸಿಕ್ಕಿತೆಂದರೆ ಹಿಟ್ಲರ್‌ನಂತೆ ಮಸಲತ್ತು, ಕಸರತ್ತುಗಳ ಮೂಲಕ ಅಲ್ಪಮತವನ್ನು ಬಹುಮತವಾಗಿ ಪರಿವರ್ತಿಸುತ್ತಾರೆ.

ಬಿಜೆಪಿಯ 'ಸ್ಥಿರತೆ'ಯ ಬಗ್ಗೆ ಹೇಳುವಾಗ ಹಿಟ್ಲರ್ ಕೂಡಾ ಒಂದು ಅವಧಿಯಲ್ಲಿ 'ಸ್ಥಿರ' ಸರ್ಕಾರ ನೀಡಿದ್ದ ಎಂಬುದನ್ನು ನೆನಪಿಸಿಕೊಳ್ಳುವುದೊಳ್ಳೆಯದು. ಈ 'ಸ್ಥಿರತೆ'ಗೆ ಜರ್ಮನರು, ಮಾನವಕುಲ ತೆತ್ತ ಬೆಲೆಯೇನು? ಲಕ್ಷಾಂತರ ಜನಗಳ ಸಾವು, ಕೋಟ್ಯಾಂತರ ಜನರಿಗೆ ಕಿರುಕುಳ. ಇಡೀ ಜಗತ್ತಿನಲ್ಲಿ ಯುದ್ಧ. ಇಂತಹಾ ಬೆಲೆ ತೆರಬೇಕಾದರೆ ಸಹಜವಾಗಿಯೇ ಪ್ರಶ್ನೆ ಏಳುತ್ತದೆ - ಯಾರಿಗಾಗಿ ಈ ಸ್ಥಿರತೆ? ಇವರ ಸರಕಾರ ಬಂದರೆ ಸ್ಥಿರತೆಯೆಂಬುದು ಸಂದೇಹಾಸ್ಪದ. ಆದರೆ ಒಂದು ವೇಳೆ ಆಳ್ವಿಕೆಯ ಅವಧಿಯ ದೃಷ್ಟಿಯಿಂದ ಸ್ಥಿರತೆ ಕೊಟ್ಟರೂ ಈ ಅವಧಿಯಲ್ಲಿ ಜನಗಳಂತೂ ಅತ್ಯಂತ ಅಸ್ಥಿರವಾಗುತ್ತಾರೆ - ಸಾಮಾಜಿಕ ಗಲಭೆ, ತೊಂದರೆಗಳಿಂದಾಗಿ. ತನ್ನ ಐಕ್ಯತೆ ಮತ್ತು ಸಮಗ್ರತೆಯನ್ನು ಬಲಿ ನೀಡುವ ಇಂತಹ 'ಸ್ಥಿರತೆ' ಭಾರತಕ್ಕೆ ಬೇಕಿಲ್ಲ.


ಇಂತಹ ಸನ್ನಿವೇಶದಲ್ಲಿ ಪ್ರಾಚೀನ ಕಾಲದಿಂದ ಬಂದ ಒಂದು ಬುದ್ಧಿಮಾತನ್ನು ನೆನಪಿಸಿಕೊಳ್ಳಬೇಕು. 'ದುಷ್ಟತನ ಗೆಲ್ಲಬೇಕಾದರೆ ಒಳ್ಳೆಯವರು ಮೌನವಾಗಿದ್ದರೆ ಸಾಕು' - ಇದು ಮಾನವ ಕುಲದ ಅನುಭವದ ಮಾತು. ಭಾರತೀಯ ಜನತೆ ಮೌನವಾಗಿರಲು ಸಾಧ್ಯವಿಲ್ಲ. ನಿಷ್ಕ್ರಿಯರಾಗಿರಲೂ ಸಾಧ್ಯವಿಲ್ಲ. ಅವರು ಭಾರತದ ಐಕ್ಯತೆ ಮತ್ತು ಸಮಗ್ರತೆಯನ್ನು ರಕ್ಷಿಸಲು ಸಕ್ರಿಯವಾಗಿ ಮುಂದೊತ್ತಬೇಕಾಗಿದೆ.

ಬಿಜೆಪಿ ಮತ್ತು ಕಾವಿಪಡೆಗಳು ತಮ್ಮ ಬಳಿ ಇರುವುದೆಲ್ಲವನ್ನೂ ಅಂದರೆ ವಂಚನೆ, ಹೊಲಸು ಸಮಯಸಾಧಕತನ, ಇಬ್ಬಂದಿತನ, ಭ್ರಷ್ಟಾಚಾರದಿಂದ ಹಿಡಿದು ಕೋಮು ವಿಷದ ಪ್ರಸಾರದ ವರೆಗೆ - ಬಯಲಿಗಿಟ್ಟಿದ್ದಾರೆ. ಅಧಿಕಾರ ದಾಹ ಅದು ತನ್ನೆಲ್ಲಾ ನೀತಿ ನಿಯಮಗಳನ್ನು, ರಾಜಕೀಯದಲ್ಲಿ ಸಭ್ಯತೆ, ಶಿಷ್ಟಾಚಾರಗಳನ್ನು ಗಾಳಿಗೆ ತೂರುವಂತೆ ಮಾಡಿದೆ.

1998 ರ ಮಧ್ಯಾವಧಿ ಚುನಾವಣೆ ಭಾರತೀಯ ರಾಜಕಾರಣದಲ್ಲಿ ಮಹತ್ವದ ಘಟ್ಟವಾಗಲಿದೆ. ಭಾರತ ಮತ್ತು ಭಾರತೀಯರು ತಾವು ಹೋರಾಟಗಳ ಮೂಲಕ ಶ್ರಮಪಟ್ಟು ಗಳಿಸಿದ್ದನ್ನು, ಜಾತ್ಯಾತೀತತೆ, ಪ್ರಜಾಪ್ರಭುತ್ವ, ಸಾಮಾಜಿಕ ನ್ಯಾಯ ಮತ್ತು ಒಕ್ಕೂಟವಾದದ ಗಟ್ಟಿ ಸ್ತಂಭಗಳ ಮೇಲೆ ನಿಂತಿರುವ ಆಧುನಿಕ ದೇಶದ ಅಡಿಗಲ್ಲನ್ನು ಈ ರೀತಿ ಯೋಜಿತ ರೀತಿಯಲ್ಲಿ ನಾಶ ಮಾಡಲು ಅವಕಾಶ ಕೊಡಲು ಸಾಧ್ಯವೇ?

○

ನಿರಾಶಾದಾಯಕವಾಗಿ ಕೊನೆಯಾದ ಕ್ಯೋಟೋ ಸಮ್ಮೇಳನ



ಕ್ಯೋಟೋದಲ್ಲಿ ನಡೆಯುತ್ತಿದ್ದ ಹವಾಮಾನ ಸಮ್ಮೇಳನ ನಿರಾಶಾದಾಯಕವಾಗಿ ಕೊನೆಗೊಂಡಿದೆ. ರಿಯೋದಲ್ಲಿ ನಡೆದ 1992ರ ಭೂಸಮ್ಮೇಳನ ಹಾಗೂ ಆಮೇಲೆ ನಡೆದ ಸಮ್ಮೇಳನದ ನಂತರ ಯಾವ ಮುನ್ನಡೆಯನ್ನೂ ಸಾಧಿಸಲಿಲ್ಲ. ಜಾಗತಿಕ ಹವಾಮಾನಕ್ಕೆ ಇರುವ ಅಪಾಯದ ದೃಷ್ಟಿಯಿಂದ ಹಿನ್ನಡೆಯಾಗಿದೆ ಎನ್ನಬಹುದು. ರಿಯೋದಲ್ಲಿ ನಿರ್ಧಾರ ವಾಗಿದ್ದ ಸಾಮಾನ್ಯ ಉದ್ದೇಶ - ಪ್ರಮುಖ ಆರು ಹವಾಮಾನಕ್ಕೆ ಅಪಾಯಕಾರಿಯಾದ ಕಲುಶ ಅನಿಲಗಳನ್ನು 2000 ದ ಹೊತ್ತಿಗೆ 1990 ರ ಮಟ್ಟಕ್ಕೆ ಕಡಿಮೆ ಮಾಡುವುದ ರಿಂದಲೂ ಹಿಂಜರಿಯ ಲಾಗಿದೆ. ಈಗ ಸರಾಸರಿ ಶೇಕಡ 5.2 ಕಡಿತವನ್ನು 2008 ರಿಂದ 2012 ರ ವರೆಗ ಸಾಧಿಸಲಾಗುವುದು. ಇನ್ನೊಂದು ಪ್ರಮುಖ ವಿಷಯ- ಈ ರೀತಿಯ ಕಡಿತವನ್ನು ನಿಜವಾಗಿಯೂ ಮಾಡಲಾಗಿದೆಯೇ ಎನ್ನುವ ಬಗ್ಗೆ ಅಂತರ್ರಾಷ್ಟ್ರೀಯ ತಪಾಸಣೆಯ ನಿರ್ದಿಷ್ಟ ಕ್ರಮಗಳ ಬಗ್ಗೆ ಯಾವುದೇ ಒಪ್ಪಂದ ವಾಗದಿರುವುದು ಇವೆರಡೂ ನಿರಾಶಾ ದಾಯಕ ಅಂಶಗಳು. ಅಲ್ಲದೆ ಅಮೇರಿಕ ಇತರ ಎಲ್ಲಾ ದೇಶಗಳ ಅಭಿಪ್ರಾಯವನ್ನು ಧಿಕ್ಕರಿಸಿ, ತನ್ನ ಅಭಿಪ್ರಾಯಗಳನ್ನು ಇಡೀ ಜಗತ್ತಿನ ಮೇಲೆ ಹೊರಿಸಿದ ರೀತಿ, ಮುಂಬರುವ ದಿನಗಳಲ್ಲಿ ಜಗತ್ತು ಎದುರಿಸಲಿರುವ ಅಪಾಯಗಳಿಗೆ ಮುನ್ಸೂಚನೆ.

ಸೋವಿಯತ್ ಕಾಲದಿಂದ ಅರ್ಧಕ್ಕಿಳಿದ ರಶ್ಯಾದ ಆರ್ಥಿಕ

ರಶ್ಯಾ ಗಣರಾಜ್ಯದ ಆರ್ಥಿಕ ಆರು ವರ್ಷಗಳ ಹಿಂದೆ ಸೋವಿಯತ್ ಒಕ್ಕೂಟದ ಭಾಗವಾಗಿದ್ದಾಗ ಇದ್ದಿದ್ದಕ್ಕಿಂತ ಅರ್ಧ ಆಗಿದೆ. ಈ ಬಾರಿ ಸತತ ಆರನೇ ವರ್ಷದಲ್ಲಿ ಹಿಂದಿನ ವರ್ಷಕ್ಕಿಂತ ಆರ್ಥಿಕ ತಗ್ಗಿದೆ.

ರಶ್ಯಾದ ಆರ್ಥಿಕದ ಖಾಸಗೀಕರಣ ಭರದಲ್ಲಿ ಸಾಗುತ್ತಿದ್ದಂತೆ, ಬೆಳವಣಿಗೆ ಅದೇ ಭರದಲ್ಲಿ ಇಳಿಯುತ್ತಿದೆ. ಕಳೆದ ತಿಂಗಳು ಶೇಕಡಾ 40 ರಷ್ಟು ಕಾರ್ಮಿಕರು ಅವರ ಸಂಬಳ ಪಡೆಯಲಿಲ್ಲ. ಕೇವಲ ಶೇಕಡಾ 25 ಕಾರ್ಮಿಕರು ಮಾತ್ರ ನಿಗದಿತ ಸಮಯಕ್ಕೆ ಸಂಬಳ ಪಡೆದರು. ಕಳೆದ ವರ್ಷ, ಈ ವರ್ಷದ ಹೊತ್ತಿಗೆ ರಶ್ಯಾದ ಆರ್ಥಿಕ ಅವನತಿ ನಿಂತು ಉತ್ಕರ್ಷ ಆರಂಭ ವಾಗುತ್ತದೆ. ಎಲ್ಲಾ ಸಂಬಳ ಬಾಕಿ ಪಾವತಿ ಮಾಡಲಾಗುವುದು ಎಂಬ ಅಧ್ಯಕ್ಷ ಯೆಲ್ಸಿನರ ಆಶ್ವಾಸನೆ ಪೂರ್ತಿ ಹುಸಿ ಯಾಗಿದೆ. ಒಟ್ಟು ವೇತನ ಬಾಕಿ 55 ಸಾವಿರ ಶತಕೋಟಿ ರೂಬಲ್‌ಗಳು. (ಸುಮಾರು ಒಂದು ಕೋಟಿ ಡಾಲರುಗಳು) ಅದು ಶೇಕಡಾ 5ರಷ್ಟು ಪ್ರತಿ ತಿಂಗಳು ಬೆಳೆಯುತ್ತಿದೆ. ಈ ವೇತನ ಬಾಕಿಯಲ್ಲಿ ಐದನೇ ಒಂದು ಭಾಗ ರಶ್ಯಾ ಸರ್ಕಾರವೇ ತನ್ನ ಉದ್ಯೋಗಿಗಳಿಗೆ ವೇತನ ಕೊಡದೆ ಉಳಿಸಿಕೊಂಡಿರುವ ಬಾಕಿ. ಉಳಿದ ಶೇಕಡಾ 80 ರಷ್ಟು ಖಾಸಗಿ ಕೈಗಾರಿಕೆಗಳದ್ದು. ರಶ್ಯಾ ಸರ್ಕಾರ ತಾನೇ ಕಾರ್ಮಿಕರ ವೇತನದ ಬಗ್ಗೆ ತಲೆ ಕೆಡಿಸಿಕೊಳ್ಳವುದಿಲ್ಲ. ಖಾಸಗಿ ಕೈಗಾರಿಕೆ ಗಳಿಗೆ ಹೇಗೆ ವೇತನ ಕೊಡಲು ಒತ್ತಾಯ ಹೇರೀತು ?

ರಶ್ಯಾದ ಟ್ರೇಡ್‌ಯೂನಿಯನ್‌ಗಳು ಮಾತ್ರವಲ್ಲ, ಅಂತರ್ರಾಷ್ಟ್ರೀಯ ಟ್ರೇಡ್ ಯೂನಿಯನ್ ಫೆಡರೇಶನ್ ಈ ಬಗ್ಗೆ ಕಾರ್ಯಾಚರಣೆಗೆ ಕರೆ ನೀಡಿದೆ.

ಅಮೇರಿಕ, ಇಸ್ರೇಲ್‌ಗಳ ವಿರುದ್ಧ ಧೃಡ ನಿಲುವು ತಳೆದ ಇಸ್ಲಾಮಿಕ್ ಸಮ್ಮೇಳನ

ಇತ್ತೀಚೆಗೆ ಇರಾನಿನ ರಾಜಧಾನಿ ಟೆಹರಾನ್‌ನಲ್ಲಿ ನಡೆದ ಇಸ್ಲಾಮಿಕ್ ದೇಶಗಳ ಸಂಘಟನೆಯ ಸಮ್ಮೇಳನ ಇಸ್ರೇಲ್ ಹಾಗೂ ಅದರ ಬೆಂಬಲಿಗ ಅಮೇರಿಕದ ವಿರುದ್ಧ ಧೃಢ [illegible]ವು ತಳೆದಿದೆ. ಇದರಿಂದ ಅರಬ್ ದೇಶಗಳ ನಡುವೆ ಮಧ್ಯಪೂರ್ವ ಏಶ್ಯಾದಲ್ಲಿ ಅಮೇರಿಕ, ಇಸ್ರೇಲ್‌ಗಳು ಈಗ ಏಕಾಂಗಿಯಾಗಿವೆ. 55 ದೇಶಗಳ ಈ ಗುಂಪು ತೆಗೆದು ಕೊಂಡ ನಿರ್ಣಯಗಳಿಗೆ ನಿಜ ಜೀವನದಲ್ಲಿ ಅಂತಹ ಏನೂ ಮಹತ್ವವಿಲ್ಲದಿದ್ದರೂ, ಅದು ಈ ಪ್ರದೇಶದ ರಾಜಕೀಯ ಧೋರಣೆಯನ್ನು ಪ್ರತಿನಿಧಿಸುತ್ತದೆ.

ಸಂಘಟನೆ ತೆಗೆದುಕೊಂಡ ನಿರ್ಣಯವೊಂದರಲ್ಲಿ ಟರ್ಕಿಯನ್ನು ಇಸ್ರೇಲ್ ಜತೆ ಇರುವ ಮಿಲಿಟರಿ ಸಹಕಾರ ಹಿಂತೆಗೆದುಕೊಳ್ಳುವಂತೆ ನಿರ್ದೇಶಿಸಲಾಗಿದೆ ಹಾಗೂ ಎಲ್ಲಾ ದೇಶಗಳು ಇಸ್ರೇಲ್ ಜೊತೆ ಯಾವುದೇ ರಾಜಕೀಯ, ರಾಯಭಾರ ಸಂಬಂಧ ಇರಿಸಿಕೊಳ್ಳದಂತೆ ವಿಧಿಸಿದೆ. ಸಮ್ಮೇಳನದಲ್ಲಿ ಇರಾಕ್ ಮೇಲೆ ವಿಧಿಸಿರುವ ಆರ್ಥಿಕ ದಿಗ್ಬಂಧನಗಳನ್ನು ತೆಗೆದುಹಾಕುವ ಬಗ್ಗೆ ಒತ್ತಾಯ ಸಹ ಕೇಳಿಬಂತು.ಈ ಸಮ್ಮೇಳನಗಳು ಟೆಹರಾನ್‌ನಲ್ಲಿ ನಡೆದದ್ದು, ಹಾಗೂ ಅಮೆರಿಕದ ವೈರಿಗಳಾದ ಇರಾನ್, ಇರಾಕ್ ಎರಡೂ ದೇಶಗಳಿಗೆ ಸಂಘಟನೆ ತೋರಿದ ಬೆಂಬಲದ ನಂತರ, ಅಮೇರಿಕ ಇಸ್ರೇಲ್ ಬಗ್ಗೆ ತನ್ನ ಸಂಪ್ರೀತಿಗೊಳಿಸುವ ಧೋರಣೆ ಬಗ್ಗೆ ಮರುಯೋಚನೆ ಮಾಡಬೇಕಾದಿತು.

‘ಬ್ರೆಡ್ಡು ಇಲ್ಲದಿದ್ದರೆ ಪಿಜ್ಜಾ ತಿನ್ನಿ’

ಇತ್ತೀಚೆಗೆ ಅಮೇರಿಕಾದ ಫಾಸ್ಟ್ ಫುಡ್ ನ ಸರಣಿಗಳಲ್ಲೊಂದಾದ ‘ಪಿಜ್ಜಾ ಹಟ್’ ಮಾಸ್ಕೋದಲ್ಲಿ ಪ್ರಖ್ಯಾತ ರಾಜಕಾರಣಿಗಳೊಬ್ಬರನ್ನು ರೂಪದರ್ಶಿಯಾಗಿ ಬಳಸಿ ಒಂದು ಜಾಹೀರಾತು ವಿಡಿಯೋ ಚಿತ್ರ ತಯಾರಿಸಿತಂತೆ. ತನ್ನ ಮೊಮ್ಮಗಳೊಂದಿಗೆ ಪಿಜ್ಜಾ ಹಟ್‌ಗೆ ಬಂದು ಪಿಜ್ಜಾ (ಇಟಾಲಿಯನ್ ತಿಂಡಿ- ದೋಸೆಯಂತಿರುವ) ತಿಂದು ಕಾಫಿ ಕುಡಿಯುವ ದೃಶ್ಯ ಚಿತ್ರೀಕರಿಸಿಕೊಂಡರು. ‘ಪಿಜ್ಜಾ ಹಟ್’ನ ಜಾಗತಿಕ ಜಾಹೀರಾತಿಗೆ ಇದನ್ನು ಬಳಸಲಾಗುವುದಂತೆ. ಯಾರಿರಬಹುದು? ಇನ್ನಾರು ಎಂದು ಕೊಂಡ್ರಿ. ಸೋವಿಯತ್ ಒಕ್ಕೂಟ ಹಾಗೂ ಅಲ್ಲಿನ ಸಮಾಜವಾದದ ವಿಘಟನೆ ಮಾಡುವಲ್ಲಿ ನಾಯಕತ್ವ ವಹಿಸಿದ ಮಿಖೈಲ್ ಗೋರ್ಬಚೇವ್ ಆ ವ್ಯಕ್ತಿ.

ಆತನಿಗೆ ಈ ಜಾಹೀರಾತು ಚಿತ್ರಕ್ಕೆ ಹತ್ತು ಲಕ್ಷ ಡಾಲರುಗಳನ್ನು ಕೊಡಲಾಯಿತಂತೆ. ಗೋರ್ಬಚೇವ್ ಚಿತ್ರೀಕರಣಕ್ಕೆ ಬರುವಾಗ ‘ದೇಶ ದುರ್ಗತಿ ತಂದವನೀತ’ ಎಂದು ಹಲವರು ಕೂಗಾಡಿದರೆ, ಇನ್ನು ಕೆಲವರು ಈತ ರೂಪದರ್ಶಿಯಾದರೆ ರಷ್ಯಾದಲ್ಲಂತೂ ‘ಪಿಜ್ಜಾ ಹಟ್’ನಲ್ಲಿ ಯಾರೂ ಹೋಗಲಾರರು ಎಂದು ಕುಹಕವಾಡಿದರಂತೆ.

ಹಿಂದೆಯೂ ಗೋರ್ಬಚೇವ್‌ಗೆ ಹಲವು ಜಾಹೀರಾತು ಚಿತ್ರಗಳಿಗೆ ರೂಪದರ್ಶಿಯಾಗಲು ಆಹ್ವಾನ ಬಂದಿತ್ತಂತೆ. ಆತ ನಿರಾಕರಿಸಿದ್ದನಂತೆ. ಈಗ ಇದಕ್ಕೆ ಯಾಕೆ ಒಪ್ಪಿಕೊಂಡದ್ದು ಎಂದಿದ್ದಕ್ಕೆ! ತನ್ನ ಅಧ್ಯಯನ ಸಂಸ್ಥೆಗೆ ಹಣ ಸಂಗ್ರಹಿಸಲು ಎಂದನಂತೆ, ನೋಡಿದಿರಾ ದುರ್ದೆಸೆ ಎಲ್ಲಿಗೆ ಬಂದಿದೆ. ಅಧ್ಯಯನ ಕೇಂದ್ರಕ್ಕೆ ಹಣ ಒದಗಿಸಲು, ಮಾಜಿ ಅಧ್ಯಕ್ಷನೊಬ್ಬ ಜಾಹೀರಾತು ಚಿತ್ರದಲ್ಲಿ ರೂಪದರ್ಶಿಯಾಗಬೇಕು. ಇನ್ನು ಸಾಮಾನ್ಯ ಜನರ ಗತಿ!

ಇಂಡೋನೇಶಿಯಾದ ರೂಪಾಯಿ ಬೆಲೆ ಅರ್ಧ

ಇಂಡೋನೇಶಿಯಾದ ರೂಪಾಯಿ ಬೆಲೆ (ಡಾಲರಿಗೆ ಹೋಲಿಸಿದಂತೆ) ಅರ್ಧಕ್ಕಿಳಿದಿದೆ. ದಕ್ಷಿಣ ಪೂರ್ವ ಏಶ್ಯಾದ ಹಲವು ದೇಶಗಳಲ್ಲಿ ಆರ್ಥಿಕ ಬಿಕ್ಕಟ್ಟಿನ ಮೊದಲು ಒಂದು ಡಾಲರಿಗೆ ಸುಮಾರು 2400 ಇಂಡೋನೇಶ್ಯನ್ ರೂಪಾಯಿ ಸಿಗುತ್ತಿತ್ತು. ಈಗ ಅದು ಸುಮಾರು 5000 ರೂಪಾಯಿಗೆ ಇಳಿದಿದೆ. ಹೆಚ್ಚು ಕಡಿಮೆ ಈ ಪ್ರದೇಶದ ಎಲ್ಲಾ ದೇಶಗಳ ಹಣಕಾಸಿನ ಬೆಲೆ ಕುಸಿದಿದ್ದರೂ, ಇಂಡೋನೇಶ್ಯಾದ ರೂಪಾಯಿ ಬೆಲೆ ಇನ್ನೂ ಕುಸಿಯುತ್ತಿದೆ.

ಥೈಲ್ಯಾಂಡ್ ಹಾಗೂ ಮಲೇಶ್ಯಾ ಹೆಚ್ಚು ಕಡಿಮೆ ಆರ್ಥಿಕ ತುರ್ತು ಪರಿಸ್ಥಿತಿ ಘೋಷಿಸಿದ್ದು, ಹಣ ಕಾಸಿನ ಮಾರುಕಟ್ಟೆಯಲ್ಲಿ ಮಧ್ಯ ಪ್ರವೇಶ ಮಾಡಿ ಆ ದೇಶಗಳ ಹಣಕಾಸಿನ ಬೆಲೆಯನ್ನು ಕಾಪಾಡಿಕೊಳ್ಳಲು ಪ್ರಯತ್ನಿಸುತ್ತಿವೆ.

ಈ ನಡುವೆ ಮಲೇಶ್ಯಾದ ಪ್ರಧಾನಿ ಮಹಾತೀರ್ ಮೊಹಮ್ಮದ್, ಸಲಹೆ ಮಾಡಿದ್ದ ಏಶ್ಯಾ ಭದ್ರತಾ ಫಂಡಿಗೆ ಆಸಿಯನ್ ದೇಶಗಳಿಂದ ಹೆಚ್ಚಿನ ಬೆಂಬಲ ಸಿಕ್ಕಿದೆ. ಕೌಲಲಂಪುರ್ ಸಭೆಯಲ್ಲಿ ಈ ಬಗ್ಗೆ ವಿಶೇಷ ಆಸ್ಥೆ ತೋರದಿದ್ದರೂ, ಬಿಕ್ಕಟ್ಟಿನ ಮುಂದುವರಿಕೆ ಐಎಂಎಫ್ ಹಾಗೂ ಅಮೇರಿಕಗಳ ಉದ್ಧಟತನ ಎಲ್ಲಾ ದೇಶಗಳು ಈ ಬಗ್ಗೆ ಪುನಃ ಯೋಚನೆ ಮಾಡುವಂತೆ ಮಾಡಿವೆ.

ಬ್ರಿಟಿಷ್ ಪ್ರಧಾನಿ ಐರಿಶ್ ಉಗ್ರಗಾಮಿಗಳ ನಾಯಕರ ಭೇಟಿ

76 ವರ್ಷಗಳ ನಂತರ ಬ್ರಿಟಿಷ್ ಪ್ರಧಾನಿ ಹಾಗೂ ಬ್ರಿಟನ್‌ನ ವಸಾಹತುಶಾಹಿ ವಿರುದ್ಧ ಹೋರಾಡುತ್ತಿರುವ ಐರಿಷ್ ರಿಪಬ್ಲಿಕನ್ ನಾಯಕರು ಮೊದಲ ಬಾರಿಗೆ ಅಧಿಕೃತವಾಗಿ ಭೇಟಿ ಮಾಡಿದ್ದರು. ಇದು ಐರಿಶ್ ಸಮಸ್ಯೆಗೆ ಶಾಂತಿಯುತ ಪರಿಹಾರದ ಸಾಧ್ಯತೆ ಬಗ್ಗೆ ಹೆಚ್ಚಿನ ಆಶಾ ಭಾವನೆ ಮೂಡಿಸಿದೆ. ಐರಿಶ್ ರಿಪಬ್ಲಿಕನ್ ಆರ್ಮಿಯ ರಾಜಕೀಯ ವಿಭಾಗ ಸಿನ್ ಫೆನ್‌ನ ನಾಯಕ ಗ್ಯಾರಿ ಆದಮ್ಸ್, ಬ್ರಿಟಿಶ್ ಪ್ರಧಾನಿ ಟೋನಿ ಬ್ಲೇರ್‌ರವರನ್ನು ಅವರ ನಿವಾಸದಲ್ಲಿ ಭೇಟಿ ಮಾಡಿ ಮಾತುಕತೆ ನಡೆಸಿದರು. ಗ್ಯಾರಿ ಆದಮ್ಸ್ ಜೊತೆ ಇತರ ಆರು ನಾಯಕರು ಮಾತುಕತೆಗಳಲ್ಲಿ ಹಾಜರಿದ್ದರು.

ಭ್ರಷ್ಟಾಚಾರದ ವಿರುದ್ಧ ಚೀನಾ ಕಮ್ಯುನಿಸ್ಟ್ ಪಕ್ಷದಿಂದ ಚಳುವಳಿ

ತನ್ನ ಕಾರ್ಯಕರ್ತರು, ನಾಯಕರಿಂದ ಭ್ರಷ್ಟಾಚಾರ, ದುಂದು ವೆಚ್ಚ ತೊಲಗಿಸುವ ಭಾರಿ ಚಳುವಳಿಯನ್ನು ಚೀನಾದ ಕಮ್ಯುನಿಸ್ಟ್ ಪಕ್ಷ ಆರಂಭಿಸಿದೆ. ಕೆಲವು ಸಮಯದ ಹಿಂದೆ ಪಕ್ಷದ ಕೇಂದ್ರೀಯ ಶಿಸ್ತು ಆಯೋಗ ಹೊರಡಿಸಿದ ಪರಿಪತ್ರದಲ್ಲಿ ಭ್ರಷ್ಟಾಚಾರ-ರಹಿತ ಶುದ್ಧ ಬದುಕು ಸಾಗಿಸುತ್ತಾ, ಜನತೆಯ ನಿಷ್ಠ ಸೇವೆ ಮಾಡಬೇಕು ಹಾಗು ದುಂದು ವೆಚ್ಚದಲ್ಲಿ ತೊಡಗದೆ ನಿಜವಾದ ಕಮ್ಯುನಿಸ್ಟರಂತಿರಬೇಕೆಂದು ಮನವಿ ಮಾಡಿದೆ. ಇತ್ತೀಚೆಗೆ ಪಕ್ಷದಿಂದ ಉಚ್ಚಾಟಿಸಲ್ಪಟ್ಟು ಜೈಲುವಾಸ ಅನುಭವಿಸುತ್ತಿರುವ ವೈ ಝು ಫಾಂಗ್‌ರ ಪ್ರಕರಣದಿಂದ ಎಲ್ಲರೂ ಪಾಠ ಕಲಿಯಬೇಕು ಎಂದು ಹೇಳಿದೆ.

ವೈ ಝು ಫಾಂಗ್ ಹೊನಾಯ್ ಪ್ರಾಂತ್ಯದ ಜನತಾ ಕಾಂಗ್ರೆಸ್‌ನ ಉಪಾಧ್ಯಕ್ಷರಾಗಿದ್ದರು. ಪ್ರಾಂತ್ಯದ ರಾಜಕೀಯ ಹಾಗೂ ಕಾನೂನು ಸಮಿತಿಯ ಕಾರ್ಯದರ್ಶಿಯಾಗಿ ಕೆಲಸ ನಿರ್ವಹಿಸುತ್ತಿದ್ದರು. 60 ಸಾವಿರ ಯುವಾನ್ ನಷ್ಟು ಲಂಚ ಪಡೆದಿದ್ದರ ಅಪರಾಧಕ್ಕಾಗಿ ಅವರನ್ನು ಪಕ್ಷದಿಂದ ಹೊರದೂಡಿದ್ದಲ್ಲದೆ. ಐದು ವರ್ಷ ಜೈಲುವಾಸ ವಿಧಿಸಲಾಗಿದೆ.

ವೈರವರ ಪ್ರಕರಣದಿಂದ ಹಲವು ರೀತಿಯಲ್ಲಿ ಪಾಠ ಕಲಿಯಬೇಕು. ಆತ 39 ವರ್ಷದಷ್ಟು ದೀರ್ಘಕಾಲ ಕಮ್ಯುನಿಸ್ಟ್ ಪಕ್ಷದಲ್ಲಿ ಸೇವೆ ಸಲ್ಲಿಸಿದ್ದರೂ, ಇತ್ತೀಚಿಗಿನ ಅವಧಿಯಲ್ಲಿ ತನ್ನ ಚಾರಿತ್ರ್ಯ ಕಾಪಾಡಿಕೊಳ್ಳದಿದ್ದರಿಂದ ಶಿಕ್ಷೆಗೆ ಗುರಿಯಾಗಬೇಕಾಯಿತು. ಎಷ್ಟು ಹಿರಿಯ ನಾಯಕರಾದರೂ, ಹಿಂದಿನ ದೀರ್ಘ ಸೇವಾವಧಿ ಇದ್ದರೂ ಪಕ್ಷ ಭ್ರಷ್ಟರನ್ನು ಸಹಿಸುವುದಿಲ್ಲ ಎನ್ನುವುದಕ್ಕೆ ಈ ಪ್ರಕರಣ ಸಾಕ್ಷಿ ಎಂದು ಆಯೋಗ ಹೇಳಿದೆ.

ಇತ್ತೀಚಿಗೆ ಪಕ್ಷದ ಕಾರ್ಯಕರ್ತರಿಗೆ ಸಂಘಟಿಸಲಾದ ಕೇಂದ್ರೀಯ ಸ್ಕೂಲಲ್ಲಿ ಮಾತನಾಡುತ್ತಾ ಪ್ರಧಾನ ಕಾರ್ಯದರ್ಶಿ ಜಿಯಾಂಗ್ ಝೆಮಿನ್ ಭ್ರಷ್ಟಾಚಾರ ಹಾಗೂ ದುಂದು ವೆಚ್ಚದ ವಿರುದ್ಧ ಎಲ್ಲಾ ಹಂತಗಳಲ್ಲಿ ಹೋರಾಡಬೇಕೆಂದು ಕರೆ ಕೊಟ್ಟಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಹೊರ ಜಗತ್ತಿಗೆ ತೆರೆದುಕೊಳ್ಳುವ, ಸಮಾಜವಾದಿ ಮಾರುಕಟ್ಟೆ ಆರ್ಥಿಕ ಬೆಳೆಸುವ ಹೊಸ ರೀತಿಯ ಕೆಲಸದ ಅವಧಿಯಲ್ಲಿ ಈ ರೀತಿಯ ಕೆಟ್ಟ ಪ್ರವೃತ್ತಿಗಳು ಬೆಳೆದಿದ್ದು ಇದರ ವಿರುದ್ಧ ಹೋರಾಟ ಗಂಭೀರ ರಾಜಕೀಯ ಹೋರಾಟ. ಈ ಹೋರಾಟದ ಮೇಲೆ ಪಕ್ಷ ಹಾಗೂ ಸರಕಾರದ ಭವಿಷ್ಯ ನಿಂತಿದೆ ಎಂದು ಹೇಳಿದ್ದಾರೆ.

ಉಕ್ರೇನ್‌ನಲ್ಲಿ ವೇತನ, ಪೆನ್ಶನ್ ವಿರುದ್ಧ ಅಧ್ಯಕ್ಷೀಯ ವೀಟೋ

ಉಕ್ರೇನ್‌ನ ಎಡಪಂಥೀಯ ಶಕ್ತಿಗಳು ಪ್ರಬಲವಾಗಿರುವ ಪಾರ್ಲಿಮೆಂಟು ಮಂಜೂರು ಮಾಡಿದ್ದ ವೇತನ ಹಾಗೂ ಪೆನ್‌ಶನ್ ಹೆಚ್ಚಳವನ್ನು, ಅಧ್ಯಕ್ಷರು ತಮ್ಮ ವಿಟೋ ಅಧಿಕಾರ ಬಳಸಿ ತಡೆಹಿಡಿದಿದ್ದಾರೆ. ಪಾರ್ಲಿಮೆಂಟು ಇದೇ ವರ್ಷದ ಜೂನ್‌ನಲ್ಲಿ ಕನಿಷ್ಟ ವೇತನ ಹಾಗೂ ಪೆನ್‌ಶನ್ ಎರಡನ್ನೂ ಇಮ್ಮಡಿಗೊಳಿಸುವ ಕಾನೂನು ಮಂಜೂರು ಮಾಡಿತ್ತು. ದೇಶದ ಮೂರನೇ ಒಂದು ಭಾಗ ಪೆನ್‌ಶನ್ ಪಡೆಯುವವರು ಈ ದೇಶದಲ್ಲಿ, ಇದು ಜನಜೀವನವನ್ನು ಗಂಭೀರವಾಗಿ ಕಲಕುವ ಬೆಳವಣಿಗೆ, ಈಗಿನ ಕನಿಷ್ಠ ವೇತನ, ಪೆನ್‌ಶನ್ ಕನಿಷ್ಠ ಅವಶ್ಯಕತೆಗಳಿಗೂ ಸಾಲದು.

ಉಕ್ರೇನ್‌ನ ಆರ್ಥಿಕ ಬಿಕ್ಕಟ್ಟಿಗೆ ಕಾರಣ ಈ ವರ್ಷ ನಿರೀಕ್ಷಿತ ಒಟ್ಟು ಉತ್ಪಾದನೆ ಹೆಚ್ಚಳವಾಗದಿದ್ದದ್ದು. ಶೇಕಡಾ. 0.3 ರಷ್ಟು ಉತ್ಪಾದನೆ ಹೆಚ್ಚಳವಾಗುವ ಬದಲು ಅದು ಶೇಕಡಾ 5 ರಷ್ಟು ಇಳಿದಿದೆ. ಇದಕ್ಕೆ ಕಾರಣ ಕೈಗಾರಿಕಾ ಉತ್ಪಾದನೆ ಶೇಕಡಾ 2.5 ರಷ್ಟು ಇಳಿದಿದೆ. ವಾಣಿಜ್ಯ ಹಾಗೂ ಆದಾಯ ತೆರಿಗೆ ವಸೂಲಿ ನಿರೀಕ್ಷಿತ ಮೊತ್ತಕ್ಕಿಂತ ತೀರಾ ಕಡಿಮೆಯಾಗಿದ್ದು ಇನ್ನೊಂದು ಪ್ರಮುಖ ಕಾರಣ. ಇದಕ್ಕೆ ಮುಂದಿನ ವರ್ಷವೂ ಆರ್ಥಿಕ ಚೇತರಿಕೆಯ ಲಕ್ಷಣಗಳಿಲ್ಲ.

ವಿರಾಜಪೇಟೆಯಲ್ಲಿ ಶಾಂತಿ ಸ್ಥಾಪನೆಗೆ ಸಿಪಿಐ(ಎಂ)ಮನವಿ

ಡಿಸೆಂಬರ್ 7 ರಂದು ಕೊಡಗಿನ ವಿರಾಜಪೇಟೆಯ ಹೋಟೆಲೊಂದರಲ್ಲಿ ಒಬ್ಬ ವಕೀಲರೂ ಸೇರಿದಂತೆ ಇಬ್ಬರ ಕೊಲೆ ಹಾಗೂ ಇದನ್ನು ದುರುಪಯೋಗಪಡಿಸಿಕೊಂಡ ಮತಾಂಧ ಶಕ್ತಿಗಳು ಮತ್ತು ಸಮಾಜ ದ್ರೋಹಿಗಳು ಎಬ್ಬಿಸಿದ ಗಲಭೆ - ಲೂಟಿಗಳಲ್ಲಿ ಒಬ್ಬನ ಸಾವು ತೀರಾ ಕಳವಳಕಾರಿ ಬೆಳವಣಿಗೆಗಳು ಎಂದು ಸಿಪಿಐ(ಎಂ)ನ ವಿರಾಜಪೇಟೆ ಶಾಖೆಯ ಕಾರ್ಯದರ್ಶಿಗಳು ಪತ್ರಿಕಾ ಹೇಳಿಕೆಯೊಂದರಲ್ಲಿ ಸಂತಾಪ ವ್ಯಕ್ತಪಡಿಸಿದ್ದಾರೆ. ಹತ್ಯೆ ನಡೆಸಿದ ಅಪರಾಧಿಗಳನ್ನು ಬಂಧಿಸಬೇಕೆಂದು ಒತ್ತಾಯಿಸಿದ್ದಾರೆ.

ನಗರದಲ್ಲಿ ಉಂಟಾದ ವಾತಾವರಣಕ್ಕೆ ಪೋಲೀಸರ ನಿಷ್ಕ್ರಿಯತೆಯೇ ಕಾರಣ, ಲಂಚ-ರುಶುವತ್ತುಗಳ ಆಗರದಂತಿರುವ ಪೋಲಿಸ್ ಇಲಾಖೆಯಲ್ಲಿ ಜನಗಳ ವಿಶ್ವಾಸವೇ ಇಲ್ಲದಂತಾಗಿದೆ. ಈ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವರು ಸೂಕ್ತ ಕ್ರಮಗಳನ್ನು ಕೂಡಲೇ ಕೈಗೊಳ್ಳಬೇಕು ಎಂದು ಅವರು ಒತ್ತಾಯಿಸಿದ್ದಾರೆ.

‘ಒಂದೆಡೆಯಿಂದ ಸಮಾಜ ದ್ರೋಹಿಗಳು ಮತ್ತೊಂದೆಡೆಯಿಂದ ಪೋಲೀಸರು ಈ ರೀತಿ ಒಂದುಗೂಡಿ ವರ್ತಿಸುತ್ತಿದ್ದಾಗ ಧೈರ್ಯದಿಂದ ಮುನ್ನುಗ್ಗಿ ರಂಗಕ್ಕಿಳಿದು ಬೆಂಕಿ ನಂದಿಸುವುದು, ಮಳಿಗೆಗಳನ್ನು ರಕ್ಷಿಸುವುದು ಈ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಜೀವನ ಹಂಗು ತೊರೆದು ದುಡಿದ ಕೆಲವು ಯುವಕ-ಯುವತಿಯರ ಪಾತ್ರ ಅನುಕರಣೀಯವಾದದ್ದು” ಎಂದು ಶಾಖಾ ಕಾರ್ಯದರ್ಶಿಯವರು ಅವರಿಗೆ ತಮ್ಮ ಪಕ್ಷದ ಅಭಿನಂದನೆ ಸಲ್ಲಿಸಿದ್ದಾರೆ. ಇಂತಹ ಪರಿಸ್ಥಿತಿಗಳಲ್ಲಿ ಮಧ್ಯ ಪ್ರವೇಶಿಸಿ ಅದನ್ನು ಹತೋಟಿಗೆ ತರಬೇಕಾಗಿದ್ದ ಜನಪ್ರತಿನಿಧಿಗಳು ವಿಫಲರಾಗಿದ್ದಾರೆ ಎಂದು ಆಪಾದಿಸುವ ಈ ಪತ್ರಿಕಾ ಹೇಳಿಕೆ ‘ಇನ್ನಾದರೂ ಪರಿಸ್ಥಿತಿಯನ್ನು ಹತೋಟಿಗೆ ತಂದು ಶಾಂತ ಸ್ಥಿತಿ ಪುನರ್‌ಸ್ಥಾಪಿಸಲು ಎಲ್ಲರೂ ಶ್ರಮಿಸಬೇಕು’ ಎಂದು ಪ್ರಾರ್ಥಿಸಿದೆ.

ದಕ್ಷಿಣ ಕನ್ನಡ ಎಸ್.ಎಫ್.ಐ ವಿದ್ಯಾರ್ಥಿ ಸಮಾವೇಶ

ಬೆಳ್ತಂಗಡಿ: ನವೆಂಬರ್ 15 ರಂದು ಬೆಳ್ತಂಗಡಿ ತಾಲೂಕು ಎಸ್.ಎಫ್.ಐ ವಿದ್ಯಾರ್ಥಿ ಸಮಾವೇಶವು ನಡೆಯಿತು. ಸಮಾವೇಶವನ್ನುದ್ದೇಶಿಸಿ ಮಾತನಾಡಿದ ನ್ಯಾಯವಾದಿಗಳು ಹಾಗೂ ಡಿ.ವೈ.ಎಫ್.ಐ ನ ತಾಲೂಕು ಅಧ್ಯಕ್ಷರಾದ ಬಿ. ಎಂ.ಭಟ್ ರು ಸಂಘಟಿತ ಹೋರಾಟ'ದ ಮೂಲಕ ಶಿಕ್ಷಣ ವ್ಯವಸ್ಥೆಯ ಬದಲಾವಣೆ ಸಾಧ್ಯ ಎಂದರು.

ಇಂದಿನ ಶಿಕ್ಷಣವು ನೈಜವಾಗಿರದೆ, ವಿದ್ಯಾಭ್ಯಾಸ ಮುಗಿಸಿ ಹೊರಬಂದ ವಿದ್ಯಾರ್ಥಿಗಳಿಗೆ ಸಮಾಜ ಬೇರೆಯಾಗಿಯೇ ಕಾಣುತ್ತದೆ ಎಂದು ಡಿ.ವೈ.ಎಫ್.ಐ ನ ಕೆ. ರಾಮದಾಸ್ ತಿಳಿಸಿದರು. ಅನೇಕ ಸರಕಾರಿ ಕಾಲೇಜ್ ಗಳಲ್ಲಿ ಅಧ್ಯಾಪಕರ ಕೊರತೆ ಇದ್ದು, ಅದನ್ನು ನೀಗಿಸಲು ವಿದ್ಯಾರ್ಥಿಗಳು ಅದೆಷ್ಟೊ ಹೋರಾಟಗಳನ್ನು ಮಾಡಿದರೂ ಸರಕಾರವು ಇತ್ತ ಗಮನ ಹರಿಸದೆ ವಿದ್ಯಾರ್ಥಿ ವಿರೋಧಿ ನೀತಿಗಳನ್ನು ಅನುಸರಿಸುತ್ತಿದೆ ಎಂದರು. ದ.ಕ. ಜಿಲ್ಲಾ ಸರ್ವ .ಪ.ಪೂರ್ವ ಕಾಲೇಜ್ ವಿದ್ಯಾರ್ಥಿ ಸಂಘದ ಅಧ್ಯಕ್ಷರಾದ ಸ್ಟೀವನ್ ವಾಸ್‌ರವರು ತಿಳಿಸಿದರು.

ಉಳ್ಳಾಲ ವಲಯ ವಿದ್ಯಾರ್ಥಿ ಸಮಾವೇಶ

ನವೆಂಬರ್ 29ರಂದು ಎಸ್.ಎಫ್.ಐ. ನೇತೃತ್ವದಲ್ಲಿ ಉಳ್ಳಾಲ ವಲಯ ಮಟ್ಟದ ವಿದ್ಯಾರ್ಥಿ ಸಮಾವೇಶ ತೊಕ್ಕೊಟ್ಟಿನಲ್ಲಿ ನಡೆಯಿತು. ಸಮಾವೇಶವನ್ನು ವಿಮಾ ನೌಕರರ ಸಂಘದ ನಾಗೇಶ ಕುಮಾರ್ ಉದ್ಘಾಟಿಸಿದರು. ಅಂದು ದೇಶಕ್ಕೆ ಸ್ವಾತಂತ್ರ ಕ್ಕೋಸ್ಕರ ಸಾವಿರಾರು ವಿದ್ಯಾರ್ಥಿಗಳು ಶಾಲಾ ಕಾಲೇಜುಗಳನ್ನು ಬಹಿಷ್ಕರಿಸಿ ಹೋರಾಟದಲ್ಲಿ ಭಾಗವಹಿಸಿ ಪ್ರಾಣತ್ಯಾಗ ಮಾಡಿದ್ದಾರೆ. ಅಂತಹ ವಿದ್ಯಾರ್ಥಿ ಸಮುದಾಯಕ್ಕೆ ರಾಜಕೀಯ ಬೇಡ ಎನ್ನುವುದು ಕುತಂತ್ರ ರಾಜಕೀಯ ಎಂದು ನಾಗೇಶ್‌ಕುಮಾರ್ ತಿಳಿಸಿದರು. ವಿದ್ಯಾರ್ಥಿಗಳು ತನ್ನ ಸುತ್ತ ಮುತ್ತಲಿನ ಶೈಕ್ಷಣಿಕ ಸಮಸ್ಯೆಗಳ ಬಗ್ಗೆ ಚಿಂತನೆ ನಡೆಸಿ ಅದರ ವಿರುದ್ಧ ನ್ಯಾಯಯುತವಾದ ಹೋರಾಟ ನಡೆಸುವುದೇ ನಿಜವಾದ ರಾಜಕೀಯ ಎಂದರು.

ಮುಖ್ಯ ಅತಿಥಿಗಳಾಗಿ ಡಿ.ವೈ.ಎಫ್.ಐ ನ ಅರುಣ್ ಕುಮಾರ್, ಎಸ್.ಎಫ್.ಐ.ನ ದೀಪಕ್ ಕುಮಾರ್,ಸುಕುಮಾರ್, ಸುನೀಲ್ ಕುಮಾರ್ ಬಜಾಲ್, ರಾಜ್ಯ ಸಮಿತಿ ಸದಸ್ಯೆಯಾದ ಜೂಲಿ ವಿವಿಯನ್ ರವರು ಉಪಸ್ಥಿತರಿದ್ದರು.

ನೂತನ ಸಮಿತಿ: ಅಧ್ಯಕ್ಷರಾಗಿ ಕಮಲಾಕ್ಷ ಕೊಂಡಾಣ ಕಾರ್ಯದರ್ಶಿಯಾಗಿ ಶರತ್ ಕುಮಾರ್ ಉಪಾಧ್ಯಕ್ಷರಾಗಿ ಅಜೀಜ್ ಉಳ್ಳಾಲ್, ಅಬ್ದುಲ್ ಬಶೀರ್ ಕಲ್ಲಟ್, ಶ್ರೀಕಾಂತ ಪ್ರಭು, ಸಹ ಕಾರ್ಯದರ್ಶಿಗಳಾಗಿ ಭಾಗೀರಥಿ, ತಿಮ್ಮಯ್ಯ, ಸಾಜನ್, ಮಹಮದ್ ಮುಸ್ತಾಫ್ ರನ್ನು ಆರಿಸಲಾಯಿತು.

ಉಡುಪಿ: ನವೆಂಬರ್ 22 ರಂದು ಉಡುಪಿ ತಾಲೂಕು ಮಟ್ಟದ ವಿದ್ಯಾರ್ಥಿ ಸಮಾವೇಶವನ್ನು ಎಸ್.ಎಫ್.ಐ ನ ರಾಜ್ಯಾಧ್ಯಕ್ಷರಾದ ಕೆ.ಎಸ್. ಉಮೇಶ್ ಉದ್ಘಾಟಿಸಿದರು. ಇದೇ ಸಂದರ್ಭದಲ್ಲಿ ಕಾರ್ಮಿಕ ಮುಖಂಡರಾದ ಪಿ. ವಿಶ್ವನಾಥ ರೈ, ಸುನೀಲ್ ಕುಮಾರ್ ಬಜಾಲ್ ನಿತಿನ್ ಶೆಟ್ಟಿ ಉಪಸ್ಥಿತರಿದ್ದರು. ಕುಮಾರಿ ಪ್ರಮೀಳಾ ಅಧ್ಯಕ್ಷತೆ ವಹಿಸಿದ್ದರು. **ನೂತನ ಸಮಿತಿ :** ಅಧ್ಯಕ್ಷರು ವಿಕಾಸ್, ಕಾರ್ಯದರ್ಶಿ ನಿತಿನ್ ಶೆಟ್ಟಿ, ಉಪಾಧ್ಯಕ್ಷರು, ಹರಿ, ಪ್ರಸನ್ನ, ಸುಧಾಕರ, ಸಹಕಾರ್ಯದರ್ಶಿಗಳಾಗಿ ಶ್ರೀಕಾಂತ್ ಉಡುಪಿ, ಮಹೇಶ್‌ಕುಮಾರ್ ಹೆಗಡೆ, ಮೋಹನ್ ಕುಮಾರ್‌ರನ್ನು ಆರಿಸಲಾಯಿತು.

ಹಟ್ಟಿ ಚಿನ್ನದ ಗಣಿಗೆ ಬೀಗ ಮುದ್ರೆ ಏತಕ್ಕಾಗಿ?

ಕರ್ನಾಟಕದ ಹಿಂದುಳಿದ ಜಿಲ್ಲೆ ರಾಯಚೂರಿನ ಲಿಂಗಸ್ಗೂರು ತಾಲೂಕಿನಲ್ಲಿರುವ ಹಟ್ಟಿ ಚಿನ್ನದಗಣಿಗೆ ತಾ. 16. 12.1997 ರಿಂದ ಬೀಗಮುದ್ರೆ ಹಾಕಲಾಗಿದೆ. ಗಣಿಯಲ್ಲಿ 4,000 ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಪ್ರತಿದಿನ 4.5 ಕೆ.ಜಿ.(ನಾಲ್ಕುವರೆ) ಚಿನ್ನ ಉತ್ಪಾದನೆ ಆಗುತ್ತಿದ್ದು ಕೂಡಲೇ 15 ಕೆ.ಜಿ. ಪ್ರತಿದಿನ ಉತ್ಪಾದನೆಯನ್ನು ಯೋಜಿಸಿರುವಾಗಲೇ ಬೀಗಮುದ್ರೆ ಘೋಷಿಸಲ್ಪಟ್ಟಿದೆ. ವಿಸ್ತರಣೆಯ ಕೆಲಸಕ್ಕಾಗಿ ಕೂಡಿಸಲಾದ ಕೋಟಿಗಟ್ಟಲೆ ಸಾರ್ವಜನಿಕ ಹಣ ವ್ಯರ್ಥವಾಗುವ ಲಕ್ಷಣ ಕಂಡುಬರುತ್ತಿದೆ.

ಬೀಗಮುದ್ರೆಯನ್ನು ಕೂಡಲೇ ತೆರವು ಮಾಡಬೇಕು. ಕಾರ್ಮಿಕರ ಎಲ್ಲಾ ಸಮಸ್ಯೆಗಳನ್ನು ಚರ್ಚೆಯ ಮೂಲಕ ಸಂಧಾನದ ಮೂಲಕ ಪರಿಹರಿಸಲು ಸಿದ್ಧವಿದ್ದಾರೆ ಎಂದು ಹಟ್ಟಿ ಚಿನ್ನದ ಗಣಿ ಸಿಬ್ಬಂದಿ ಹಾಗೂ ಕಾರ್ಮಿಕರ ಅಧ್ಯಕ್ಷರಾದ ವಿ.ಜಿ.ಕೆ. ನಾಯರ್ ಪತ್ರಿಕಾ ಹೇಳಿಕೆಯೊಂದರಲ್ಲಿ ತಿಳಿಸಿದ್ದಾರೆ. ಬೀಗಮುದ್ರೆ ತೆರವು ಮಾಡಲು ರಾಜ್ಯ ಸರ್ಕಾರ ಕೂಡಲೇ ಮುಂದಾಗಬೇಕು. ಇಲ್ಲದಿದ್ದರೆ ಗಣಿಗಳ ಕೈಗಾರಿಕಾ ವಿವಾದ ಪರಿಹಾರಕ್ಕೆ, ಭಾರತ ಸರ್ಕಾರ ಬೀಗಮುದ್ರೆಯನ್ನು ಕೂಡಲೇ ನಿಷೇಧಿಸಿ ಪ್ರಕಟಣೆ ಹೊರಡಿಸಬೇಕು. ಅಲ್ಲದೆ ನಿಷೇಧಿಸಲಾದ ಲೇ ಆಫ್‌ಅನ್ನು ಮಾಡಿದ ಅಧಿಕಾರಿಗಳ ಮೇಲೆ ಮೊಕದ್ದಮೆ ಹೂಡಬೇಕು, ಕಾರ್ಮಿಕರಿಗೆ ಪೂರ್ಣಕಾಲದ ಪೂರ್ಣ ಸಂಬಳ ನೀಡಬೇಕು ಎಂದು ಅವರು ಒತ್ತಾಯಿದ್ದಾರೆ.

ಆಡಳಿತ ವರ್ಗದವರು ಕ್ರಮಬದ್ಧವಾದ ಅಪಪ್ರಚಾರ ಮಾಡುತ್ತಿದ್ದಾರೆ. ಕಾರ್ಮಿಕರು ಕೆಲಸಕ್ಕೆ ಹಾಜರಾಗಲು ತಯಾರಿಲ್ಲವೆಂಬುದು ಕೇವಲ ಅಪಪ್ರಚಾರ. ಉತ್ಪಾದನೆ ಮಾಡಿದರೆ ನಷ್ಟವಾಗುತ್ತದೆ ಎಂದು ಹೇಳುವುದು ಅಪ್ಪಟ ಸುಳ್ಳು ಎಂದು ಕಾರ್ಮಿಕರ ಸಂಘ ಸ್ಪಷ್ಟಪಡಿಸಿದೆ.

ಕಾರ್ಮಿಕರು ದಿ. 15-12-1997 ರಂದು ಒಂದು ದಿನದ ಸಾಂಕೇತಿಕ ಮುಷ್ಕರ ಮಾಡಿದರು. ಆಡಳಿತ ವರ್ಗ ಅಂದು ಶೇ. 20 ರಷ್ಟು ಬೋನಸ್ ಬಟವಾಡೆಯಾಗುತ್ತದೆ ಎಂದು ಒಪ್ಪಿದುದನ್ನು ಜಾರಿ ಮಾಡದಿರುವುದು ಇದಕ್ಕೆ ಮೊದಲ ಕಾರಣ. ಲೇ ಆಫ್ ನಿಷೇಧವನ್ನು ಉಲ್ಲಂಘಿಸಿ 684 ಕಾರ್ಮಿಕರನ್ನು ಕಾನೂನು ಬಾಹಿರವಾಗಿ 14ನೇ ತಾರೀಖಿನಿಂದಲೇ ಲೇ ಆಫ್ ಮಾಡಿದುದು ಎರಡನೇ ಕಾರಣ. 7 ದಿನದ ಕೆಲಸವನ್ನು ಏಕಪಕ್ಷೀಯವಾಗಿ ಜಾರಿಮಾಡುವ ಮೂಲಕ ಪ್ರತಿದಿನದ ಕೆಲಸವನ್ನು 4,000 ಜನರಿಂದ 2,800 ಜನಕ್ಕೆ ಕಡಿಮೆ ಮಾಡಿರುವುದನ್ನು ವಿರೋಧಿಸುವುದು ಈ ಸಾಂಕೇತಿಕ ಮುಷ್ಕರಕ್ಕೆ ಮೂರನೇ ಕಾರಣ.

ಆಡಳಿತ ವರ್ಗದ ಪ್ರಚೋದನೆ ಎಷ್ಟೇ ಇದ್ದರೂ ಒಂದೇ ದಿನ ಮುಷ್ಕರ ಮಾಡಿ ಬೇಷರತ್ತಾಗಿ ಕೆಲಸಕ್ಕೆ ಹಾಜರಾಗುವುದು ಕಾರ್ಮಿಕರ ಉದ್ದೇಶವಾಗಿತ್ತು. ಈಗಲೂ ಬೇಷರತ್ತಾಗಿ ಕೆಲಸಕ್ಕೆ ಹಾಜರಾಗಲು ಕಾರ್ಮಿಕರು ತಯಾರಾಗಿದ್ದಾರೆ. ಆದರೆ ಕಾರ್ಮಿಕರನ್ನು ಕೆಲಸದಿಂದ ತಡೆಯುವುದೇ ಡಿಸೆಂಬರ್ 16ರಂದು ಘೋಷಿಸಿದ ಬೀಗಮುದ್ರೆಯ ಉದ್ದೇಶ ಎಂದು ವಿ. ಜಿ.ಕೆ. ನಾಯರ್ ಆರೋಪಿಸಿದ್ದಾರೆ.

''ಚಿನ್ನದ ಹಗರಣವನ್ನು ತಡೆಗಟ್ಟಿ'' ಹಟ್ಟಿ ಗಣಿಯಲ್ಲಿ ಇರುವ ನೂರಾರು ಟನ್ ಚಿನ್ನ ಮತ್ತು ರಾಯಚೂರು ಜಿಲ್ಲೆಯಲ್ಲಿ ಇರಬಹುದಾದ ಸಾವಿರಾರು ಟನ್ ಚಿನ್ನವನ್ನು ವಿದೇಶಿಯರ ಕೈಗೆ ಒಪ್ಪಿಸುವುದು ಮತ್ತು ಸರ್ಕಾರಕ್ಕೆ ಮೋಸ ಮಾಡುವುದು ನೌಕರಶಾಹಿ ಮತ್ತು ರಾಜಕಾರಣಿಗಳ ಸಂಚು ಆಗಿರುತ್ತದೆ. ಉತ್ಪಾದನೆಯನ್ನು ಸ್ಥಗಿತಗೊಳಿಸಲು, ಗಣಿಯನ್ನು ನಷ್ಟದ್ದು ಎಂದು ಸಾರಲು ಬೇರೆಯಾವುದೇ ಕಾರಣ ಕಂಡು ಬರುವುದಿಲ್ಲ ಎಂದು ಅಭಿಪ್ರಾಯ ಪಟ್ಟಿರುವ ಕಾರ್ಮಿಕರ ಸಂಘದ ಅಧ್ಯಕ್ಷರು ಇಲ್ಲಿ ಸೃಷ್ಟಿಯಾಗುತ್ತಿರುವ ಚಿನ್ನದ ಹಗರಣವೊಂದನ್ನು ತಡೆಯಬೇಕಾಗಿದೆ, ಏಕೆಂದರೆ ಹಗರಣ ನಡೆದ ನಂತರ ಪ್ರತಿಭಟನೆ ಮಾಡಬಹುದಷ್ಟೆ, ಬೇರೇನೂ ಸಾಧಿಸಲಾಗದು, ಆದ್ದರಿಂದ ಸಾರ್ವಜನಿಕರು ಈಗಲೇ ಎಚ್ಚರಿಕೆ ವಹಿಸಿದರೆ ಈ ಹಗರಣವಾಗದಂತೆ ತಟಗಟ್ಟಬಹುದು ಎಂದಿದ್ದಾರೆ.

ಚಿನ್ನದ ಉತ್ಪಾದನೆಯನ್ನು ಹೆಚ್ಚಿಸಲು ಅದಕ್ಕಾಗಿ ಹೆಚ್ಚು ಕೆಲಸ ಮಾಡಲು ಕಾರ್ಮಿಕರು ಸಿದ್ಧವಾಗಿದ್ದಾರೆ. ಚಿನ್ನದ ಮಾರಾಟದ ಬೆಲೆಗಿಂತ ಕಡಿಮೆ ಬೆಲೆಗೆ ಚಿನ್ನವನ್ನು ಉತ್ಪಾದಿಸಲು ಕಾರ್ಮಿಕರಿಂದ ಸಾಧ್ಯವಿದೆ. ಚಿನ್ನದ ಉತ್ಪಾದನೆಯನ್ನು ಹೆಚ್ಚಿಸುವ ಬದಲು ಕುಗ್ಗಿಸುವುದು ಈಗಿನ ಆಡಳಿತಾಧಿಕಾರಿಗಳ ನೌಕರಶಾಹಿಗಳ, ರಾಜಕಾರಣಿಗಳ ಉದ್ದೇಶವಾಗಿರಬಹುದು. ಉತ್ಪಾದನೆಯನ್ನು ಕಡಿಮೆಗೊಳಿಸುವ ಮೂಲಕ ನಷ್ಟದ ಬೊಬ್ಬೆಯನ್ನು ಇವರುಗಳು ಹಾಕುತ್ತಿದ್ದಾರೆ. ಪ್ರತಿದಿನ 35 ರಿಂದ 40 ಸಿಡಿತ (ಬ್ಲಾಸ್ಟ್) ಮಾಡತಕ್ಕ ಗಣಿಯಲ್ಲಿ ಕಳೆದ ಇಡೀ ವಾರ ಮಾಡಿರುವುದೇ 35 ಸಿಡಿತ. ಅದಿರನ್ನು ಸಿಡಿಸದೇ ''ತಳ್ಳುವುದಾಗಲೀ'', ಅದಿರು ''ಎತ್ತುವುದಾಗಲೀ'' ''ಮಿಲ್ಲಿಂಗ್'' ಮಾಡುವುದಾಗಲೀ ಅಸಾಧ್ಯ ಎಂದು ವಿ.ಜಿ.ಕೆ.ನಾಯರ್ ಹೇಳಿದ್ದಾರೆ.

ಸಮಸ್ಯೆಯ ಪರಿಹಾರಕ್ಕೆ ಜನತೆಯ ಹತ್ತಿರಕ್ಕೆ ;

ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರ ನಡೆಸುವ ರಾಜಕಾರಣಿಗಳು ಸಮಸ್ಯೆಯ ಪರಿಹಾರ ಕಾಣುವುದರಲ್ಲಿ ನಿಧಾನಗತಿ ಅನುಸರಿಸಿದರೆ ರಾಯಚೂರು ಜಿಲ್ಲೆಯಾದ್ಯಂತ ಪಾದಯಾತ್ರೆ ಮಾಡುವುದು ಮತ್ತು ಬೆಂಗಳೂರು ಚಲೋ ಕಾರ್ಯಕ್ರಮ ಮಾಡುವ ಮೂಲಕ 4,000 ಕಾರ್ಮಿಕರ ಮತ್ತು ಅವರ ಕುಟುಂಬದವರ ಸಂಘಟನೆ ಕಾರ್ಯಕ್ರಮ ಕೈಗೊಳ್ಳುವುದರ ಮೂಲಕ ಈ ರಾಜಕಾರಣಿಗಳ ನಿಜಬಣ್ಣ ಬಯಲು ಮಾಡಲು ಕಾರ್ಮಿಕರ ಸಂಘ ಮುಂದಾಗುತ್ತದೆ ಎಂದು ವಿ.ಜಿ.ಕೆ. ನಾಯರ್ ಎಚ್ಚರಿಸಿದ್ದಾರೆ.

ಈ 'ಸಂಶೋಧಕ'ರಿಗೆ ಬಡ ಮಹಿಳೆಯರ ಜೀವ ಇಷ್ಟೊಂದು ಅಗ್ಗವೇ?

ಎಐಡಿಡಬ್ಲ್ಯೂಎ ಖಂಡನೆ

ಡಿಸೆಂಬರ್ 10 ರಂದು ಮಾನವ ಹಕ್ಕುಗಳ ದಿನದ ಸಂದರ್ಭದಲ್ಲಿ ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘ (AIDWA) ದೇಶದ ಪ್ರಧಾನ ವೈದ್ಯಕೀಯ ಸಂಶೋಧನಾ ಸಂಸ್ಥೆ ಮಾನವ ಹಕ್ಕುಗಳ ಉಲ್ಲಂಘನೆ ಮಾಡುತ್ತಿದೆ ಎಂದು ಆಪಾದಿಸಿದೆ. ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ (ICMR) ಬಡ ಮಹಿಳೆಯರ ಜೀವಕ್ಕೆ ಬೆಲೆಯೇ ಇಲ್ಲ ಎಂದು ಭಾವಿಸಿದಂತಿದೆ ಎಂದು ಅದು ಹೇಳಿದೆ.

ICMR ನ ಒಂದು ಅಂಗ ಸಂಸ್ಥೆಯಾದ ರೋಗಶಾಸ್ತ್ರ ಮತ್ತು ಅರ್ಬುದ ಶಾಸ್ತ್ರ ಸಂಸ್ಥೆ ಮೌಲಾನಾ ಆಝಾದ್ ಕಾಲೇಜಿನಲ್ಲಿ ಗರ್ಭಕೋಶದ ಕ್ಯಾನ್ಸರ್ ರೋಗದ ಸಂಶೋಧನಾ ಯೋಜನೆಯೊಂದರಲ್ಲಿ ಬಡ ಮಹಿಳೆಯರನ್ನು ಪ್ರಯೋಗ ಪಶುಗಳಾಗಿ ಬಳಸುತ್ತಿರುವ ಆಪಾದನೆಯನ್ನು ಕುರಿತಂತೆ ಎಐಡಿಡಬ್ಲ್ಯೂಎ ಈ ಹೇಳಿಕೆಯನ್ನು ನೀಡಿದೆ. ಈ ಪ್ರಯೋಗಗಳಲ್ಲಾದ ಗಾಯ, ವಿಕಾರಗಳು ಕ್ಯಾನ್ಸರ್‌ಆಗಿ ಬೆಳೆದು ಹಲವು ಮಹಿಳೆಯರು ಸತ್ತಿದ್ದಾರೆ ಎಂದು ವರದಿಯಾಗಿದೆ.

ಇತರ ವಿಷಯಗಳಲ್ಲೂ (ಮಹಿಳೆಯರ ಮೇಲೆ ಹಾರ್ಮೋನ್ ಗರ್ಭನಿರೋಧಕಗಳ ದುಷ್ಪರಿಣಾಮಗಳ ಪ್ರಯೋಗ ಮುಂತಾದವುಗಳಲ್ಲಿ) ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ ಒಂದು ಉಪೇಕ್ಷೆಯ ನಿಲುವನ್ನು ಪ್ರದರ್ಶಿಸಿದೆ ಎಂದು ಎಐಡಿಡಬ್ಲ್ಯೂಎ ಸಂಸ್ಥೆಯ ಮಹಾ ನಿರ್ದೇಶಕರಿಗೆ ನೀಡಿದ ಮನವಿಯೊಂದರಲ್ಲಿ ಹೇಳಿದೆ. "ನಿಮ್ಮ ಕಾರ್ಯಕ್ರಮ ಪಟ್ಟಿ ಮಹಿಳೆಯರ ಆರೋಗ್ಯಕ್ಕಿಂತ ಬಹಳ ದೂರದಲ್ಲಿರುವಂತೆ ಕಾಣುತ್ತದೆ. ಸಂಶೋಧನೆಯಲ್ಲಿ ನೀವು ತಳೆದಿರುವ ನಿಲುವನ್ನು ನಾವು ಖಂಡಿಸುತ್ತೇವೆ. ಅದು ಅನೈತಿಕ, ಅಮಾನವೀಯ ಹಾಗೂ ಹತ್ಯೆಗೆ ಸಮಾನವಾದದ್ದು ...... ಗರ್ಭಕೋಶ ಕ್ಯಾನ್ಸರ್‌ಗೆ ಸಂಬಂಧಪಟ್ಟ ಯೋಜನೆಯಲ್ಲಿ ಹೊಣೆಗಾರರಾದವರಿಗೆ ಶಿಕ್ಷೆ ವಿಧಿಸಬೇಕು, ಅದರಿಂದ ತೊಂದರೆಗೊಳಗಾದವರಿಗೆ, ಪರಿಹಾರ ನೀಡಬೇಕು ಎಂದು ನಾವು ಆಗ್ರಹ ಪಡಿಸುತ್ತೇವೆ" ಎಂದು ಈ ಮನವಿ ಹೇಳಿದೆ.

ಈ ಬಗ್ಗೆ ನೀಡಿರುವ ಪತ್ರಿಕಾ ಹೇಳಿಕೆಯಲ್ಲಿ ಎಐಡಿಡಬ್ಲ್ಯೂಎ ಮುಂದುವರೆದು 'ಈ ಸಂಸ್ಥೆಗೆ ಬಹಳ ಸಮಯದವರೆಗೆ ಒಬ್ಬ ಮಹಾನಿರ್ದೇಶಕರಿರಲಿಲ್ಲ ಎಂಬುದು ಈ ಸಂಸ್ಥೆಯ ಸ್ಥಿತಿಗೊಂದು ಸಂಕೇತ. ಪ್ರಸ್ತುತ ಕಾರ್ಯನಿರ್ವಾಹಕ ನಿರ್ದೇಶಕರಾಗಿರುವ ಡಾ|| ಎಸ್.ಪಿ. ಅಗರ್‌ವಾಲ್ ತಾನು ಕಾರ್ಯನಿರ್ವಾಹಕ ಮಹಾನಿರ್ದೇಶಕನೇ ಅಲ್ಲ ಎಂದು ಎಐಡಿಡಬ್ಲ್ಯೂಎ ಗೆ ತಿಳಿಸಿದರು. ಈ ಸಂಸ್ಥೆಯಲ್ಲಿ ನಡೆಯುತ್ತಿರುವುದಕ್ಕೆ ಹೊಣೆಗಾರರು ಯಾರು? ಆರೋಗ್ಯ ಮಂತ್ರಿಗಳು ಮತ್ತು ಉಚ್ಚ ಅಧಿಕಾರಿಗಳು ಮಾನವ ಹಕ್ಕುಗಳ ಈ ನಗ್ನ ಉಲ್ಲಂಘನೆಯ ಬಗ್ಗೆ ತಳೆದಿರುವ ಕಠೋರ ಮೌನ ನಾಚಿಕೇಗೇಡಿನದ್ದು" ಎಂದು ಖಂಡಿಸಿದೆ.

(ಐಎನ್‌ಎನ್)

ವಾರದ ವ್ಯಂಗ್ಯಚಿತ್ರ

'ದಿ ಹಿಂದು'ನಲ್ಲಿ ಸುರೇಂದ್ರನ್



ಅಣಕ

ಶರತ್ ಚಂದ್ರ

ಕೃಷ್ಣಲಾಲನ ಲೀಲೆಗಳು

ಚುನಾವಣೆ ಬಿಸಿ ಏರುತ್ತಿದೆ. ಏನಾದರೂ ಬಿಸಿಬಿಸಿ ವಿಶೇಷ ಸುದ್ದಿ ಇದ್ದರೆ ವರದಿ ಮಾಡಪ್ಪ ಅಂತ ನಮ್ಮ ವಿಶೇಷ ವರದಿಗಾರ ನಕ್ಷತ್ರಕನಿಗೆ ಹೇಳಿದರೆ, ಈ ಕೆಳಗಿನ ವರದಿ ಕಳಿಸಿದ್ದಾನೆ. ಇಂತಹ ವರದಿಗಾರರನ್ನು ಕಟ್ಟಿಕೊಂಡು ಹೇಗಪ್ಪಾ ಈ ಚುನಾವಣೆಯ ಸಮಯದಲ್ಲಿ ಪೇಪರು ತರುವುದು! ಪ್ರಳಯ ಅಂತ ಪುಕಾರು ಹಬ್ಬಿಸಿ, ಪೇಪರಲ್ಲಿ ದುಡ್ಡು ಮಾಡೋಣ ಅಂದ್ರೆ ನಮ್ಮ ಸಂಪಾದಕ್ರಂತೂ ಸುತಾರಂ ಒಪ್ಪಲ್ಲ. ಚುನಾವಣೆ ಸಮಯದಲ್ಲಿ ಏನಾದರೂ ಸ್ಕೂಪ್‌ಗೆ 'ಸ್ಕೋಪು' ಇದ್ಯಾ ಅಂದ್ರೆ ಅದಕ್ಕೂ ನಕ್ಷತ್ರಕನಿಂದ ಕಲ್ಲು. ನಕ್ಷತ್ರಕನ ವರದಿ ಓದಿ.

ಈಗ ಚುನಾವಣೆಯ ಸಮಯದಲ್ಲಿ ಏರ್‌ಪೋರ್ಟ್‌ನಲ್ಲಿ ಅತ್ತಿತ್ತ ಓಡಾಡಿದರೆ ಭಾರಿ ನ್ಯೂಸ್ ಪಿಕ್‌ಅಪ್ ಮಾಡ್ಬಹುದು ಅಂತ ಅಲ್ಲೇ ಹೋದೆ. ಅಲ್ಲಿ ಒಂದು ಸಂಭಾಷಣೆ ಕೇಳಿದೆ. ಬೊಂಬಾಟಾಗಿತ್ತು. ಅವರು ಹಿಂದಿಯಲ್ಲಿ ಮಾತಾಡ್ತಿದ್ರು. ಕನ್ನಡಕ್ಕೆ ಭಾಷಾಂತರಿಸಿ ಕೊಟ್ಟಿದ್ದೇನೆ. ಓದಿ ಮಜಾ ತಕ್ಕೊಳ್ಳಿ.

'ಅರೆ! ನಿಮ್ಮನ್ನು ನಿನ್ನೆ ಚೆನ್ನೈನಲ್ಲಿ ನೋಡಿದೆ. ಇವತ್ತು ಬೆಂಗಳೂರಿನಲ್ಲಿದ್ದೀರಿ. ಆಗಲೇ ಎಲ್ಲೋ ಹೊರಟಂತಿದೆ. ಏನು ಬಿಸಿನೆಸ್ ಜೋರಾಗಿ ನಡೀತಿದೆ ಅಂತ ಕಾಣ್ತದೆ."

"ಬಿಸಿನೆಸ್ ಅಲ್ಲ ಸಾರ್. ಸ್ವಲ್ಪ 'ಎಕ್ಸ್‌ಟ್ರಾ ಕರಿಕುಲರ್ ... ಹಾ....ಹಾ..'

''ಏನ್ಸಾರ್ ಹಾಗಂದ್ರೆ, ಭಾರಿ ಮೂಡ್‌ನಲ್ಲಿ ಇರೋ ಹಾಗಿದೆ."

"ಚೆನ್ನೈನಲ್ಲಿ ಒಂದು ಹುಡುಗಿಗೆ ಬಹಳ ದಿನದಿಂದ ಡವ್ ಹೊಡಿತಿದ್ದೆ. ನಿನ್ನೆ ಬಲೆಗೆ ಬಿದ್ಲು. ಭಾರಿ ಚೂಟಿ ಹೆಣ್ಣು. ಘಾಟಿ ಹೆಣ್ಣು. ಅಂತೋಳು ಬಲೆಗೆ ಬಿದ್ಲಲ್ಲ ಅಂತ ಭಾರಿ ಖುಷಿಯಲ್ಲಿದ್ದೀನಿ. ನಿಮ್ಮಂಥಾ ಸ್ನೇಹಿತರ ಹತ್ರ ನನ್ನ ಸಾಹಸ ಹೇಳ್ಕೊಂಡ್ರೆ ಇನ್ನೂ ಮಜಾ ಏರುತ್ತೆ"

"ಏನ್ಸಾರ್ ನೀವು ಹೀಂಗದ್ಬುಟ್ರಿ. ಅದು ಸರಿ ಬೆಂಗಳೂರಿಗೆ ಇವತ್ತೆ ಬಂದು ಇವತ್ತೆ ಹೊರಟಿದ್ದೀರಿ"

"ಇಲ್ಲೂ ಒಬ್ಳು ಹುಡ್ಗಿ ಕೇಸೆ. ಈ ಹುಡ್ಗಿನೂ ಘಾಟಿನೇ. ಬಹಳ ದಿನದಿಂದ ನನಗೇ ಡವ್..... ಹೊಡಿತಿದ್ದಾಳೆ. ನಾನೇ ತೀರಾ ಸಲುಗೆ ಕೊಟ್ಟಿರಲಿಲ್ಲ"

"ಮತ್ತೆ ಇದ್ದಕ್ಕಿದ್ದ ಹಾಗೆ ಏನಾಯ್ತು"

"ಏನಿಲ್ಲ ನಂಗೆ ಮೊದಲಿಂದ ದಕ್ಷಿಣಾದ ಹುಡ್ಗಿರು ಅಂದ್ರೆ ಒಂಥರಾ ಇಷ್ಟ. ಚೆನ್ನೈನಲ್ಲಿ ಸಕ್ಸಸ್ ನಂತ್ರ, ಇವಳನ್ನೂ ನೋಡೇ ಬಿಡೋಣ ಅಂತ ಬಂದೆ."

"ಖನ್ಸಾರ್ ಹುಡ್ಗಿ ಹೆಸ್ರು ?"

"ನಿಮ್ಗೂ ಹೆಸ್ರು ಗೊತ್ತಿರ್ಬೇಕು ಹೆಸ್ರು ಲೋಕಮ್ಮ ಅಂತ"

"ಲೋಕಮ್ಮನ ಹತ್ರಾನೂ ಸಕ್ಸಸ್ಸಾ.....ಹೇಗೆ?

"ಇಲ್ಲಾ ಸಾರ್, ಲೋಕಮ್ಮ ಎಲ್ಲೋ ಹೋಗಿದ್ದಾಳಂತೆ. ಅವಳದ್ದೇನೂ ಪ್ರಾಬ್ಲಮ್ ಇಲ್ಲಾ ಸಾರ್. ಮೈಮೇಲೆ ಬೀಳ್ತಾ ಇರ್ತಾಳೆ. ಸ್ವಲ್ಪ ಸಲುಗೆ ಕೊಟ್ರಾಯ್ತು. ಹೋಗುವಾಗ ಮೆಸೇಜ್ ಬಿಟ್ಟು ಹೋಗಿದ್ದಾಳೆ. ಬೇಗ ಸಿಗ್ತೀನಿ ಅಂತ."

"ಸರಿಯಪ್ಪ! ಅಷ್ಟು ಗಡಿಬಿಡಿಯಲ್ಲಿ ಎಲ್ಲಿಗೊರಟ್ರಿ?"

"ಕಲ್ಕತ್ತಾಕ್ಕೆ"

"ಅದೇನು ? ನಿಮ್ಮೂರು ಡೆಲ್ಲಿಗೆ ಹೋಗೋದು ಬಿಟ್ಟು"

"ಅಲ್ಲೂ ಒಂದು ಹುಡ್ಗಿಗೆ ಕಲ್ಕತ್ತಾಕ್ಕೆ ಹೋದಾಗಲೆಲ್ಲ ಡವ್ ಹೊಡಿತಿದ್ದೆ. ಈಗ ಅವಳೇ ಹೇಳಿ ಕಳ್ಸಿದ್ದಾಳೆ."

"ಏನ್ಸಾರ್, ಈಗ ನಿಮ್ಮ ಫುಲ್ ಬಿಸಿನೆಸ್‌ದೇ ಅದಂಗಿದೆ. ನಂಗೂ ಸ್ವಲ್ಪ ಈ ಹುಡ್ಗಿರನ್ನ ಬಲೆಗೆ ಹಾಕ್ಕೊಳ್ಳೋ ಗುಟ್ಟು ಹೇಳ್ಕೊಡಿ ಸಾರ್. ಆ ಹುಡ್ಗಿ ಹೆಸ್ರೇನು ಸಾರ್."

'ಅಯ್ಯೋ ! ಬಂಗಾಳಿ ಹುಡ್ಗಿರ ಹೆಸ್ರು ಹೇಳ್ಬೇಕಾದ್ರೆ ನಾಲ್ಗೆ ಭಾಳ ತಿರ್‍ಗಿಸ್ಬೇಕು. ಹುಡ್ಗಿ ಹೆಸ್ರು ತೃಣಮೂಲ ಬ್ಯಾನರ್ಜಿ ಅಂತ. ಹಾಗೆ ನೋಡಿದ್ರೆ, ಅವಳೇನು ಹುಡ್ಗಿಯಲ್ಲ. ಮದ್ವೆಯಾದ ಹೆಣ್ಣು ಹೆಂಗಸು. ಗಂಡನ ಜೊತೆಗೆ ಅವಳಿಗೆ ಅಷ್ಟಕ್ಕಷ್ಟೆ. ದಿನಾ ಜಗಳ. ಆದ್ರಿಂದ ನಾನು ಅಡ್ಜಸ್ಟ್ ಮಾಡಕ್ಕೆ ಶುರು ಮಾಡಿದ್ದು."

"ಏನ್ಸಾರ್? ಹೇಗಿದ್ದವ್ರು ಹೆಂಗಾಗಿ ಬಿಟ್ರಿ. ಬೆಳಗಿಂದ ರಾತ್ರಿವರೆಗೆ ಶ್ರೀ ರಾಮನಾಮ ಹೇಳ್ತಾ ಶ್ರೀರಾಮನ ಥರ ಏಕಪತ್ನಿವ್ರತಸ್ಥರಾಗಿದ್ದವ್ರು. ಮುಸ್ಲಿಮರಿಗೆ ನಾಲ್ಕು ಹೆಂಡ್ತಿ ಇರ್ತ್ಯಾದ್ದು ಅಂತಿದ್ದವ್ರು. ನಿಮ್ಮ ಹೆಂಡ್ತಿ ಹೆಸ್ರು ಶಿವಮ್ಮ ಅಲ್ವೇ.. ಪಾಪ ಅವಳು ಮುಂಬಯಿಯಲ್ಲೆ ಇರ್‍ತಿನಿ ಅಂದ್ರೂ; ದಿಲ್ಲಿಯಿಂದ ಓಡಾಡ್ತಿದ್ರಿ. ಏನಾಯ್ತು ನಿಮ್ಗೆ?

"ನನ್ನ ಹೆಸ್ರು ಏನು ಹೇಳಿ"

ಕೃಷ್ಣಲಾಲ ಅಂತಲ್ವ. ಯಾಕೆ ಹೀಗೆ ಕೇಳ್ತಿರಲ್ಲಾ?

"ನೋಡ್ರಿ ಕೃಷ್ಣಗೆ ಹದಿನಾರು ಸಾವಿರ ಹುಡ್ಗೀರಿದ್ರಂತೆ. ನನ್ಗೆ ಹದಿನಾರಾದ್ರು ಬೇಡ್ವ. ರಾಜ್ಯಕ್ಕೊಂದು ಸಾರ್. ರಾಷ್ಟ್ರೀಯ ಐಕ್ಯತೆ ಸಾರ್. ರಾಮನಾಮ ಬಾಯೊಳಗೆ...... ಕೃಷ್ಣಲೀಲೆ ಮೈಯೊಳಗೆ ಹಾ...ಹಾ......ಹಾ........

''ಆದ್ರೂ ಯಾಕೆ ಸಾರ್? ಹಿಂಗಾಗೋಗ್ಬಿಟ್ರಿ"

"ಏನಿಲ್ಲ ಒಂದು ಪಾರ್ಟಿಲಿ ಎಲ್ಲಾ ಬಿಸಿನೆಸ್ ಎದುರಾಳಿಗಳ ಮುಂದೆ ನಮ್ಮ ಸೊಸೈಟಿ ಪ್ರೆಸಿಡೆಂಟ್ ನನ್ನ ಗೇಲಿ ಮಾಡ್ಬಿಟ್ರು. ಏನ್ರಿ ಬಿಸಿನೆಸ್ ಮಾಡ್ತೀರಾ ದೇಶದಲೆಲ್ಲಾ ಬಿಸಿನೆಸ್ ಮಾಡ್ತೀನಿ ಅಂತೀರಿ, ಒಂದೂಕಡೆ ಹುಡ್ಗಿಗೆ ಅಡ್ಜಸ್ಟ್ ಮಾಡಿಲ್ಲ ಅಂತ"

"ಹಂಗಾದ್ರೆ, ಎಲ್ಲಾ ರಾಜ್ಯದ... ಒಂದೊಂದು ಅಡ್ಜಸ್ಟ್ ಮಾಡಿದ್ದೀರಾ ಅಷ್ಟೆ"

"ಚಂಡೀಗಢದಲ್ಲಿ, ಪಾಟ್ನಾದಲ್ಲಿ ಆಗಲೇ ಅಡ್ಜಸ್ಟ್ ಮಾಡಿದ್ದೀನಿ. ಭುವನೇಶ್ವರ್‌ನಲ್ಲಿ, ಹೈದರಾಬಾದಿನಲ್ಲೂ ಡವ್ ಹೊಡಿತಾ ಇದ್ದೀನಿ"

"ಹೆಂಗೆ ಇಷ್ಟೆಲ್ಲಾ ಹುಡ್ಗಿರ್‍ನ ನಿಭಾಯಿಸ್ತೀರಾ ನಿಮಗೆ ಹಿಂದಿ ಬಿಟ್ರೆ ಬೇರೆ ಭಾಷೆ ಬರಲ್ಲ"

''ಅಯ್ಯೋ ಅವರಿಗೆಲ್ಲಾ ಪಿಕ್ಚರ್ ಟಿ.ವಿ.ನೋಡಿ ಹಿಂದಿ ಬರುತ್ತೆ. ಅದೇನೂ ಪ್ರಾಬ್ಲಮ್ಮೆ ಇಲ್ಲ. ಹಿಂದಿ ಹುಡ್ಗಿರನ್ನೇ ನಿಭಾಯಿಸೋದೇ ಕಷ್ಟ ಸಾರ್. ಲಕ್ನೋದಲ್ಲಿ ಒಬ್ಳು ಹಿಂದಿ ಹುಡ್ಗಿನ್ನ ಅಡ್ಜಸ್ಟ್ ಮಾಡಿದ್ದೆ. ಮಾಯಾಬಾಯಿ ಅಂತ. ನನ್ಗೆ ಕೈಕೊಡೋಕ್ಕೆ ನೋಡಿದ್ಲು. ಅದ್ಕಿಂತ ಮೊದ್ಲೆ ನಾನೇ ಕೈಕೊಟ್ಟೆ. ನಂಗೆ ಕಲ್ಕತ್ತ ಫ್ಲೈಟಿಗೆ ಲೇಟಾಯ್ತು" ಅಂತ ಓಡಿ ಹೋದ್ರು.

ಇತ್ತ ಕೃಷ್ಣಲಾಲರ ಹತ್ರ ಮಾತನಾಡುತ್ತಿದ್ದ ಯಜಮಾನ್ರು ಅತ್ತಿತ್ತ ನೋಡುತ್ತಿರಲಾಗಿ ಇನ್ನೊಬ್ಬ ಯಜಮಾನ್ರು ಅವರನ್ನು ನೋಡಿದ ಕೂಡ್ಲೆ ಓಡಿ ಬಂದು ಬಡಬಡಿಸ ಹತ್ತಿದರು.

"ಏನ್ಸಾರ್, ನೀವು ಕೃಷ್ಣಲಾಲನ್ನ ನೋಡಿದ್ರಾ. ರ್‍ಯಾಸ್ಕಲ್ ಸಿಕ್ಕಿದ್ರೇ ಇಲ್ಲೇ ಇಲ್ಲೆ ಹುಗಿದು ಬಿಡ್ತಿನಿ"

"ಯಾಕೆ ಸೀತಾರಾಮಯ್ಯನವರೆ? ಯಾಕೆ ಅಷ್ಟು ಕೋಪದಲ್ಲಿದ್ದೀರಾ?"

''ಬಿಸಿನೆಸ್ ಎದುರಾಳಿ ಅಂತ ಪೈಪೋಟಿಗೂ ನೀತಿ ನಿಯಮ ಬೇಡ್ವೇ?

"ಯಾಕ್ಸಾರ್? ನಿಮ್ಮ ಬಿಸಿನೆಸ್ ಕಸಿದು ಕೊಂಡ್ರಾ ಕೃಷ್ಣಲಾಲರು"

"ಇಲ್ಲಪ್ಪಾ, ನನ್ನ ಬಹಳ ವರ್ಷಗಳ ಗರ್ಲ್‌ಫ್ರೆಂಡ್ ಜಯಮ್ಮಾಳ್ ಅಂತ ಅವ್ಳಿಗೆ ಈತ ಡವ್ ಹೊಡೆದು ಕಸಿದು ಕೊಳ್ಳೋದ?

"ಭಾಳ ಅನ್ಯಾಯ ಸಾರ್!"

" ನೀವು ನೋಡಿದ್ರಾ. ಇಲ್ಲೇ ಬೆಂಗಳೂರಿಗೆ ಬಂದಿದ್ದ ಅಂತೆ"

"ಹೌದು ಸಾರ್, ಈಗ್ತಾನೆ ಕಲ್ಕತ್ತಾ ಫ್ಲೈಟ್ ಹತ್ತಿದ್ರು. ಯಾರೋ ತೃಣಮೂಲಾ ಬ್ಯಾನರ್ಜಿ ಅವರ್‍ನ ನೋಡ್ಬೇಕು. ಅಂತಿದ್ರು."

'ಅಯ್ಯೋ!! ನಾನು ಮುಳ್ಗಿ ಹೋದೆ. ನನ್ಹೆಂಡ್ತಿಗೇ ಡವ್ ಹಾಕ್ತಾನಲ್ಲಪ್ಪ"

ಎನ್ನುತ್ತಾ ಸೀತಾರಾಮಯ್ಯನವರು ಓಡಿದರು-ಕಲ್ಕತ್ತಾಗೆ ಇನ್ನೊಂದು ಫ್ಲೈಟ್ ಇದ್ಯಾ ವಿಚಾರಿಸಲು.

ಹೇಗಿದೆ ಕೃಷ್ಣಲಾಲನ ಲೀಲೆಗಳು ಮತ್ತು ಸೀತಾರಾಮಯ್ಯನ ಗೋಳು.

ರಾಜಕೀಯದ ಬಗ್ಗೆ ವರದಿಗಿಂತ ಬೊಂಬಾಟಗಿಲ್ವೆ.

KRNM/BGS-405 MAG (2) PRB DECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ. ರಾಮಚಂದ್ರರಾವ್
ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು-9 ಮುದ್ರಣ: ಕಂಠೀರವ ಆಫ್‌ಸೆಟ್, ನಂ.6, 7ನೇ ಮುಖ್ಯರಸ್ತೆ, ಎಸ್.ಆರ್.ನಗರ, ಬೆಂ.27